ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 7 ಭಾನುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 44 | ಸಂಚಿಕೆ: 21 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಕೃಷ್ಣರಾಜ ಕ್ಷೇತ್ರದಲ್ಲಿ ಬಿಜೆಪಿ ಯುವ ಮೋರ್ಚಾ ಸೃಷ್ಟಿಸಿದ ಕೇಸರಿ ಅಲೆ



ಶನಿವಾರ ಕೃಷ್ಣರಾಜ ಕ್ಷೇತ್ರದಲ್ಲಿ ಬಿಜೆಪಿಯೇ ಭರವಸೆ ಘೋಷಣೆಗಳೊಂದಿಗೆ ಬೃಹತ್ ವಾಕಥಾನ್ ರ್‍ಯಾಲಿಯನ್ನು ಕೆ.ಆರ್.ಕ್ಷೇತ್ರದ ಅಭ್ಯರ್ಥಿ, ಟಿ.ಎಸ್.ಶ್ರೀವತ್ಸ ಜೀ ಅವರ ಪರವಾಗಿ ನಡೆಸಿ ಕ್ಷೇತ್ರದಾದ್ಯಂತ ಕೇಸರಿ ಅಲೆ ಸೃಷ್ಟಿಸಲಾಯಿತು. ಭೂತಾಳ ಮೈದಾನದಿಂದ ಪ್ರಾರಂಭವಾದ ಐದು ಕಿಲೋಮೀಟರ್ ಈ ವಾಕಥಾನ್‌ನಲ್ಲಿ ದೆಹಲಿ ಬಿಜೆಪಿ ಉಪಾಧ್ಯಕ್ಷರಾದ ರಾಜೀವ್ ಬಬ್ಬರ್, ಮುಡಾ ಅಧ್ಯಕ್ಷರಾದ ಯಶಸ್ವಿ ಸೋಮಶೇಖರ್, ಬ್ರಾಹ್ಮಣ ಸಮಾಜದ ಜಿಲ್ಲಾಧ್ಯಕ್ಷರಾದ ಡಿ.ಟಿ.ಪ್ರಕಾಶ್, ಕೆ.ಆರ್ ಬಿಜೆಪಿ ಉಪಾಧ್ಯಕ್ಷರಾದ ಸಂತೋಷ್ ಶಂಭು, ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷರಾದ ಶ್ರೀ ಜಯಶಂಕರ್, ಯುವ ಮೋರ್ಚಾ ಉಸ್ತುವಾರಿಗಳಾದ ರಮೇಶ್, ಆಶ್ರಯ ಸಮಿತಿಯ ಸದಸ್ಯರಾದ ಹೇಮಂತ್ ಕುಮಾರ್ ಮನು ಶೈವ್ ಅಧ್ಯಕ್ಷರು, ಬಿಜೆಪಿ ಯುವ ಮೋರ್ಚಾ ಕೃಷ್ಣರಾಜ ಕ್ಷೇತ್ರ, ಮೈಸೂರು ಹಾಗೂ ಕೆ.ಆರ್.ಯುವ ಮೋರ್ಚಾದ ಎಲ್ಲಾ ಪದಾಧಿಕಾರಿಗಳು, ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.









ವರುಣ ಮನೆ ಮಗ ಸಿದ್ದರಾಮಯ್ಯರನ್ನು ಗೆಲ್ಲಿಸಿ

ಲಿಂಗಾಯತ ಮುಖಂಡರ ಸಭೆಯಲ್ಲಿ ಮಾಜಿ ಸಚಿವ ಎಂ.ಬಿ.ಪಾಟೀಲ್ ಮನವಿ



ಸಿದ್ದರಾಮಯ್ಯರಿಂದ ವರುಣ ಸಮಗ್ರವಾಗಿ ಅಭಿವೃದ್ಧಿ ಕಂಡಿದೆ

ವರುಣ ಕ್ಷೇತ್ರವನ್ನು ಸಿದ್ದರಾಮಯ್ಯ ಸಮಗ್ರವಾಗಿ ಅಭಿವೃದ್ಧಿ ಮಾಡಿದ್ದಾರೆ. ವರುಣ ನಾಲೆಯಲ್ಲಿ ಇಂದು ನೀರು ಹರಿದು, ಈ ಭಾಗದಲ್ಲಿ ನೀರಾವರಿ ಭೂಮಿಯಾಗಲು ಪ್ರಮುಖ ಕಾರಣ ಸಿದ್ದರಾಮಯ್ಯ ಎನ್ನುವುದು ಕ್ಷೇತ್ರದ ಜನರಿಗೆ ತಿಳಿದಿದೆ. ಯಾರೋ ಬಂದು ಅಪಪ್ರಚಾರ ಮಾಡಿದರೆ, ಅದಕ್ಕೆ ಸೊಪ್ಪು ಹಾಕಲು ವರುಣ ಕ್ಷೇತ್ರ ಜನ ದಡ್ಡರಲ್ಲ. ಅನ್ನಭಾಗ್ಯ, ಕ್ಷೀರಭಾಗ್ಯ, ರೈತರ ಸಾಲ ಮನ್ನಾ ಸೇರಿದಂತೆ ಹಲವು ಜನಪರ ಕಾರ್ಯಕ್ರಮಗಳ ಸೌಲಭ್ಯ ಎಲ್ಲಾ ವರ್ಗದ ಫಲಾನುಭವಿಗಳಿಗೂ ದೊರೆತಿದೆ. ಕಾಂಗ್ರೆಸ್ ನೀಡಿರುವ ಗ್ಯಾರಂಟಿ ಯೋಜನೆಗಳು ಎಲ್ಲಾ ವರ್ಗ, ಜಾತಿ, ಧರ್ಮದ ಜನರಿಗೆ ಸಿಗುತ್ತದೆ. ಬೆಲೆ ಏರಿಕೆಯಿಂದ ತತ್ತರಿಸಿರುವ ಜನತೆಗೆ ಕಾಂಗ್ರೆಸ್ ಸರ್ಕಾರ ಕಾರ್ಯಕ್ರಮಗಳ ಮೂಲಕ ಕಷ್ಟ ನಿವಾರಿಸಲು ಬದ್ಧವಾಗಿದೆ ಎಂದು ಎಂ.ಬಿ.ಪಾಟೀಲ್ ಹೇಳಿದರು.

ಬಿಜೆಪಿ ಸರ್ಕಾರ ಕಳೆದ 4 ವರ್ಷ ರಾಜ್ಯದಲ್ಲಿ ಬಡವರಿಗೆ 1 ಮನೆಯನ್ನೂ ಮಂಜೂರು ಮಾಡಿಲ್ಲ, ಆದರೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪ್ರತಿ ವರ್ಷ 3 ಲಕ್ಷ ಮನೆಯಂತೆ 5 ವರ್ಷದಲ್ಲಿ 15 ಲಕ್ಷ ಮನೆ ನಿರ್ಮಿಸಲಾಗಿದೆ. ಅಭಿವೃದ್ಧಿಯ ಬಗ್ಗೆ ಮಾತನಾಡುವ ವಸತಿ ಸಚಿವ ವಿ.ಸೋಮಣ್ಣ ಯಾಕೆ ಮನೆ ನಿರ್ಮಿಸಲು ವಿಫಲರಾದರು? ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯ ಅವರನ್ನು ಸೋಲಿಸಲೇಬೇಕೆಂದು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್‌ಸಿಂಗ್, ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಸೇರಿದಂತೆ ಹಲವರು ರಾಜ್ಯದಲ್ಲೇ ಬೀಡುಬಿಟ್ಟಿದ್ದಾರೆ. ಬಿಜೆಪಿಗರು ನಡೆಸುತ್ತಿರುವ ಕುತಂತ್ರವನ್ನು ವೀರಶೈವ ಲಿಂಗಾಯತ ಸಮುದಾಯ ಅರಿತುಕೊಳ್ಳಬೇಕು. ಈ ಬಾರಿ ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯನವರಿಗೆ ಅತಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದರು.

ಮೈಸೂರು, ಮೇ 6(ಎಂಟಿವೈ)– ಜಾತಿ, ಧರ್ಮದ ತಾರತಮ್ಯ ಮಾಡದೇ ಬಸವಣ್ಣನವರ ಆಶಯದೊಂದಿಗೆ ಸೇವೆ ಮಾಡುತ್ತಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ವೀರಶೈವ ಲಿಂಗಾಯತ ಸಮುದಾಯ ಬೆಂಬಲ ನೀಡಿ ಗೆಲ್ಲಿಸಬೇಕು ಎಂದು ಮಾಜಿ ಸಚಿವ ಎಂ.ಬಿ.ಪಾಟೀಲ್ ಮನವಿ ಮಾಡಿದ್ದಾರೆ.

ವರುಣ ಕ್ಷೇತ್ರದ ಹದಿನಾರು ಗ್ರಾಮದಲ್ಲಿ ಶನಿವಾರ ನಡೆದ ವೀರಶೈವ ಲಿಂಗಾಯತ ಮುಖಂಡರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ಕಣ್ಣೀರು ಹಾಕಿಸಿದ ಬಿಜೆಪಿಗರು, ಮಾಜಿ ಸಿಎಂ ಜಗದೀಶ್ ಶೆಟ್ಟರ್, ಮಾಜಿ ಡಿಸಿಎಂ ಲಕ್ಷ್ಮಣ್ ಸವದಿಗೆ ಟಿಕೆಟ್ ನೀಡದೇ ಪಕ್ಷ ಬಿಡುವಂತೆ ಮಾಡಿದೆ. ವೀರಶೈವ ಲಿಂಗಾಯತ ಸಮುದಾಯಕ್ಕೆ ಅಪಮಾನ ಮಾಡಿದ್ದು ಬಿಜೆಪಿಯೇ ಆಗಿದೆ. ಆದರೆ, ತನ್ನ ತಪ್ಪನ್ನು ಮುಚ್ಚಿ ಹಾಕಲು ಸಿದ್ದರಾಮಯ್ಯ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದೆ. ಸುಳ್ಳು ವದಂತಿ ಹಬ್ಬಿಸಿ, ವೀರಶೈವ ಲಿಂಗಾಯತರನ್ನು ಎತ್ತಿಕಟ್ಟುವ ಮೂಲಕ ರಾಜಕೀಯ ಲಾಭ ಮಾಡಿಕೊಳ್ಳಲು ಮುಂದಾಗಿದ್ದಾರೆ. ಬಿಜೆಪಿಗರ ಈ ಸಂಚನ್ನು ಜನ ಅರಿತುಕೊಳ್ಳಬೇಕು. ಗಾಳಿ ಸುದ್ದಿ, ವದಂತಿಗೆ ಕಿವಿಗೊಡದೆ ಬಸವಣ್ಣನವರ ಹಾದಿಯಲ್ಲಿ ಆಡಳಿತ ನಡೆಸಿ, ಬಡವರು, ರೈತರ ಹಿತಕಾಪಾಡಿರುವ ಸಿದ್ದರಾಮಯ್ಯ ಬೆಂಬಲಕ್ಕೆ ನಿಲ್ಲಬೇಕು ಎಂದು ಕೋರಿದರು.

2013ರಲ್ಲಿ ಸಿದ್ದರಾಮಯ್ಯ ಅವರು ಬಸವಣ್ಣನವರು ಹುಟ್ಟಿದ ದಿನದಂದೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಬಸವ ತತ್ವದ ಮೇಲೆ ಸಿದ್ದರಾಮಯ್ಯ ಅಪಾರವಾದ ನಂಬಿಕೆ ಇಟ್ಟಿದ್ದಾರೆ. ವೀರಶೈವ ಲಿಂಗಾಯತ ಸಮುದಾಯಕ್ಕೆ ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ ಸಾಕಷ್ಟು ಅನುದಾನ ನೀಡಿದ್ದಾರೆ. ಬಿಜೆಪಿ ನಾಯಕರ ಕುತಂತ್ರಕ್ಕೆ ಮತ್ತೊಬ್ಬ ವೀರಶೈವ ಲಿಂಗಾಯತ ಸಮುದಾಯದ ನಾಯಕ ವಿ.ಸೋಮಣ್ಣ ಬಲಿಯಾಗುತ್ತಿದ್ದಾರೆ. ವಿ.ಸೋಮಣ್ಣ ಅವರಿಗೆ ಚಾಮರಾಜನಗರದ ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಒಂದು ಕಡೆ ಗೆಲ್ಲೋದೆ ಕಷ್ಟ, ಎರಡು ಕಡೆ ನಿಂತಿರುವುದು ಯಾಕೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆ ಮೂಲಕ ನೇರವಾಗಿಯೇ ನೀನು ಸೋಲುತ್ತೀಯ ಕಣಪ್ಪ, ಪುನರ್ ಪರಿಶೀಲಿಸುವಂತೆ ಸಲಹೆಯನ್ನೂ ನೀಡಿದ್ದರು. ಆದರೆ, ಯಡಿಯೂರಪ್ಪ, ಶೆಟ್ಟರ್, ಸವದಿ ಅವರಂತೆ ಸೋಮಣ್ಣ ಅವರನು ಮೂಲೆಗುಂಪು ಮಾಡುವ ಹುನ್ನಾರ ನಡೆಸಲಾಗಿದೆ. ಮುಖಂಡರನ್ನು ರಾಜಕೀಯವಾಗಿ ಮುಗಿಸುವ ಹುನ್ನಾರ ಬಿಜೆಪಿಯದ್ದಾಗಿದೆ ಎಂದು ಕಿಡಿಕಾರಿದರು.

ಮಾಜಿ ಸಚಿವೆ ರಾಣಿ ಸತೀಶ್ ಮಾತನಾಡಿ, ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯಗೆ ಪೂರಕವಾದ ವಾತಾವರಣವಿದೆ. ಜನ ಪ್ರಬುದ್ಧರಾಗಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಸುಳ್ಳು ಆರೋಪ, ವದಂತಿ ಹಬ್ಬಿಸುವುದು ಸಾಮಾನ್ಯ. ಇಂತಹ ಕುತಂತ್ರಕ್ಕೆ ಜನ ಬಲಿಯಾಗುವುದಿಲ್ಲ. ವರುಣ ಕ್ಷೇತ್ರ ಜನತೆ ತಮ್ಮ ಮನೆ ಮಗನಂತೆ 4 ದಶಕಗಳಿಂದಲೂ ಸೇವೆ ಮಾಡಿಕೊಂಡು ಬಂದು ಉನ್ನತ ಸ್ಥಾನ ಅಲಂಕರಿಸಿದ್ದ ಸಿದ್ದರಾಮಯ್ಯಗೆ ಇದು ಕೊನೆ ಚುನಾವಣೆ. ಅವರು ಗೌರವಯುತವಾಗಿ ನಿವೃತ್ತಿಯಾಗಲು ಕ್ಷೇತ್ರದ ಜನರ ಸಹಕಾರ ಅಗತ್ಯ. ಈ ಬಾರಿ ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಿಸಿ, ಸೇವೆ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಚಿತ್ರನಟಿ ಭಾವನಾ ಮಾತನಾಡಿ, ವರುಣ ಕ್ಷೇತ್ರದ ಸುಪುತ್ರರಾಗಿರುವ ಸಿದ್ದರಾಮಯ್ಯ ಹುಟ್ಟಿ, ಬೆಳೆದ ಕ್ಷೇತ್ರವಾಗಿರುವ ವರುಣ ಕ್ಷೇತ್ರದ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ರೈತಾಪಿ ಕುಟುಂಬದಿಂದ ಜನಿಸಿದ ಅವರು, ಬಡವರ ಸಂಕಷ್ಟದ ಬಗ್ಗೆ ಅರಿವಿದೆ. ಅದಕ್ಕಾಗಿಯೇ ಅನ್ನ ಭಾಗ್ಯ ಯೋಜನೆ ಜಾರಿಗೊಳಿಸಿ, ಯಾರೊಬ್ಬರು ಹಸಿವಿನಿಂದ ಬಳಲದಂತೆ ನೋಡಿಕೊಂಡರು. ಬಸವಣ್ಣನವರ ಅನುಯಾಯಿಯಾಗಿ ಆಡಳಿತ ನಡೆಸಿದ್ದಾರೆ. ಅವರಿಗೆ ಎಲ್ಲಾ ವರ್ಗದವರ ಪ್ರೀತಿ, ಆಶೀರ್ವಾದವಿದೆ. ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಲು ಉತ್ಸುಕರಾಗಿದ್ದಾರೆ ಎಂದರು. ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವೀರಶೈವ ಮುಖಂಡ ಹಾಗೂ ಕೆಪಿಸಿಸಿ ಕಾರ್ಯದರ್ಶಿ ಹದಿನಾರು ಗುರುಪಾದಸ್ವಾಮಿ, ವರುಣ ಮಹೇಶ್, ಆಲನಹಳ್ಳಿ ಪುಟ್ಟಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಮುಖಂಡರಾದ ಪಚ್ಚೆ ನಂಜುಂಡಸ್ವಾಮಿ, ಪುಟ್ಟಸ್ವಾಮಿ, ಕೆ.ಎನ್.ನಂಜಪ್ಪ, ಅಭಿ, ಮಂಜುಳಾ ಮಾನಸ, ಧರ್ಮ, ಮಂಜುನಾಥ್, ಮಹದೇವಸ್ವಾಮಿ, ನಂಜಪ್ಪ, ಗ್ರಾ.ಪಂ ಅಧ್ಯಕ್ಷ ಅಭಿ, ಪಾಳ್ಯ ಸುರೇಶ್, ಪಟೇಲ್ ಮಹದೇವಪ್ಪ, ದಾಸನೂರ್ ನಾಗೇಶ್ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರಿನ 44ನೇ ವಾರ್ಡ್ ಬೋಗಾದಿ ಎರಡನೇ ಹಂತ ಹಾಗೂ ಜನತಾನಗರದಲ್ಲಿ ಶಾಸಕ ಜಿ.ಟಿ.ದೇವೇಗೌಡರು ರೋಡ್ ಶೋ ಮುಖಾಂತರ ಮತಯಾಚಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯೆ ಸವಿತಾ ಸುರೇಶ್, ಮುಖಂಡರಾದ ಸುರೇಶ್, ಉಮಾಶಂಕರ್, ಟೆಂಟ್ ಕುಮಾರ್, ಲೋಕೇಶ್ ಹಾಗೂ ನೂರಾರು ಮುಖಂಡರು, ಕಾರ್ಯಕರ್ತರು ಇದ್ದರು.




ಮೈಸೂರು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರು ಶನಿವಾರ ಕ್ಷೇತ್ರ ವ್ಯಾಪ್ತಿಯ ಸುಬ್ಬರಾಯನಕೆರೆ ಸುತ್ತಮುತ್ತ ಅಬ್ಬರದ ಪ್ರಚಾರ ನಡೆಸಿದರು. ಈ ವೇಳೆ ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಮಾಜಿ ಸದಸ್ಯ ಪ್ರಶಾಂತಗೌಡ, ಮುಖಂಡರಾದ ಸುರೇಂದ್ರ, ಹರ್ಷ, ಭರತ್, ಸಚಿನ್, ಅನುಜ್, ಹರೀಶ್, ವಿಷ್ಣು, ಕೆಂಪರಾಜು, ವಿಶ್ವೇಶ್ವರಭಟ್ ಇನ್ನಿತರರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ಅವರು ಶುಕ್ರವಾರ ಸಂಜೆ ದೂರ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಕಾರ್ಯಕರ್ತರು ಬೃಹತ್ ಹಣ್ಣಿನ ಹಾರ ಹಾಕಿ ಆತ್ಮೀಯವಾಗಿ ಅಭಿನಂದಿಸಿದರು.

ಚೆಕ್‌ಪೋಸ್ಟ್ ಸಿಬ್ಬಂದಿಗೆ ಆರೋಗ್ಯ ತಪಾಸಣೆ

ಜಿಲ್ಲಾಡಳಿತ, ಆರೋಗ್ಯ ಇಲಾಖೆಯಿಂದ ಮೊಟ್ಟ ಮೊದಲ ಬಾರಿ ಈ ಕ್ರಮ



ಮೈಸೂರು, ಮೇ 6(ಆರ್‌ಕೆ)– ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಾದ್ಯಂತ ಸ್ಥಾಪಿಸಿರುವ ಪೊಲೀಸ್ ಚೆಕ್‌ಪೋಸ್ಟ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಆರೋಗ್ಯ ತಪಾಸಣೆಗಾಗಿ ಆರೋಗ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳ ಸಂಯುಕ್ತಾಶ್ರಯದಲ್ಲಿ ಇದೇ ಮೊದಲ ಬಾರಿ ಪೊಲೀಸ್ ಚೆಕ್‌ಪೋಸ್ಟ್‌ಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು, ನರ್ಸ್‌ಗಳನ್ನು ನಿಯೋಜಿಸಿ ಪೊಲೀಸ್ ಸಿಬ್ಬಂದಿ, ಸ್ಥಿರ ಕಣ್ಗಾವಲು ತಂಡ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಆರೋಗ್ಯ ತಪಾಸಣೆ ಮಾಡಿ ವೈದ್ಯಕೀಯ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಬೇಸಿಗೆ ಬಿಸಿಲಿನ ತೀವ್ರತೆ ಜಾಸ್ತಿಯಾಗಿರುವುದರಿಂದ ಪೊಲೀಸ್ ಚೆಕ್‌ಪೋಸ್ಟ್‌ಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಡೀ ಹೈಡ್ರೇಷನ್ ಹಾಗೂ ಇನ್ನಿತರ ಸಮಸ್ಯೆಗಳಾಗುತ್ತಿರುವುದನ್ನು ಮನಗಂಡು ಅಲ್ಲಿಗೆ ವೈದ್ಯರ ತಂಡವನ್ನು ನಿಯೋಜಿಸಿ ಆಗಿಂದಾಗ್ಗೆ ಆರೋಗ್ಯ ತಪಾಸಣೆ ನಡೆಸಿ ಉಚಿತವಾಗಿ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ.

ಚುನಾವಣಾ ಪ್ರಕ್ರಿಯೆ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಸಾರ್ವಜನಿಕ ಆಸ್ಪತ್ರೆಗಳ ವೈದ್ಯರು, ನರ್ಸ್‌ಗಳು ಹಾಗೂ ಸಿಬ್ಬಂದಿಗಳು ಕೇಂದ್ರ ಸ್ಥಾನ ಬಿಟ್ಟು ಕದಡದಂತೆ ಹಾಗೂ ಔಷಧಿಗಳನ್ನು ಶೇಖರಿಸಿಟ್ಟುಕೊಳ್ಳುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು. ಹಾಗೂ ಹಾಸಿಗೆಗಳನ್ನು ಕಾಯ್ದಿರಿಸಿಕೊಂಡು ವೈದ್ಯಕೀಯ ಉಪಕರಣಗಳನ್ನು ಸುಸ್ಥಿತಿಯಲ್ಲಿರಿಸಿಕೊಂಡು ಚಿಕಿತ್ಸೆಗೆ ಸರ್ವ ರೀತಿಯಲ್ಲಿ ಸಜ್ಜಾಗಿರುವಂತೆ ನಿರ್ದೇಶನ ನೀಡಿ ಸುತ್ತೋಲೆ ಹೊರಡಿಸಲಾಗಿದೆ. ಅಲ್ಲದೆ, ಮತದಾನದ ದಿನ ಮೇ 10ರಂದು ಜಿಲ್ಲೆಯ ಆರೋಗ್ಯ ಕೇಂದ್ರಗಳ ನರ್ಸ್‌ಗಳನ್ನು ನಿಯೋಜಿಸಲಾಗುವುದು. ಜೊತೆಗೆ ಸ್ಯಾನಿಟೈಸರ್ ಪೂರೈಸಿ ಅಗತ್ಯ ಸುರಕ್ಷಾ ಕ್ರಮ ಕೈಗೊಳ್ಳುವುದಲ್ಲದೇ, ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಲಾಗಿದೆ ಎಂದು ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದರು.

ಮೈಸೂರಿನ ಶೃಂಗೇರಿ ಅಭಿನವ ಶಂಕರಮಠದಲ್ಲಿ 43ನೇ ವರ್ಷದ ಮೂರ್ತಿ ಪ್ರತಿಷ್ಠಾ ಮಹೋತ್ಸವ

ಮೈಸೂರು, ಮೇ 6– ಮೈಸೂರಿನ ಫೋರ್ಟ್ ಮೊಹಲ್ಲಾದಲ್ಲಿರುವ ಶೃಂಗೇರಿ ಅಭಿನವ ಶಂಕರಮಠದಲ್ಲಿ ಮೇ 9ರಿಂದ 11ರವರೆಗೆ 43ನೇ ವರ್ಷದ ಮೂರ್ತಿ ಪ್ರತಿಷ್ಠಾ ಮಹೋತ್ಸವಗಳನ್ನು ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾಗಿದೆ.

ಮೇ 9ರ ಮಂಗಳವಾರ ರುದ್ರಾಭಿಷೇಕ, ಗಣಪತಿ ಹೋಮ, ವಿಶೇಷ ಪೂಜೆ ಅಲಂಕಾರ, ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿನಿಯೋಗವಿರುತ್ತದೆ. ಸಂಜೆ 6.30ಕ್ಕೆ ಶ್ರೇಯಸ್ ಮತ್ತು ತಂಡದವರಿಂದ ಹಾಡುಗಾರಿಕೆ. ಮೇ 10ರಂದು ಶ್ರೀ ಶಾರದಾ ಪರಮೇಶ್ವರಿಗೆ ಪಂಚಸೂಕ್ತಾಭಿಷೇಕ ಮತ್ತು ಹರಿದ್ರಾ ದರ್ಶನ, ವಿಶೇಷ ಅಲಂಕಾರ, ಲಲಿತಾ ಹೋಮ, ಪೂರ್ಣಾಹುತಿ, ಸಂಜೆ 6.30ಕ್ಕೆ ವಿದ್ವಾನ್ ಆರ್.ಕೆ.ಪದ್ಮನಾಭನ್ ಮತ್ತು ತಂಡದವರಿಂದ ವೀಣಾವಾದನ, ಸಂಜೆ 8.00ಕ್ಕೆ ಶಾರದಾ ಪರಮೇಶ್ವರಿ ಉತ್ಸವ. ಮೇ 11ರಂದು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಏಕದಶವಾರ, ರುದ್ರಾಭಿಷೇಕ, ಅಲಂಕಾರ, ಹೋಮ ನಡೆಯುತ್ತದೆ. ಸಂಜೆ 6.30ಕ್ಕೆ ವಿದ್ವಾನ್ ಎನ್.ಶ್ರೀನಾಥ್ ಮತ್ತು ತಂಡದವರಿಂದ ವಿಶೇಷ ಹಾಡುಗಾರಿಕೆಯನ್ನು ಏರ್ಪಡಿಸಲಾಗಿದೆ ಎಂದು ಶಂಕರಮಠದ ಧರ್ಮಾಧಿಕಾರಿ ಹೆಚ್.ರಾಮಚಂದ್ರ ತಿಳಿಸಿದ್ದಾರೆ.

ಪಾರದರ್ಶಕ ರೀತಿ ಮತ ಎಣಿಕೆಗೆ ಸಹಕರಿಸಿ

ಅಧಿಕಾರಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಡಿಸಿ ಡಾ.ರಾಜೇಂದ್ರ ಸಲಹೆ



ಮೈಸೂರು, ಮೇ 6– ಕರ್ನಾಟಕ ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯ ಮೇ 13ರಂದು ನಡೆಯಲಿದೆ. ಈ ಸಂಬಂಧ ಪಾರದರ್ಶಕವಾಗಿ ಕರ್ತವ್ಯ ನಿರ್ವಹಿಸುವ ಮೂಲಕ ಮತ ಎಣಿಕೆ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಶನಿವಾರ ಕಲಾಮಂದಿರದಲ್ಲಿ ಮತ ಎಣಿಕೆ ಕೇಂದ್ರದ ಮೇಲ್ವಿಚಾರಕರು ಹಾಗೂ ಮತ ಎಣಿಕೆ ಸಹಾಯಕರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 'ಮತ ಎಣಿಕೆ ಕಾರ್ಯವನ್ನು ಅವಸರದಿಂದ ಮಾಡದೇ ತಾಳ್ಮೆಯಿಂದ ಹಾಗೂ ಬಹಳ ಎಚ್ಚರಿಕೆಯಿಂದ ಮಾಡಬೇಕು. ಮತದಾನ ಪ್ರಕ್ರಿಯೆ ಕಾರ್ಯ ಉತ್ತಮವಾಗಿ ನೆರವೇರಿಸಿದಂತೆ, ಮತ ಎಣಿಕೆ ಪ್ರಕ್ರಿಯೆಯನ್ನು ಉತ್ತಮ ರೀತಿಯಲ್ಲಿ ನೆರವೇರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಮತ ಎಣಿಕೆ ಸ್ಥಳಕ್ಕೆ ಮೊಬೈಲ್ ತರಬೇಡಿ, ಫಲಿತಾಂಶ ಮುಗಿಯುವವರೆಗೂ ಮತ ಎಣಿಕೆ ಟೇಬಲ್ ಬಿಟ್ಟು ಅನವಶ್ಯಕವಾಗಿ ಓಡಾಡಬಾರದು. ಎಚ್ಚರಿಕೆಯಿಂದ ಮತ ಎಣಿಕೆ ಕಾರ್ಯ ಮಾಡಬೇಕು ಎಂದು ತಿಳಿಸಿದರು.

ಮತ ಎಣಿಕೆ ಕಾರ್ಯ ಸರಳ ಪ್ರಕ್ರಿಯೆಯಾಗಿದ್ದು, ಗೊಂದಲಕ್ಕೆ ಒಳಗಾಗಬೇಡಿ. ಪಾರದರ್ಶಕವಾಗಿ ಕರ್ತವ್ಯ ನಿರ್ವಹಿಸುವ ಮೂಲಕ ಮತ ಎಣಿಕೆ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಬಹಳ ಎಚ್ಚರಿಕೆಯಿಂದ, ಆತ್ಮವಿಶ್ವಾಸದಿಂದ ಕೆಲಸ ನಿರ್ವಹಿಸಬೇಕು. ಏನಾದರೂ ಸಮಸ್ಯೆಗಳು ಇದ್ದರೆ ಸಮಯಪ್ರಜ್ಞೆಯಿಂದ ಸಂಬಂಧಪಟ್ಟ ಚುನಾವಣಾಧಿಕಾರಿಗಳ ಗಮನಕ್ಕೆ ತರಬೇಕು ಎಂದರು. ಅಂಚೆ ಮತ ಪತ್ರಗಳ ಎಣಿಕೆ ಬೆಳಗ್ಗೆ 8 ಗಂಟೆಗೆ ವೀಕ್ಷಕರ ಸಮ್ಮುಖದಲ್ಲಿ ಆರಂಭವಾಗಲಿದ್ದು ನಂತರ ಮತಯಂತ್ರಗಳ ಎಣಿಕೆ ಆರಂಭವಾಗಲಿದೆ. ಈ ಸಂಬಂಧ ಮೇಲ್ವಿಚಾರಕರು, ಮತ ಎಣಿಕೆ ಸಹಾಯಕರು ಚುನಾವಣೆ ಕೆಲಸದ ವಿಷಯವನ್ನು ಸರಿಯಾಗಿ ತಿಳಿದುಕೊಂಡು ಕಾರ್ಯನಿರ್ವಹಿಸಬೇಕು ಎಂದರು. ಸಭೆಯಲ್ಲಿ ಎಡಿಸಿ ಕವಿತಾ ರಾಜಾರಾಂ, ಹಾಗೂ ಚುನಾವಣಾ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಜೆಪಿಗೆ ಈ ಬಾರಿ ಪೌರಕಾರ್ಮಿಕರ ಬೆಂಬಲ



ಮೈಸೂರು,ಮೇ 6(ಜಿಎ)–ಬಿಜೆಪಿ ಸರ್ಕಾರದ ಅವಧಿಯಲ್ಲಿ ಪೌರಕಾರ್ಮಿಕರಿಗೆ ಹೆಚ್ಚು ಅನುಕೂಲಗಳಾಗಿರುವ ಹಿನ್ನೆಲೆಯಲ್ಲಿ ಈ ಬಾರಿ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸಲು ಪೌರಕಾರ್ಮಿಕರು ನಿರ್ಧರಿಸಿದ್ದಾರೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಮೇಲುಸ್ತುವಾರಿ ಸದಸ್ಯ ಎಂ.ವಿ.ವೆಂಕಟೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 30 ವರ್ಷಗಳಿಂದ ಪೌರಕಾರ್ಮಿಕರ ಅನೇಕ ಬೇಡಿಕೆಗಳನ್ನು ಈಡೇರಿಸುವಂತೆ ಹೋರಾಟಗಳನ್ನು ಮಾಡುತ್ತಿದ್ದು, ಅದು ಈಡೇರಲಿಲ್ಲ. ಆದರೆ, ಬಿಜೆಪಿ ಸರ್ಕಾರ ಬಂದ ನಂತರ 11,133 ಮಂದಿಯನ್ನು ಈಗಾಗಲೇ ಖಾಯಂ ನೇಮಕಾತಿ ಮಾಡಿದ್ದು, ಮತ್ತೆರಡು ಹಂತಗಳಲ್ಲಿ ಬಾಕಿ ಇರುವ ಪೌರಕಾರ್ಮಿಕರು, ಲೋಡರ್ಸ್ ಮತ್ತು ಕ್ಲೀನರ್‌ಗಳನ್ನು ಖಾಯಂ ಮಾಡಲು ಮಂಜೂರಾತಿ ನೀಡಿದ್ದು, ಚುನಾವಣೆ ನಂತರ ಅದಕ್ಕೆ ಅನುಮೋದನೆ ದೊರೆಯಲಿದೆ. ಈ ಹಿನ್ನೆಲೆಯಲ್ಲಿ ಪೌರಕಾರ್ಮಿಕರು ಈ ಬಾರಿ ಬಿಜೆಪಿ ಬೆಂಬಲಿಸಲು ಮುಂದಾಗಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆದಿದ್ರಾವಿಡ ಪೌರಕಾರ್ಮಿಕ ಸಂಘದ ರಾಜ್ಯಾಧ್ಯಕ್ಷ ಬಿ.ಎಸ್.ಸುಬ್ರಮಣ್ಯ, ಆದಿಜಾಂಬವ ಪೌರಕಾರ್ಮಿಕರ ಸಂಘದ ಅಧ್ಯಕ್ಷ ಗಂಗಣ್ಣ ಉಪಸ್ಥಿತರಿದ್ದರು.

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ಮೇ 6– ಮೈಸೂರಿನ ಗನ್‌ಹೌಸ್ ಸಮೀಪದ ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಜೂ.4ರಂದು ಮಧ್ಯಾಹ್ನ 12ರಿಂದ ಸಂಜೆ 5 ರವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಜೂ.3ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 9686205346 ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಹೆಂಡತಿ: ಯಾವಾಗಲೂ ಆ ದರಿದ್ರ ಮೊಬೈಲ್ ಹಿಡ್ಕೊಂಡು ಕೂತಿರ್ತೀರಾ... ನಾನು ನಿಮ್ಮ ಹೆಂಡತಿ ಆಗೋದಕ್ಕಿಂತ ಮೊಬೈಲ್ ಆಗಿದ್ದರೆ ಚೆನ್ನಾಗಿರುತ್ತಿತ್ತು.

ಗಂಡ : ಇನ್ನೊಮ್ಮೆ ಯೋಚನೆ ಮಾಡಿ ನೋಡು, ಕಳೆದ ಐದು ವರ್ಷದಲ್ಲಿ ಇದು ನನ್ನ ನಾಲ್ಕನೆ ಮೊಬೈಲು.

ಮೈಸೂರು ಮಿತ್ರ

ಭಾನುವಾರ, 7 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸಾರ್ವಜನಿಕ ಜೀವನದಲ್ಲಿ ಮನುಷ್ಯನು ಹೊಗಳಿಕೆಯನ್ನೂ, ನಿಂದನೆಯನ್ನೂ ಸಮಚಿತ್ತದಿಂದ ಸ್ವೀಕರಿಸಬೇಕು. –ಆರ್. ವೆಂಕಟರಾಮನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಲಗಿರೋದಕ್ಕಿಂತ ಎದ್ದಿರೋದ್ ಲೇಸು, ಕೂತ್ಕೊಂಡಿರೋದಕ್ಕಿಂತ ಕೂಲಿ ಮಾಡೋದು ಲೇಸು

ನಿಮ್ಮ ಪತ್ರಗಳು

ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಮತಗಟ್ಟೆ ಸ್ಥಾಪಿಸಿ

ಮಾನ್ಯರೆ,

ಕರ್ನಾಟಕ ವಿಧಾನಸಭೆಗೆ ಮೇ 10 ರಂದು ಚುನಾವಣೆ ನಡೆಯುತ್ತಿದ್ದು, ಮತದಾನದ ಪ್ರಮಾಣ ಹೆಚ್ಚಿಸಲು ಚುನಾವಣಾ ಆಯೋಗ ಹಲವಾರು ಸೂಕ್ತ ಕ್ರಮಗಳನ್ನು ಕೈಗೊಂಡಿದೆ. ಈಗಾಗಲೇ ಜಿಲ್ಲಾಮಟ್ಟದ ಸ್ವೀಪ್ ಸಮಿತಿ ಸಹ ಬಹು ವಿಧಾನಗಳಲ್ಲಿ ಕಡ್ಡಾಯ ಮತದಾನದ ಬಗ್ಗೆ ಜಾಗೃತಿ ಮೂಡಿಸುತ್ತಿದೆ. 'ಅರ್ಹರಾದ ಯಾರೂ ಕೂಡ ಮತದಾನದಿಂದ ವಂಚಿತರಾಗಬಾರದು' ಎಂಬ ಗಹನವಾದ ಉದ್ದೇಶ ಇದರ ಹಿಂದಿದೆ. ಈ ನಿಟ್ಟಿನಲ್ಲಿ 80 ವರ್ಷ ತುಂಬಿದ ವಯೋವೃದ್ಧರಿಗೆ ಮನೆಯಲ್ಲಿಯೂ ಹಾಗೂ ಅಗತ್ಯ ಸೇವೆಯಲ್ಲಿರುವವರಿಗೆ ಅಂಚೆ ಮೂಲಕವೇ ಮತದಾನ ಮಾಡುವ ಅವಕಾಶ ಕಲ್ಪಿಸಿರುವುದು ಸ್ತುತ್ಯಾರ್ಹ.

ಆದರೆ, ಚುನಾವಣಾ ಆಯೋಗ ರಾಜ್ಯದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಒಳ ರೋಗಿಗಳಗಿ ಚಿಕಿತ್ಸೆ ಪಡೆಯುತ್ತಿರುವ ಸಾವಿರಾರು ಮಂದಿ ಮತದಾರರನ್ನು ಮರೆತುಬಿಟ್ಟಿದೆ. ಹೌದು, ಮತ ಹಕ್ಕು ಚಲಾಯಿಸುವ ಅರ್ಹತೆ ಹೊಂದಿರುವ ಸಾವಿರಾರು ಮಂದಿ ತೀವ್ರ ಅನಾರೋಗ್ಯದ ಕಾರಣ ವಿವಿಧ ರೀತಿಯ ಚಿಕಿತ್ಸೆ ಪಡೆಯಲು ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ. ಇದರಲ್ಲಿ ಗರ್ಭಿಣಿಯರು, ಬಾಣಂತಿಯರು, ಅಪಘಾತಕ್ಕೆ ತುತ್ತಾಗಿ ತೀವ್ರವಾಗಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವವರು, ಮಾರಣಾಂತಿಕ ಕಾಯಿಲೆಗಳಿಗೆ ಈಡಾದವರು, ವಿವಿಧ ರೀತಿಯ ಶಸ್ತ್ರ ಚಿಕಿತ್ಸೆಗೆ ಒಳಗಾದವರೂ ಇದ್ದಾರೆ.

ಜೊತೆಗೆ, ರೋಗಿಯನ್ನು ನೋಡಿಕೊಳ್ಳಲು, ಅವರ ಶುಶ್ರೂಷೆ ಮಾಡಲು ಒಬ್ಬರಾದರೂ ಕುಟುಂಬದ ಸದಸ್ಯರೂ ಸಹ ಆಸ್ಪತ್ರೆಯಲ್ಲಿಯೇ ವಾಸ್ತವ್ಯ ಹೂಡಿರುತ್ತಾರೆ. ಇವರೆಲ್ಲ ಡಿಸಾರ್ಜ್ ಆಗುವವರೆಗೂ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. ಇವರು ಮತದಾನದ ದಿನ ತಮ್ಮ ವಾಸಸ್ಥಳದ ಮತಗಟ್ಟೆಗೆ ಹೋಗಿ ಮತ ಚಲಾಯಿಸಲು ಸಾಧ್ಯವಿಲ್ಲ. 'ಮತದ ಹಕ್ಕು' ಇದ್ದರೂ ಚಲಾಯಿಸಲಾಗದ ವಿಷಮ ಸ್ಥಿತಿಯಲ್ಲಿರುತ್ತಾರೆ. ಬಹುತೇಕ ಇವರೆಲ್ಲರೂ ಆಸ್ಪತ್ರೆಯಿರುವ ವಿಧಾನಸಭಾ ಕ್ಷೇತ್ರದ ತಾಲೂಕು ಅಥವಾ ಜಿಲ್ಲೆಗೆ ಸೇರಿದವರೇ ಆಗಿರುತ್ತಾರೆ.

ಆದ್ದರಿಂದ, ಚುನಾವಣಾ ಆಯೋಗ ಚುನಾವಣೆಯ ಕರ್ತವ್ಯಕ್ಕೆ ನಿಯೋಜಿತರಾದ ವಿವಿಧ ಇಲಾಖೆಗಳ ಸಿಬ್ಬಂದಿ ವರ್ಗದವರಿಗೆ, ತರಬೇತಿ ನೀಡುವ ಸ್ಥಳದಲ್ಲಿಯೇ ಆಯಾ ಜಿಲ್ಲೆಯ ವಿಧಾನಸಭಾ ಕ್ಷೇತ್ರವಾರು ಮತಗಟ್ಟೆಯ ಸ್ಥಾಪಿಸಿ, ತಮ್ಮ ಮತ ಚಲಾಯಿಸಲು ಅನುವು ಮಾಡಿಕೊಟ್ಟಂತೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಒಳ ರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಹಾಗೂ ಅವರ ಜೊತೆಗೆ ಸಹಾಯಕರಾಗಿ ಇರುವವರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ 'ಮತಗಟ್ಟೆ'ಗಳನ್ನು ಸ್ಥಾಪಿಸುವ ಮೂಲಕ, ಅವರಿಗಿರುವ ಮತದ ಹಕ್ಕನ್ನು ಚಲಾಯಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕಿದೆ.

– ಟಿ. ಸತೀಶ್ ಜವರೇಗೌಡ, ಮೈಸೂರು

ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳ ಗಮನಕ್ಕೆ

ಮಾನ್ಯರೆ,

ಬಸ್ ನಂ. 161/ಎ/1ರ ವೇಳೆ ಬಸ್ಸು 9 ಗಂಟೆಗೆ ಹಾಗೂ ಸಂಜೆ 5 ಗಂಟೆಗೆ ಮಾನಸೀ ನಗರಕ್ಕೆ ಬಂದು ಹೋಗುತ್ತಿರುವುದು ಸರಿಯಷ್ಟೇ. ಈ ಮಧ್ಯೆ ಮಾನಸೀನಗರಕ್ಕೆ ಬೇರೆ ಯಾವುದೇ ಬಸ್ ಸೌಕರ್ಯವಿರುವುದಿಲ್ಲ. ಮಾನಸೀನಗರದಿಂದ ನಗರ ಬಸ್ ನಿಲ್ದಾಣಕ್ಕೆ ಸಮರ್ಪಕ ಬಸ್ ಸೌಲಭ್ಯವಿಲ್ಲದೆ ತುಂಬಾ ತೊಂದರೆಯಾಗಿರುವುದರಿಂದ ಹಾಲಿ ಸಂಚರಿಸುತ್ತಿರುವ ಬಸ್ ನಂ. 161/ಎ/1ರ ಎಲ್ಲಾ ಟ್ರಿಪ್‌ಗಳನ್ನು ಸಿಬಿಎಸ್‌ನಿಂದ ಮಾನಸೀನಗರಕ್ಕೆ ಸಂಚರಿಸುವಂತೆ ಮಾಡುವ ಮೂಲಕ ಬಡಾವಣೆಯ ನಿವಾಸಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಬೇಕಾಗಿ ಮನವಿ.

–ಎನ್.ಆರ್. ವಿಜಯಕುಮಾರ್, ಮೈಸೂರು.

ನೀಟ್ ಪರೀಕ್ಷೆ ಮುಂದೂಡುವಂತೆ ಮನವಿ

ಮಾನ್ಯರೆ,

ಮೇ 7 ರಂದು ರಾಜಧಾನಿ ಬೆಂಗಳೂರು ಮತ್ತು ರಾಜ್ಯಾದ್ಯಂತ ವೈದ್ಯಕೀಯ ಸೇರಿದಂತೆ ಇತರ ವೈದ್ಯಕೀಯ ಕೋರ್ಸ್‌ಗಳಿಗೆ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ನಡೆಯುತ್ತಿದೆ. ಆದರೆ ಅದೇ ದಿನ ರಾಜ್ಯ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಪ್ರಧಾನಿ ಮೋದಿ ಅವರ "ರೋಡ್ ಶೋ" ಇರುವುದರಿಂದ ಬಹುತೇಕ ಪರೀಕ್ಷೆಗೆ ಬರುವ ಅಭ್ಯರ್ಥಿಗಳಿಗೆ ತೊಂದರೆ ಆಗುವುದರಿಂದ, ನೀಟ್ ಪರೀಕ್ಷೆಯನ್ನು ಮುಂದಿನ ವಾರಕ್ಕೆ ಮುಂದೂಡಲಿ.

ನೀಟ್ ಪರೀಕ್ಷೆ, ವೈದ್ಯಕೀಯ ಮತ್ತು ಇತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ವಿದ್ಯಾರ್ಥಿಗಳು ಭವಿಷ್ಯದ ದೃಷ್ಟಿಯಿಂದ ಬಹು ಮುಖ್ಯವಾದ ಪ್ರವೇಶ ಪರೀಕ್ಷೆಯಾಗಿರುವುದರಿಂದ ಪರೀಕ್ಷಾ ಕೇಂದ್ರಕ್ಕೆ ಸರಿಯಾದ ಸಮಯಕ್ಕೆ ತಲುಪಲು ಸಾಧ್ಯವಾಗದೇ ಹೋದರೆ, ವಿದ್ಯಾರ್ಥಿಗಳ ಮುಂದಿನ ಭವಿಷ್ಯವೇ ಹಾಳಾಗುತ್ತದೆ. ಇದಕ್ಕೆ ಪರೀಕ್ಷಾ ಮಂಡಳಿಯೇ ಹೊಣೆಯಾಗಬೇಕಾಗುತ್ತದೆ.

–ಬೂಕನಕೆರೆ ವಿಜೇಂದ್ರ, ಮೈಸೂರು.

ವಿಪರ್ಯಾಸ!

ಮಾನ್ಯರೆ,

ಕಳೆದ ಕೆಲ ವರ್ಷಗಳಲ್ಲಿ ಅನೇಕ ಸಿದ್ಧ, ಪ್ರಸಿದ್ಧ, ಪ್ರಬುದ್ಧ ಸಾಹಿತಿಗಳು ಕಣ್ಮರೆಯಾದುದು ಸಂತಾಪದ ಸಂಗತಿ. ಇತ್ತೀಚಿನ ಸರದಿ ಪ್ರೊ. ಮಾಧವ ಕುಲಕರ್ಣಿಯವರದು. ಅವರು ಮೂಲತಃ ಉತ್ತರ ಕರ್ನಾಟಕದವರು; ಮೈಸೂರಿಗೆ ಬಂದು ಪ್ರತಿಷ್ಠಿತ ಮಹಾಜನ ಕಾಲೇಜಿನಲ್ಲಿ ಆಂಗ್ಲ ಪ್ರಾಧ್ಯಾಪಕರಾಗಿದ್ದರು. ನಿವೃತ್ತರಾದ ಮೇಲೆ ಬೆಂಗಳೂರಿನಲ್ಲಿ ನೆಲೆಸಿದ್ದರು.

'ಆಯ್ದ ನೂರೊಂದು ಕವನ' ಎಂಬ ನನ್ನ ಕೃತಿಗೆ ಕುಲಕರ್ಣಿಯವರು ಮುನ್ನುಡಿ ಬರೆದಿದ್ದಾರೆ. ಅಲ್ಲಿನ ಕೆಲವು ಗಮನಾರ್ಹ ಹೇಳಿಕೆಗಳನ್ನು ಸ್ಮರಿಸುತ್ತೇನೆ.

"ಸಿಪಿಕೆ ನಮ್ಮ ನಡುವೆ ಬದುಕುತ್ತಿರುವ ಮಹತ್ವದ ಕವಿಗಳಲ್ಲೊಬ್ಬರು... ದೈನಂದಿನ ಬದುಕಿನ ಹಲವಾರು ಅಂಶಗಳು ಅವರ ಕಾವ್ಯದ ಅನಿವಾರ್ಯ ಅಂಶಗಳಾಗುತ್ತವೆ ಮತ್ತು ಬದುಕಿನ ಪಾತಳಿಯ ಭೂಮಿಕೆಯಿಂದ ಅನೂಹ್ಯಗಳತ್ತ ಅವರು ಬೆರಗಿನಿಂದ ನೋಡುತ್ತಾರೆ... 'ಕಾಲ ಮತ್ತು ಅದರ 'ಪರಿಣಾಮ' ಇವು ಸಿಪಿಕೆಯವರ ಕಾವ್ಯವನ್ನು ನಿಯಂತ್ರಿಸುವ ಮೂಲ ವಸ್ತುಗಳು..."

ಕುಲಕರ್ಣಿ ಶ್ರೇಷ್ಠ ವಿಮರ್ಶಕರು. ಕನ್ನಡ ಎಲ್ಲ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನು ಕುರಿತು ಬರೆದಿದ್ದಾರೆ. ನಾನು ಪಂಪ ಪ್ರಶಸ್ತಿ ಪುರಸ್ಕೃತನಾದೆ. ... 'ಬದುಕುತ್ತಿರುವ' ಎಂದು ನನ್ನ ಬಗೆಗೆ ಬರೆದವರು ತಾವೇ ತೀರಿಕೊಂಡಿದ್ದು ಎಂಥ ವಿಪರ್ಯಾಸ! ('ಕಾಲ'ದ 'ಪರಿಣಾಮ').

ಭ್ರಮಣೆ

ಮಹಾಪ್ರಶ್ನೆ : ಚುನಾವಣೆ ಕಣದಲ್ಲಿ ಯಾರಿಗೆ ನಿಮ್ಮ ಮ(ನ್ನ)ಣೆ?. ಒಂದೆಡೆ ಅಭ್ಯರ್ಥಿಗಳ ಹಣೆ ಬರಹ; ಮತ್ತೊಂದೆಡೆ ಮತದಾರರಿಗೆ ಬುದ್ಧಿಭ್ರಮಣೆ!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ದಿಢೀರ್ ಬೆಳೆದವನಲ್ಲ; ಜನರ ಆಶೀರ್ವಾದದಿಂದ ಹಂತ ಹಂತವಾಗಿ ಮೇಲೆ ಬಂದವನು ನಾನು...

–ಜಿ.ಟಿ.ದೇವೇಗೌಡ, ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ

ಸಂದರ್ಶನ: ಎಸ್.ಬಿ.ದೇವರಾಜ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ(73 ವರ್ಷ) ಹ್ಯಾಟ್ರಿಕ್ ಗೆಲುವಿನ ವಿಶ್ವಾಸದೊಂದಿಗೆ ಬಿರುಸಿನ ಪ್ರಚಾರದಲ್ಲಿ ತೊಡಗಿದ್ದಾರೆ. ಮೈಸೂರು ತಾಲೂಕು, ಇಲವಾಲ ಹೋಬಳಿ ಗುಂಗ್ರಾಲ್‌ಛತ್ರ ಗ್ರಾಮದ ಲೇಟ್ ತಮ್ಮೇಗೌಡ ಅವರ ಪುತ್ರರಾದ ಇವರು 8ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದರೂ ಸಹಕಾರ, ಉನ್ನತ ಶಿಕ್ಷಣ ಸಚಿವರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುವ ಮಹಾ ಅನುಭವಿ. ಮೈಸೂರು ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ, ರಾಜ್ಯದಲ್ಲಿ ದಾಖಲೆ ಬರೆದಿದ್ದ ಜಿ.ಟಿ. ದೇವೇಗೌಡರು, 1998ರಲ್ಲಿ ಮೊದಲ ಬಾರಿಗೆ ಹುಣಸೂರು ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ್ದರು. ನಂತರ 2004ರಲ್ಲಿ ಹುಣಸೂರಿಂದಲೇ ಮತ್ತೆ ಆಯ್ಕೆಯಾದ ಗೌಡರು, ಕುಮಾರಸ್ವಾಮಿ ಅವರ ಸರ್ಕಾರದಲ್ಲಿ ಸಹಕಾರ ಸಚಿವರಾಗಿದ್ದರು. 2013 ಹಾಗೂ 2018ರ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸತತ ಗೆಲುವು ದಾಖಲಿಸಿರುವ ಇವರು, ಈ ಬಾರಿಯೂ ಇದೇ ಕ್ಷೇತ್ರದಿಂದ ಸ್ಪರ್ಧೆಗಿಳಿದಿದ್ದಾರೆ. ನಿರಂತರ ಪ್ರಚಾರದ ನಡುವೆಯೂ ಜಿ.ಟಿ.ದೇವೇಗೌಡರು (ಜಿಟಿಡಿ) 'ಮೈಸೂರು ಮಿತ್ರ'ನೊಂದಿಗೆ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: *ಜನ ಹಲವು ಬಾರಿ ನಿಮಗೆ ಆಶೀರ್ವದಿಸಿದ್ದಾರೆ. ಈ ಬಾರಿಯ ಸ್ಪರ್ಧೆ ಬಗ್ಗೆ ನಿಮ್ಮ ಅಭಿಪ್ರಾಯ?.*

ಜಿ.ಟಿ.ದೇವೇಗೌಡರು: ಎಲ್ಲಿ ಹೋದರೂ ಜನರಲ್ಲಿ ಭಾರೀ ಉತ್ಸಾಹ ಕಂಡಿದ್ದೇನೆ. ಅತ್ಯಂತ ಪ್ರೀತಿ, ಅಭಿಮಾನದಿಂದ ಪೂರ್ಣಕುಂಭ ಸ್ವಾಗತ ನೀಡುತ್ತಿದ್ದಾರೆ. ನಾನು ಮತಯಾಚಿಸುವ ಮುನ್ನವೇ ನಿಮಗೇ ಮತ ನೀಡಿ ಗೆಲ್ಲಿಸುತ್ತೇವೆ ಎನ್ನುತ್ತಿದ್ದಾರೆ. ಜಿ.ಟಿ.ದೇವೇಗೌಡರು ಶಾಸಕರಾಗಬೇಕು, ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಬೇಕು ಎನ್ನುವುದು ಜನರ ಮನಸ್ಸಿನಲ್ಲಿ ಅಚಲವಾಗಿದೆ. ಇದೆಲ್ಲವೂ ನನ್ನ ಆತ್ಮವಿಶ್ವಾಸವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಅಚ್ಚರಿ ಸಂಗತಿ ಎಂದರೆ, ನೀವು ಮತ್ತೆ ಮತ ಕೇಳಲು ಬರಬೇಕಾ ಎಂದು ಕೆಲವು ಕಡೆ ಕೇಳುತ್ತಾರೆ. ನೀವು ನಮಗೆ ಬೇಕಿರುವವರು ನಾವೇ ಆಯ್ಕೆ ಮಾಡುತ್ತೇವೆ ಹೋಗಿ ಎಂದು ವಿಶ್ವಾಸ ತುಂಬುತ್ತಿದ್ದಾರೆ.

ಮಿತ್ರ: *ನಿಮ್ಮ ಸುದೀರ್ಘ ರಾಜಕೀಯ ಅನುಭವದ ಆಧಾರದಲ್ಲಿ ಕ್ಷೇತ್ರದ ಜನರ ನಾಡಿಮಿಡಿತ ಹೇಗಿದೆ?.*

ಜಿಟಿಡಿ: ಕ್ಷೇತ್ರದ ಜನ ಯಾವತ್ತೂ ಕೂಡ ನನ್ನ ಪರವಾಗಿಯೇ ಇದ್ದಾರೆ. ಪ್ರಚಾರದ ಸಂದರ್ಭದಲ್ಲಿ ಗ್ರಾಮವೊಂದರಲ್ಲಿ ಪುರೋಹಿತರೊಬ್ಬರು ಜಿ.ಟಿ.ದೇವೇಗೌಡರು ಇಲ್ಲಿ ಸ್ಪರ್ಧಿಸುವವರೆಗೂ ಮತ್ತೊಬ್ಬರು ಗೆಲ್ಲಲು ಸಾಧ್ಯವಿಲ್ಲ. ನಾವೆಲ್ಲಾ ನಿಮಗೇ ಮತ ಹಾಕುತ್ತೇವೆ ಎಂದು ಜನರ ಮಧ್ಯೆ ನಿಂತು ಗಟ್ಟಿಯಾಗಿ ಪ್ರೀತಿಯಿಂದ ಹೇಳಿದರು. ಅವರ ಈ ಹೇಳಿಕೆ ದೇವರೇ ಪ್ರತ್ಯಕ್ಷನಾಗಿ ವರ ನೀಡಿದಂತಿತ್ತು. ಈ ರೀತಿಯ ಪ್ರೀತಿ, ವಿಶ್ವಾಸ ನನ್ನ ಮೇಲೆ ಎಲ್ಲಾ ಸಮುದಾಯದವರಲ್ಲೂ ಇದೆ ಎನ್ನುವುದು ಅತ್ಯಂತ ಖುಷಿಯ ಸಂಗತಿ.

> ❝ ನಾನು ಹಲವು ಚುನಾವಣೆಗಳನ್ನು ಎದುರಿಸಿದ್ದೇನೆ. ಈ ಬಾರಿ ಎಲ್ಲಾ ಕಡೆ ಪೂರ್ಣಕುಂಭ, ಡೋಲು, ತಮಟೆ ಸಮೇತ ಸಂಭ್ರಮದಿಂದ ಸ್ವಾಗತಿಸುವುದರ ಜೊತೆಗೆ ಜನರೇ ನನ್ನ ಪರವಾಗಿ ಮತ ಯಾಚಿಸುತ್ತಿದ್ದಾರೆ. ಮೈಸೂರು ನಗರ ಪ್ರದೇಶದಲ್ಲೂ ಸಾವಿರಾರು ಜನ ಪ್ರಚಾರದಲ್ಲಿ ಜೊತೆಯಾಗುತ್ತಿರುವುದು ವಿಶೇಷವೆನಿಸಿದೆ. ಇನ್ನು ನನ್ನ ಕುಟುಂಬವೂ ಪ್ರಚಾರದಲ್ಲಿ ತೊಡಗಿದೆ. ಅವರೊಂದಿಗೆ ನೂರಾರು ಕುಟುಂಬಗಳ ಸದಸ್ಯರೂ ಭಾಗಿಯಾಗಿದ್ದಾರೆ. ಇದು, ಇಡೀ ಕ್ಷೇತ್ರದ ಜನರೊಂದಿಗೆ ನಾನು ಹೊಂದಿರುವ ಭಾವನಾತ್ಮಕ ಸಂಬಂಧಕ್ಕೆ ಸಾಕ್ಷಿಯಾಗಿದೆ.



ಮತಯಾಚನೆ ವೇಳೆ ಗೌಡರಿಗೆ ಮತದಾರರಿಂದ ಸಂಭ್ರಮ ಸ್ವಾಗತ

ಮಿತ್ರ *ನೀವು ಶಾಸಕರಾಗಿ ಕ್ಷೇತ್ರಕ್ಕೆ ನೀಡಿರುವ ಮಹತ್ವದ್ದು ಎನ್ನಬಹುದಾದ ಕೊಡುಗೆ ಏನು?.*

ಜಿಟಿಡಿ: ಪ್ರತಿಯೊಂದು ಮನೆಗೂ ದಿನವಿಡೀ ಕುಡಿಯುವ ನೀರು ಪೂರೈಕೆಯಾಗಬೇಕು ಎನ್ನುವುದು ಜನರ ಬೇಡಿಕೆಯಾಗಿತ್ತು. ಈ ನಿಟ್ಟಿನಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ, ನಾನು ಮಂತ್ರಿಯಾಗಿದ್ದಾಗ ಕ್ಯಾಬಿನೆಟ್‌ನಲ್ಲಿ 545 ಕೋಟಿ ರೂ. ಅಂದಾಜು ಮೊತ್ತದಲ್ಲಿ ಹಳೇ ಉಂಡುವಾಡಿ ಕುಡಿಯುವ ನೀರಿನ ಯೋಜನೆ ಅನುಮೋದಿಸಿ, ಅನುಷ್ಠಾನಗೊಳಿಸಲಾಯಿತು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ, ಮೈಸೂರು ನಗರ ಜೊತೆಗೆ ಇತ್ತೀಚೆಗೆ 200 ಕೋಟಿ ರೂ. ಹೆಚ್ಚುವರಿ ಅನುದಾನದಲ್ಲಿ ಹುಣಸೂರು ತಾಲೂಕಿನ ಜನರಿಗೂ ಕುಡಿಯುವ ನೀರು ಪೂರೈಸುವ ಯೋಜನೆ ನಡೆದಿದೆ. ಜನರ ಅಪೇಕ್ಷೆಯಂತೆ ಹಳೇ ಉಂಡುವಾಡಿ ಕುಡಿಯುವ ನೀರಿನ ಮಹತ್ತರ ಯೋಜನೆಯನ್ನು ಪೂರ್ಣಗೊಳಿಸಿದ ಆತ್ಮತೃಪ್ತಿ ನನಗಿದೆ.

ಮಿತ್ರ: *ಇನ್ನೂ ಪರಿಹರಿಸಬೇಕಾದ ಸಮಸ್ಯೆಗಳೇನಿವೆ?.*

ಜಿಟಿಡಿ: ಕ್ಷೇತ್ರದಲ್ಲಿ ಯುಜಿಡಿ ಸಮಸ್ಯೆ ಗಂಭೀರವಾಗಿದೆ. ನಗರದ ರಿಂಗ್ ರಸ್ತೆ ಸಮೀಪದಲ್ಲಿ ಅಪಾರ ಸಂಖ್ಯೆಯ ಖಾಸಗಿ ಬಡಾವಣೆಗಳನ್ನು ನಿರ್ಮಿಸಲಾಗಿದೆ. ನಿವೇಶನ ಖರೀದಿಸಿದವರಲ್ಲಿ ಅನೇಕರು ಮನೆ ಕಟ್ಟಿಕೊಂಡು ವಾಸವಿದ್ದಾರೆ. ಆದರೆ ಆ ಬಡಾವಣೆಗಳಲ್ಲಿ ರಸ್ತೆ, ಯುಜಿಡಿ, ಸೆಪ್ಟಿಕ್ ಟ್ಯಾಂಕ್ ಇನ್ನಿತರ ಮೂಲ ಸೌಕರ್ಯಗಳು ಇಲ್ಲದಿರುವುದರಿಂದ ಅಲ್ಲಿನ ನಿವಾಸಿಗಳು ಬಹಳ ಕಷ್ಟದಲ್ಲಿದ್ದಾರೆ. ಜನರಿಗೆ ನಿವೇಶನ ಮಾರಿ ಹೋದವರು ಜನರ ಸಂಪರ್ಕಕ್ಕೆ ಸಿಗುವುದಿಲ್ಲ. ಮೈಸೂರು ನಗರದಲ್ಲಿ 45 ಕಿ.ಮೀ. ರಿಂಗ್ ರಸ್ತೆಯೊಳಗೆ ಮೂರು ಕ್ಷೇತ್ರಗಳಿವೆ. ಆದರೆ ವಿಜಯನಗರ 3, 4ನೇ ಹಂತ, ರೂಪಾನಗರ, ಶಾರದಾದೇವಿನಗರ ಸೇರಿದಂತೆ ನಗರದ ಸುತ್ತಲಿರುವ ಬಡಾವಣೆಗಳು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸೇರಿದೆ. ಇದು ಒಟ್ಟಾರೆ 100 ಕಿ.ಮೀ.ನಷ್ಟು ಸುತ್ತಳತೆಯ ವಿಸ್ತಾರವಾದ ದೊಡ್ಡ ಕ್ಷೇತ್ರವಾಗಿದೆ. ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳು ಇನ್ನೂ ಬಾಕಿ ಇವೆ. ಸಾವಿರಾರು ಕೋಟಿ ಅನುದಾನದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದು, ಇನ್ನು ಶೇ.20ರಷ್ಟು ಆಗಬೇಕಿದೆ. ಮಹಾರಾಜರು ವ್ಯವಸ್ಥಿತವಾಗಿ ಕಟ್ಟಿ, ಬೆಳೆಸಿರುವ ಮೈಸೂರು ಮಾದರಿಯಲ್ಲೇ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿಯಾಗಬೇಕೆಂಬುದು ನನ್ನ ಆಶಯವಾಗಿದೆ.

ಮಿತ್ರ: *ಪ್ರಚಾರದ ವೇಳೆ ಜನರಿಂದ ವ್ಯಕ್ತವಾದ ಪ್ರಮುಖ ಅಹವಾಲು ಯಾವುದು?.*

ಜಿಟಿಡಿ: ಪ್ರಚಾರಕ್ಕೆ ಹೋದಲೆಲ್ಲಾ ಬಹಳ ಪ್ರೀತಿ, ವಿಶ್ವಾಸದಿಂದ ನನ್ನನ್ನು ಸ್ವಾಗತಿಸುತ್ತಿದ್ದಾರೆ. ನೀವು ಈ ಬಾರಿಯೂ ಗೆಲ್ಲಲೇಬೇಕೆಂದು ಹರಸುತ್ತಿದ್ದಾರೆ. ಹಿರಿಯರೆಲ್ಲಾ ಆತ್ಮೀಯವಾಗಿ ಕಂಡು ಆಶೀರ್ವದಿಸುತ್ತಿದ್ದಾರೆ. ಜನರಿಂದ ಅಹವಾಲು ಇಲ್ಲವಾದರೂ ಕ್ಷೇತ್ರದಲ್ಲಾಗಬೇಕಿರುವ ಕೆಲಸಗಳ ಬಗ್ಗೆ ನನಗೆ ಅರಿವಿದೆ. ತುರ್ತಾಗಿ ಯುಜಿಡಿ ವ್ಯವಸ್ಥೆ, ಹಲವೆಡೆ ರಸ್ತೆಗಳ ಅಭಿವೃದ್ಧಿಯಾಗಬೇಕಿದೆ. ಸ್ವಚ್ಛತೆ ಕಾಪಾಡಬೇಕಿದೆ. ದೊಡ್ಡ ಕ್ಷೇತ್ರವಾದ್ದರಿಂದ ಹಂತಹಂತವಾಗಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಇದು ಜನರಿಗೂ ತಿಳಿದಿದೆ.

ಮಿತ್ರ: *ಯಾವ ನಿರೀಕ್ಷೆಯೊಂದಿಗೆ ಜನ ನಿಮ್ಮನ್ನು ಪುನರಾಯ್ಕೆ ಮಾಡಬೇಕು?.*

ಜಿಟಿಡಿ: ಜಿ.ಟಿ.ದೇವೇಗೌಡರು ಅಭಿವೃದ್ಧಿ ಮಾಡಿದ್ದಾರೆ, ಮುಂದೆಯೂ ಅಭಿವೃದ್ಧಿ ಮಾಡುತ್ತಾರೆ ಎನ್ನುವ ನಂಬಿಕೆ, ವಿಶ್ವಾಸ ಜನರಲ್ಲಿ ಅಚಲವಾಗಿದೆ. ನಾನು ದಿಢೀರ್ ಬೆಳೆದವನಲ್ಲ. ಜನರೊಟ್ಟಿಗಿದ್ದು, ಅವರ ಆಶೀರ್ವಾದ ಬೆಂಬಲದಿಂದಲೇ ಹಂತ ಹಂತವಾಗಿ ಬೆಳೆದು ಬಂದವನು. ಸಾರ್ವಜನಿಕರ ಸಮಸ್ಯೆಗಳ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ನೇರವಾಗಿ ಭೇಟಿಯಾಗಬಹುದು, ನಮ್ಮ ಕಷ್ಟಗಳಿಗೆ ಸ್ಪಂದಿಸುತ್ತಾರೆ ಎನ್ನುವ ನಂಬಿಕೆ ಜನರಲ್ಲಿದೆ. ಹಾಗಾಗಿ ಪುನರಾಯ್ಕೆ ಮಾಡಬೇಕೆಂದು ಜನರೇ ನಿರ್ಧರಿಸಿದ್ದಾರೆ.

ಮಿತ್ರ: *ಪ್ರತಿ ಚುನಾವಣೆಯ ಸಂದರ್ಭವೂ ವಿಭಿನ್ನವಾಗಿರುತ್ತದೆ. ಈ ಬಾರಿಯ ವಾತಾವರಣ ಹೇಗಿದೆ?*

ಜಿಟಿಡಿ: ನಾನು ಹಲವು ಚುನಾವಣೆಗಳನ್ನು ಎದುರಿಸಿದ್ದೇನೆ. ಈ ಬಾರಿ ಎಲ್ಲಾ ಕಡೆ ಪೂರ್ಣಕುಂಭ, ಡೋಲು, ತಮಟೆ ಸಮೇತ ಸಂಭ್ರಮದಿಂದ ಸ್ವಾಗತಿಸುವುದರ ಜೊತೆಗೆ ಜನರೇ ನನ್ನ ಪರವಾಗಿ ಮತ ಯಾಚಿಸುತ್ತಿದ್ದಾರೆ. ಮೈಸೂರು ನಗರ ಪ್ರದೇಶದಲ್ಲೂ ಸಾವಿರಾರು ಜನ ಪ್ರಚಾರದಲ್ಲಿ ಜೊತೆಯಾಗುತ್ತಿರುವುದು ವಿಶೇಷವೆನಿಸಿದೆ. ಇನ್ನು ನನ್ನ ಕುಟುಂಬವೂ ಪ್ರಚಾರದಲ್ಲಿ ತೊಡಗಿದೆ. ಅವರೊಂದಿಗೆ ನೂರಾರು ಕುಟುಂಬಗಳ ಸದಸ್ಯರೂ ಭಾಗಿಯಾಗಿದ್ದಾರೆ. ಇದು, ಇಡೀ ಕ್ಷೇತ್ರದ ಜನರೊಂದಿಗೆ ನಾನು ಹೊಂದಿರುವ ಭಾವನಾತ್ಮಕ ಸಂಬಂಧಕ್ಕೆ ಸಾಕ್ಷಿಯಾಗಿದೆ.

ಮಿತ್ರ: *ಈ ಚುನಾವಣೆಯಲ್ಲಿ ನಿರ್ಣಾಯಕರೆನಿಸಿರುವ ಯುವ ಮತದಾರರನ್ನು ಸೆಳೆಯುವ ನಿಟ್ಟಿನಲ್ಲಿ ನಿಮ್ಮ ಪ್ರಯತ್ನ ಹೇಗಿದೆ?.*

ಜಿಟಿಡಿ: ಕ್ಷೇತ್ರದ ಯುವ ಮತದಾರರೇ ಸ್ವಯಂಪ್ರೇರಿತವಾಗಿ ನನ್ನನ್ನು ಬೆಂಬಲಿಸುತ್ತಿದ್ದಾರೆ. ಬಡವರು, ಹಿಂದುಳಿದವರು, ರೈತರು, ಯುವ ಸಮುದಾಯದ ಬಗ್ಗೆ ಅಪಾರ ಕಾಳಜಿ ಹೊಂದಿರುವ ಕುಮಾರಸ್ವಾಮಿ ಅವರು ಮತ್ತೆ ಮುಖ್ಯಮಂತ್ರಿಯಾಗಬೇಕು ಎನ್ನುವ ಅಭಿಲಾಷೆ ಯುವ ಸಮುದಾಯದಲ್ಲಿದೆ. ಯುವಕರಿಗೆ ಉದ್ಯೋಗ ಕಲ್ಪಿಸುವುದು, ಉಚಿತ ಆರೋಗ್ಯ ಸೇವೆ, ವೃದ್ಧಾಪ್ಯ ವೇತನ ಹೆಚ್ಚಳ, ಮಹಿಳಾ ಸ್ವಸಹಾಯ ಸಂಘಗಳ ಸಾಲಮನ್ನಾ ಹೀಗೆ ಈ ಬಾರಿ ಘೋಷಿಸಿರುವ ಪಂಚರತ್ನ ಕಾರ್ಯಕ್ರಮಗಳು ಯುವ ಸಮುದಾಯವನ್ನು ಆಕರ್ಷಿಸಿವೆ. ಪರಿಣಾಮ ನನ್ನ ಕ್ಷೇತ್ರದ ಯುವ ಮತದಾರರೂ ಸ್ವಯಂಪ್ರೇರಿತವಾಗಿ ಅತ್ಯಂತ ಉತ್ಸುಕತೆಯಿಂದ ಬೆಂಬಲ ನೀಡುತ್ತಿದ್ದಾರೆ.



ನರಸಿಂಹರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ಬಿರುಸಿನ ಪ್ರಚಾರ ನಡೆಸಿದರು. ಅವರಿಗೆ ಹಿರಿಯ ಮುಖಂಡರಾದ ಬಿ.ಪಿ. ಮಂಜುನಾಥ್, ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಇತರರು ಸಾಥ್ ನೀಡಿದರು.



ಚಾಮುಂಡೇಶ್ವರಿ ಕ್ಷೇತ್ರದ ಜಯಪುರ ಗ್ರಾಪಂ ಸದಸ್ಯರಾದ ಆಶಾ ಕೆಂಪಚಾರಿ, ಕಾಂಗ್ರೆಸ್ ಮುಖಂಡರಾದ ಮಹಮ್ಮದ್ ಆಲಿ(ಬಾಬಣ್ಣ), ಮಾವಿನಹಳ್ಳಿ ಸಿದ್ದೇಗೌಡರ ಸಹೋದರ ಎಸ್.ರಮೇಶ್‌ಗೌಡ ನೇತೃತ್ವದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಈ ವೇಳೆ ಮುಖಂಡರಾದ ಕೆಂಪಯ್ಯ, ಸುಜಾತ್ ಆಲಿ, ದೊಡ್ಡಣ್ಣ, ಚೇತನ್‌ಕುಮಾರ್, ಜೆ.ಬಿ.ರಾಘವೇಂದ್ರ, ಅವಿನಾಶ್ ಸೇರಿದಂತೆ ಜಯಪುರ ವಿಶ್ವಕರ್ಮ ಸಮುದಾಯದ ಯುವಕರು ಉಪಸ್ಥಿತರಿದ್ದರು.

ಮಳೆಯಲ್ಲೇ ಶ್ರೀವತ್ಸ ಮತಯಾಚನೆ



ಮೈಸೂರು, ಮೇ 6(ಎಸ್‌ಪಿಎನ್)– ಕೆ.ಆರ್. ಕ್ಷೇತ್ರ ವ್ಯಾಪ್ತಿಯ ಜಯನಗರ, ಅರವಿಂದನಗರ, ವಿವೇಕಾನಂದ ನಗರ ವ್ಯಾಪ್ತಿಯಲ್ಲಿ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರು ಮಳೆಯಲ್ಲೇ ಮನೆ ಮನೆಗೆ ತೆರಳಿ ಶನಿವಾರ ಮತಯಾಚನೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಕಳೆದ 35 ವರ್ಷಗಳಿಂದ ಬಿಜೆಪಿ ಸಾಮಾನ್ಯ ಕಾರ್ಯಕರ್ತನಾಗಿ ತೊಡಗಿಸಿಕೊಂಡಿದ್ದೇನೆ. ನನ್ನ ಸೇವೆಯನ್ನು ಗುರುತಿಸಿರುವ ಬಿಜೆಪಿ ಹೈಕಮಾಂಡ್, ಈ ಬಾರಿ ಕೆ.ಆರ್.ಕ್ಷೇತ್ರ ಅಭ್ಯರ್ಥಿಯನ್ನಾಗಿ ಸ್ಪರ್ಧೆಗಿಳಿಸಿದೆ ಬದಲಾವಣೆಗಾಗಿ ನನಗೊಂದು ಅವಕಾಶ ಕೊಡಿ ಎಂದು ಮತದಾರರಲ್ಲಿ ಮನವಿ ಮಾಡಿದರು. ಕರ್ನಾಟಕದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ರಚಿಸಲು ಕೆ.ಆರ್. ಕ್ಷೇತ್ರದ ಮತದಾರರು ನನ್ನನ್ನು ಬೆಂಬಲಿಸಬೇಕು. ಅಲ್ಲದೆ, ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದರೆ, ರಾಜ್ಯದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಈ ವೇಳೆ ರಾಕೇಶ್ ಗೌಡ, ನಗರಪಾಲಿಕೆ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಪ್ರದೀಪ್, ಅಜಯಶಾಸ್ತ್ರಿ, ಮಹದೇವ್, ನಾಗರಾಜ್, ಗೌರಿ, ಸುಜಾತ, ಉಮೇಶ್, ಶ್ರೀನಿವಾಸ, ರವಿ, ಗೌತಮ್, ಮನೋಜ್, ಪವನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಭಾರತ ಜಾತೀಯತೆ ಕಡೆ ವಾಲುತ್ತಿರುವುದು ಆತಂಕಕಾರಿ

ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಕಳವಳ



ಮೈಸೂರು, ಮೇ 6(ಸಿಎನ್)–ಬುದ್ಧ, ಬಸವ, ಅಂಬೇಡ್ಕರ್‌ರವರ ಮಾರ್ಗದರ್ಶನದಲ್ಲಿ ಇಂದಿನ ಭಾರತ ಸಾಗುತ್ತಿಲ್ಲ, ಬದಲಾಗಿ ಕೋಮುವಾದಿಗಳ ದಳ್ಳುರಿಗೆ ಸಿಲುಕಿ ಭಾರತ ನಶಿಸುವ ಹಂತ ತಲುಪುತ್ತಿರುವುದು ಶೋಚನೀಯ ಸಂಗತಿ ಎಂದು ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ಬುದ್ಧ ಪೂರ್ಣಿಮೆ ಅಂಗವಾಗಿ ತನುಮನ ಸಂಸ್ಥೆಯಿಂದ ನಗರದ ಬುದ್ಧ ವಿಹಾರದಲ್ಲಿ 'ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ ಹಾಗೂ 'ಬುದ್ಧನಾಡ ಭೂಷಣ' ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು. ನಮ್ಮ ಭಾರತದಲ್ಲಿ ಇಂದಿಗೂ ಅಸ್ಪೃಶ್ಯತೆ ತಾಂಡವವಾಡುತ್ತಿದ್ದು, ದಲಿತ ವಿರೋಧಿ ಚಟುವಟಿಕೆಗಳಿಂದ ತಳ ಸಮುದಾಯಕ್ಕೆ ನಿತ್ಯವೂ ಕಿರುಕುಳವಾಗುತ್ತಿದೆ. ಅಸ್ಪೃಶ್ಯತೆ ಪಿಡುಗು ಹೋಗಲಾಡಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ಆದರೂ ದೇಶದ ಗ್ರಾಮೀಣ ಭಾಗಗಳು, ನಗರಗಳಲ್ಲಿಯೂ ಇದು ಮುಂದುವರಿದಿದೆ ಎಂದು ಬೇಸರ ವ್ಯಕ್ತಪಡಿಸಿದರು. ಭ್ರಷ್ಟಾಚಾರ, ಜಾತೀಯತೆ, ಮತಾಂಧತೆ ನಮ್ಮ ಭಾರತವನ್ನ ಆವರಿಸಿಕೊಂಡಿದ್ದು, ಇದರಿಂದ ಹೊರ ಬರುವ ಮಾರ್ಗ ನಾವು ಕಂಡುಕೊಂಡಿಲ್ಲ. 'ಜಗ ನಡೆಯಲಿ ಬುದ್ಧನ ಕಡೆ' ಎಂದು ಪ್ರತಿ ಬಾರಿ ಕಾರ್ಯಕ್ರಮದಲ್ಲಿ ನಾವು ಹೇಳುತ್ತಿರುತ್ತೇವೆ, ಆದರೆ ಭಾರತ ಸಾಗುತ್ತಿರುವುದು ಮಾತ್ರ ಜಾತೀಯತೆ ಕಡೆಗೆ. ಇದಕ್ಕೆಲ್ಲ ಮೂಲ ಕಾರಣ ಮಹತ್ವದ ಮಾತುಗಳನ್ನು ಕೊಂದು ನಾವು ಬದುಕುತ್ತಿರುವುದು ಎಂದು ಕಿಡಿಕಾರಿದರು. ಕಾರ್ಯಕ್ರಮದಲ್ಲಿ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಅಂಶಿ ಪ್ರಸನ್ನ ಕುಮಾರ್, ಭಾ.ಬೌ.ಮ ಪ್ರಧಾನ ಕಾರ್ಯದರ್ಶಿ ನಾರಾಯಣಸ್ವಾಮಿ, ಕಾರ್ಯಕ್ರಮ ಸಂಚಾಲಕ ಡಿ.ಸಿ.ಶಿವಕುಮಾರ್ ಇತರರು ಉಪಸ್ಥಿತರಿದ್ದರು.

ಬುದ್ಧನಾಡ ಭೂಷಣ ಪ್ರಶಸ್ತಿ ಪುರಸ್ಕೃತರು: ಮಹದೇವಪ್ಪ, ಎಂ.ಪುರು ಷೋತ್ತಮ್, ಅಮ್ಮಸಂದ್ರ ಸುರೇಶ್, ಮರಿದೇವ ಮ.ನಡುವಿನಕೇರಿ, ಜವರ ನಾಯಕ, ನಾಗೇಶ್ ತಳವಾರ್, ಮಧು ಕುಮಾರ್, ಸಿದ್ದಾರ್ಥ ಆನಂದ ಮಾಲೂರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 7 ಭಾನುವಾರ 2023

ಸಂಪುಟ: 44 | ಸಂಚಿಕೆ: 21 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಬಿರುಸಿನ ಪ್ರಚಾರ

ಹುಣಸೂರಲ್ಲಿ ಯುವನಾಯಕ ಜಿ.ಡಿ.ಹರೀಶ್‌ಗೌಡರ ಗೆಲ್ಲಿಸಿ: ಮಾಜಿ ಸಿಎಂ ಹೆಚ್‌ಡಿಕೆ ಮನವಿ



ಹುಣಸೂರು, ಮೇ 6– ಮೈಸೂರು ಜಿಲ್ಲೆಯ 11 ಕ್ಷೇತ್ರಗಳ ಪೈಕಿ ಜೆಡಿಎಸ್ 8 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಲಿದ್ದು, ರಾಜ್ಯದಲ್ಲಿ ಅಧಿಕಾರ ಹಿಡಿಯುವಷ್ಟು ಸ್ಪಷ್ಟ ಬಹುಮತ ಪಡೆಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ನಗರದ ನಗರಸಭೆ ಮೈದಾನದಲ್ಲಿ ಆಯೋಜಿಸಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಕ್ಷೇತ್ರ ಜೆಡಿಎಸ್ ಅಭ್ಯರ್ಥಿ ಜಿ.ಡಿ. ಹರೀಶ್‌ಗೌಡರ ಪರ ಮತಯಾಚಿಸಿ ಮಾತನಾಡಿದ ಅವರು, ಈ ಬಾರಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ರಾಜ್ಯದ ಜನರ ಹಿತಕ್ಕಾಗಿ ಈಗಾಗಲೇ ಘೋಷಿಸಿರುವಂತೆ ಪಂಚರತ್ನ ಯೋಜನೆಗಳನ್ನು ಜಾರಿಗೊಳಿಸಲಾಗುವುದು. ಆ ಮೂಲಕ ರಾಜ್ಯವನ್ನು ಅಭಿವೃದ್ಧಿ ಕಡೆಗೆ ಕೊಂಡೊಯ್ಯಲಾಗುವುದು. ಹೀಗಾಗಿ ತಾಲೂಕಿನ ಜನತೆ ಯುವ ನಾಯಕ ಹಾಗೂ ಹಸನ್ಮುಖಿ ಜಿ.ಡಿ.ಹರೀಶ್‌ಗೌಡರನ್ನು ಈ ಬಾರಿ ಗೆಲ್ಲಿಸುವ ಮೂಲಕ ಪಕ್ಷವನ್ನು ಬಲಪಡಿಸಬೇಕು ಎಂದು ಕಿಕ್ಕಿರಿದು ತುಂಬಿದ ಸಭೆಯಲ್ಲಿ ಮನವಿ ಮಾಡಿದರು. ಜೆಡಿಎಸ್ ಅಧಿಕಾರಕ್ಕೆ ಬಂದರೆ ರೈತರಿಗೆ ● 6ನೇ ಪುಟಕ್ಕೆ

ಕೃಷ್ಣರಾಜ ಕ್ಷೇತ್ರದಲ್ಲಿ ಎಂ.ಕೆ.ಸೋಮಶೇಖರ್ ಪರ ಸಿದ್ದರಾಮಯ್ಯ ಮತಯಾಚನೆ



ಮೈಸೂರು, ಮೇ 6– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಮೈಸೂರಿನ ಅಗ್ರಹಾರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಂಗ್ರೆಸ್ ಪ್ರಣಾಳಿಕೆಯ ಕರಪತ್ರವನ್ನು ಮತದಾರರಿಗೆ ನೀಡುವ ಮೂಲಕ ಕೆಆರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಪರ ಮತಯಾಚಿಸಿದರು. ಈ ವೇಳೆ ಮಾತನಾಡಿದ ಅವರು, ಎಂ.ಕೆ. ಸೋಮಶೇಖರ್ ಸದಾ ಕಾಲ ಜನರ ನಡುವೆ ಇದ್ದು, ಅವರ ಕಷ್ಟಗಳಿಗೆ ಸ್ಪಂದಿಸುವ ವ್ಯಕ್ತಿ ಎಂದು ಮನೆ ಮಾತಾಗಿದ್ದಾರೆ. ಹೀಗಾಗಿ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಕೆಆರ್ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ನಂತರ ಸೋಮಶೇಖರ್ ಅವರು ಕ್ಷೇತ್ರದ ವಿವಿಧೆಡೆ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಮಾತನಾಡಿದ ಅವರು, ತಾವು ಶಾಸಕರಾಗಿದ್ದಾಗ ಕುರುಬಾರಹಳ್ಳಿ ಸರ್ವೇ ನಂಬರ್ 4ರ ● 6ನೇ ಪುಟಕ್ಕೆ

ಚಾಮುಂಡೇಶ್ವರಿಯಲ್ಲಿ ವಿ.ಕವೀಶ್‌ಗೌಡರ ಪರ ಪ್ರತಾಪ್‌ಸಿಂಹ ಮತಯಾಚನೆ



ಮೈಸೂರು, ಮೇ 6–ಚಾಮುಂಡೇಶ್ವರಿ ಕ್ಷೇತ್ರದ ವಿವಿಧೆಡೆ ರೋಡ್ ಶೋ ಮಾಡುವ ಮೂಲಕ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ಪರ ಬಿರುಸಿನ ಪ್ರಚಾರ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಕ್ಷೇತ್ರಕ್ಕೊಳಪಟ್ಟ ಹೂಟಗಳ್ಳಿ, ಬೋಗಾದಿ, ಶ್ರೀರಾಂಪುರ, ರಮ್ಮನಹಳ್ಳಿ ಹಾಗೂ ಹಿನಕಲ್ ಗ್ರಾಮ ಪಂಚಾಯತಿಗಳನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸುತ್ತಿರುವ ಶ್ರೇಯಸ್ಸು ರಾಜ್ಯ ಬಿಜೆಪಿ ಸರ್ಕಾರಕ್ಕೆ ಸಲ್ಲುತ್ತದೆ ಎಂದರು. ಮಂಡಕಳ್ಳಿ ವಿಮಾನ ನಿಲ್ದಾಣವನ್ನು ವಿಸ್ತರಿಸಲು ಈಗಾಗಲೇ ಭೂಸ್ವಾಧೀನ ಮಾಡಲಾಗಿದ್ದು, ಸದ್ಯದಲ್ಲೇ ವಿಮಾನ ನಿಲ್ದಾಣ ಮೇಲ್ದರ್ಜೆಗೇರಲಿದೆ ಎಂದು ಹೇಳಿದರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸ್ಟೇಡಿಯಂ ನಿರ್ಮಿಸಲು ಸರ್ಕಾರ ಬದ್ಧವಾಗಿದೆ ಎಂದ ಅವರು, ಕಾವೇರಿ ಹಾಗೂ ಕಬಿನಿ ನದಿಗಳು ಕ್ಷೇತ್ರಕ್ಕೆ ಹತ್ತಿರಕ್ಕೇ ಇದ್ದು, ಇಲ್ಲಿನ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಕಳೆದ 40 ವರ್ಷಗಳಿಂದ ಇಲ್ಲಿನ ಜನಪ್ರತಿನಿಧಿಗಳು ವಿಫಲರಾಗಿದ್ದರು ● 6ನೇ ಪುಟಕ್ಕೆ

ವಿಧಾನಸಭಾ ಚುನಾವಣೆ 2023

ದಿನಗಣನೆ

3

ಮೇ 9, 10ರಂದು ಬಸ್ ಸೇವೆ ವ್ಯತ್ಯಯ



ಬೆಂಗಳೂರು: ಮೇ 10ರಂದು ನಡೆಯುವ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಸಲುವಾಗಿ ಹೆಚ್ಚಿನ ಬಸ್ಸುಗಳನ್ನು, ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಸೇವೆಗೆ ನಿಯೋಜಿಲಾಗಿರುವುದರಿಂದ ಸಾರ್ವಜನಿಕ ಸಂಚಾರಕ್ಕೆ ಬಸ್ಸುಗಳ ಸೇವೆಯಲ್ಲಿ ಮೇ 9 ಮತ್ತು 10ರಂದು ವ್ಯತ್ಯಯವಾಗಲಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಮೇ 9 ಮತ್ತು 10ರಂದು ಎಂದಿನಂತೆ ಕೆಎಸ್‌ಆರ್‌ಟಿಸಿ ಬಸ್ಸುಗಳ ಸೇವೆ ಸಾಕಷ್ಟು ಸಂಖ್ಯೆಯಲ್ಲಿ ರಾಜ್ಯಾದ್ಯಂತ ಇರುವುದಿಲ್ಲ. ಸಾರ್ವಜನಿಕ ಪ್ರಯಾಣಿಕರು ಸಹಕರಿಸಬೇಕೆಂದು ಕೋರಿಕೊಂಡಿದೆ.

ರಾಜ್ಯದಲ್ಲಿ ಒಟ್ಟು 8,100 ಕೆಎಸ್‌ಆರ್‌ಟಿಸಿ ಬಸ್‌ಗಳಿದ್ದು, ಈ ಪೈಕಿ 3,700 ಬಸ್‌ಗಳು ಚುನಾವಣಾ ಕರ್ತವ್ಯಕ್ಕೆ ನಿಯೋಜನೆಯಾಗಿವೆ. ಮೇ 9 ಮತ್ತು 10 ರಂದು 4,400 ಬಸ್‌ಗಳು ಮಾತ್ರ ಸಂಚಾರ ಮಾಡುತ್ತವೆ.

ನಂಜನಗೂಡಿಗೆ ಇಂದು ಮೋದಿ

ಬಿಜೆಪಿ ಅಭ್ಯರ್ಥಿ ಬಿ.ಹರ್ಷವರ್ಧನ್ ಪರ ಭಾಷಣ





ನಂಜನಗೂಡು, ಮೇ 6–ರಾಜ್ಯ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೇ 7ರಂದು ಭಾನುವಾರ ಸಂಜೆ 4.30ಕ್ಕೆ ದಕ್ಷಿಣಕಾಶಿ ನಂಜನಗೂಡಿಗೆ ಆಗಮಿಸುತ್ತಿದ್ದು, ಚುನಾವಣಾ ಬಹಿರಂಗ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ ಎಂದು ಕಾರ್ಯಕ್ರಮದ ಉಸ್ತುವಾರಿ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ತಾಲೂಕಿನ ಎಲಚಿಗೆರೆ ಬೋರೆ ಗ್ರಾಮದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರದ ಕಾಶಿ ಲೋಕಸಭಾ ಸದಸ್ಯರಾಗಿ 9 ವರ್ಷ ಯಶಸ್ವಿಯಾಗಿ ವಿಶ್ವವೇ ಮೆಚ್ಚುವಂತೆ ಆಡಳಿತ ನಡೆಸಿದ ಪ್ರಧಾನಿ ಮೋದಿ ನಂಜನಗೂಡಿಗೆ ಆಗಮಿಸುತ್ತಿದ್ದಾರೆ. ರಾಜ್ಯದ ಬಹುತೇಕ ಭಾಗಗಳಲ್ಲಿ ಚುನಾವಣಾ ಪ್ರಚಾರ ಸಭೆಗಳನ್ನು ನಡೆಸಿರುವ ಮೋದಿಯವರು, ಭಾನುವಾರ ಸಂಜೆ 4.25ಕ್ಕೆ ಶಿವಮೊಗ್ಗದಿಂದ ಹೆಲಿಕಾಪ್ಟರ್‌ನಲ್ಲಿ ಎಲಚಗೆರೆ ಬೋರೆ ಬಳಿ ಬಂದು ಇಳಿಯಲಿದ್ದಾರೆ. ಗ್ರಾಮದಲ್ಲಿ 3 ಹೆಲಿಕಾಪ್ಟರ್‌ಗಳು ನಿಲ್ಲಿಸಲು ಹೆಲಿಪ್ಯಾಡ್ ನಿರ್ಮಿಸಲಾಗಿದೆ. 4.35ಕ್ಕೆ ವೇದಿಕೆಗೆ ಆಗಮಿಸುವ ಮೋದಿ 5.25ರವರೆಗೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ವೇದಿಕೆಯಲ್ಲಿ ಚಾಮರಾಜನಗರ ಜಿಲ್ಲೆ ಹಾಗೂ ಮೈಸೂರು ಗ್ರಾಮಾಂತರ ಜಿಲ್ಲೆಯ ತಲಾ 4 ಮಂದಿ ಪಕ್ಷದ ಅಭ್ಯರ್ಥಿಗಳು, ಇಬ್ಬರು ಸಂಸದರು, ಶಾಸಕರು ಸೇರಿದಂತೆ 33 ಮಂದಿಗೆ ವೇದಿಕೆಯಲ್ಲಿ ಅವಕಾಶ ಕಲ್ಪಿಸಲಾಗುವುದು. ಕಾರ್ಯಕ್ರಮಕ್ಕೆ ನಂಜನಗೂಡು–ಮೈಸೂರಿನ 3 ಸಾವಿರ ಕಾರ್ಯಕರ್ತರು ದ್ವಿಚಕ್ರ ವಾಹನಗಳಲ್ಲಿ ಮೆರವಣಿಗೆ ಮೂಲಕ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಲಿದ್ದಾರೆ ಎಂದರು. ಕಾರ್ಯಕ್ರಮ ಆಯೋಜನೆಗೊಂಡಿರುವ ರಸ್ತೆಯ ಇಕ್ಕೆಲಗಳಲ್ಲಿ ಪ್ರಧಾನಮಂತ್ರಿಗಳ 9 ವರ್ಷಗಳ ಆಡಳಿತದಲ್ಲಿ ರಾಜ್ಯಕ್ಕೆ ನೀಡಿರುವ ಕೊಡುಗೆಗಳ ಚಿತ್ರಣವನ್ನು ವಿಷಯಾಧಾರಿತವಾಗಿ ಕಟ್ಟಿಕೊಡುವ ಹೆಲ್ಡಿಂಗ್ಸ್‌ಗಳನ್ನು ಪ್ರದರ್ಶಿಸಲಾಗುವುದು. ವೇದಿಕೆಗೆ ಆಗಮಿಸುವ ಪ್ರಧಾನಿಗಳಿಗೆ ಜಾನಪದ ನೃತ್ಯ, ವೀರಭದ್ರ ಕುಣಿತ, ಡೊಳ್ಳು ಕುಣಿತ ಮುಂತಾದ ಸ್ಥಳೀಯ ಜಾನಪದ ಕಲಾ ತಂಡಗಳು ಸ್ವಾಗತ ಕೋರಲಿವೆ. ಅಲ್ಲದೆ ಪ್ರಸಿದ್ಧ ಚಿತ್ರಕಾರರು ಇಕ್ಕೆಲಗಳಲ್ಲಿ ನಿಂತು ಅವರನ್ನು ಸ್ವಾಗತಿಸಲಿದ್ದಾರೆ. 14 ಕಡೆ 4 ಚಕ್ರದ ವಾಹನಗಳ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲಾಗಿದೆ. ಕಾರ್ಯಕ್ರಮದ ಅಂಗವಾಗಿ 2 ಸಾವಿರ ಮಂದಿ ಯುವಕರಿಗೆ ವಿಶೇಷ ಟ್ಯಾಟೋ (ಹಚ್ಚೆ) ಹಾಗೂ 2 ಸಾವಿರ ಮಂದಿ ಮಹಿಳೆಯರಿಗೆ ಮೆಹಂದಿ ಹಾಕುವ ಮೂಲಕ ಸ್ವಾಗತಿಸಲಾಗುವುದು. ಕಾರ್ಯಕ್ರಮದ ● 9ನೇ ಪುಟಕ್ಕೆ


ಮಲ್ಲಿಕಾರ್ಜುನ ಖರ್ಗೆ ಹತ್ಯೆಗೆ ಸಂಚು

● ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಗಂಭೀರ ಆರೋಪ ● ಪ್ರಧಾನಿ ಮೋದಿ, ಮುಖ್ಯಮಂತ್ರಿ ಬೊಮ್ಮಾಯಿ ಮೌನಕ್ಕೆ ಆಕ್ರೋಶ



ಬೆಂಗಳೂರು, ಮೇ 6(ಕೆಎಂಶಿ)– ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಕುಟುಂಬದವರನ್ನು ಹತ್ಯೆ ಮಾಡಲು ಸಂಚು ನಡೆದಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಗಂಭೀರ ಆರೋಪ ಮಾಡಿದ್ದಾರೆ. ಚಿತ್ತಾಪುರ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ್ ಅವರು ಮಾತನಾಡಿದ್ದು ಎನ್ನಲಾದ ಆಡಿಯೋವನ್ನು, ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿ, ರಾಷ್ಟ್ರೀಯ ನಾಯಕನ ಹತ್ಯೆ ಸಂಚು ನಡೆದಿದ್ದರೂ, ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೌನಕ್ಕೆ ಶರಣಾಗಿದ್ದಾರೆ ಎಂದು ದೂರಿದರು. ಮುಂದುವರೆದು ಮಾತನಾಡಿದ ಮುಖ್ಯಮಂತ್ರಿಯವರು, ಮಣಿಕಂಠ ರಾಠೋಡ ಹೇಳಿದ್ದಾರೆ ಎನ್ನಲಾದ ವಿಡಿಯೋ ನನ್ನ ಗಮನಕ್ಕೆ ಬಂದಿದೆ. ಇದನ್ನು ತನಿಖಾ ಸಂಸ್ಥೆಗೆ ವಹಿಸಿದ್ದೇನೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡಿದ್ದು, ತನಿಖೆಯಿಂದ ಸತ್ಯಾಸತ್ಯತೆ ಹೊರಬೀಳಲಿದೆ ಎಂದರು.

ಮತ್ತೆ ಮುಖ್ಯಮಂತ್ರಿ: ಬಾಯ್ಬಿಟ್ಟ ಬೊಮ್ಮಾಯಿ



ಬೆಂಗಳೂರು: ಪಕ್ಷ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿದರೆ ನಾನೇ ಮುಂದಿನ ಸಿಎಂ ಎಂದು ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದಲ್ಲಿ ಮರು ಆಯ್ಕೆ ಬಯಸಿ, ಕಣಕ್ಕಿಳಿದಿರುವ ಸಿಎಂ ಅವರು ಪ್ರಚಾರ ಸಂದರ್ಭದಲ್ಲಿ ನಿಮ್ಮ ಮತಕ್ಕೆ ಸಿಎಂ ಮಾಡುವ ಶಕ್ತಿ ಇದೆ. ನಿಮ್ಮ ಆಶೀರ್ವಾದದಿಂದ ಮುಖ್ಯಮಂತ್ರಿಯಾಗಿದ್ದೇನೆ. ಮತ್ತೆ ಅವಕಾಶ ನೀಡಿದರೆ, ಇದೇ ಅಧಿಕಾರ ಮುಂದುವರೆಯುತ್ತದೆ ಎಂದಿದ್ದಾರೆ.

ಪ್ರಧಾನಿ ಮೋದಿ ಎಷ್ಟೇ ಬಾರಿ ರಾಜ್ಯಕ್ಕೆ ಬಂದರೂ ಮತದಾರರ ಮೇಲೆ ಏನೂ ಪರಿಣಾಮ ಬೀರಲ್ಲ

ನಮ್ಮ ಜನ ಈಗಾಗಲೇ ಕಾಂಗ್ರೆಸ್ ಸರ್ಕಾರ ಬಯಸಿದ್ದಾರೆ

ವರುಣದಲ್ಲಿ ಬಿಜೆಪಿ ಷಡ್ಯಂತ್ರ ನಡೆಯಲ್ಲ, ಮತದಾರರು ನನಗೆ ಆಶೀರ್ವದಿಸುತ್ತಾರೆ; ಮಾಧ್ಯಮ ಸಂವಾದದಲ್ಲಿ ಮಾಜಿ ಸಿಎಂ ಬಲವಾದ ವಿಶ್ವಾಸ

ಮೈಸೂರು,ಮೇ 6(ಪಿಎಂ)–ಪ್ರಧಾನಿ ನರೇಂದ್ರ ಮೋದಿ ಬಿಜೆಪಿ ಪರ ಪ್ರಚಾರಕ್ಕೆ ಬಂದಿದ್ದರೂ ಮತದಾರರ ಮೇಲೆ ಪರಿಣಾಮ ಉಂಟಾಗದು. ರಾಜ್ಯದ ಜನತೆ ಈ ಬಾರಿ ಕಾಂಗ್ರೆಸ್ ಸರ್ಕಾರ ಬಯಸಿದ್ದಾರೆ. ವರುಣ ಕ್ಷೇತ್ರದ ಜನತೆ ಜಾತಿ ನೋಡಿ ಮತ ಹಾಕಲ್ಲ. ಹಾಗಾಗಿ ಇಲ್ಲಿ ಬಿಜೆಪಿ ಷಡ್ಯಂತ್ರ ನಡೆಯಲ್ಲ. ಕ್ಷೇತ್ರದ ಜನತೆ ನನಗೆ ಆಶೀರ್ವಾದ ಮಾಡೇ ಮಾಡುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ, ವಿಪಕ್ಷ ನಾಯಕರೂ ಆದ ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ವಿಧಾನಸಭಾ ಚುನಾವಣೆ ಪ್ರಯುಕ್ತ ಶನಿವಾರ ಹಮ್ಮಿಕೊಂಡಿದ್ದ ಪತ್ರಿಕಾ ಸಂವಾದದಲ್ಲಿ ಅಭಿಪ್ರಾಯ ಹಂಚಿಕೊಂಡರು. ರಾಜ್ಯ ಬಿಜೆಪಿಯವರು ಮತ ಕೇಳುವ ನೈತಿಕತೆ ಕಳೆದುಕೊಂಡಿದ್ದಾರೆ. ಹಾಗಾಗಿ ಮೋದಿ ಮೇಲೆ ಅವಲಂಬಿತರಾಗಿದ್ದಾರೆ. ಹೆಚ್ಚು ಬಾರಿ ಕರೆತಂದರೆ ಅನುಕೂಲವಾಗುತ್ತದೆ ಎಂಬ ಭ್ರಮೆಯಲ್ಲಿದ್ದಾರೆ. ಇದು ಕರ್ನಾಟಕ ರಾಜ್ಯಕ್ಕೆ ನಡೆಯುವ ಚುನಾವಣೆ. ಈ ಸಂದರ್ಭದಲ್ಲಿ ಜನ ಚರ್ಚೆ ಮಾಡುವುದು, ಪರಿಹಾರ



ಬಯಸುವುದು ಸ್ಥಳೀಯವಾಗಿರುತ್ತದೆ. ಮೋದಿ ಎಷ್ಟು ಬಾರಿ ರಾಜ್ಯಕ್ಕೆ ಭೇಟಿ ನೀಡಿದರೂ ಪರಿಣಾಮ ಉಂಟು ಮಾಡದು ಎಂದು ಪ್ರತಿಪಾದಿಸಿದರು.

ಸ್ಪಷ್ಟ ಬಹುಮತ ಇದ್ದರೆ ಸುಭದ್ರ ಸರ್ಕಾರ: 2004, 2008 ಮತ್ತು 2018ರಲ್ಲಿ ಅತಂತ್ರ ವಿಧಾನಸಭೆ ಆಯಿತು. ಈ ಅವಧಿಯಲ್ಲಿ ಸುಭದ್ರ ಸರ್ಕಾರ ಸಾಧ್ಯವಾಗಲಿಲ್ಲ. ರಾಜ್ಯದಲ್ಲಿ ಸುಭದ್ರ ಸರ್ಕಾರ ಇಲ್ಲವಾದರೆ ಜನರ ಆಶೋತ್ತರ ಈಡೇರಿಸಲು ಸಾಧ್ಯವಾಗುವುದಿಲ್ಲ. 2018ರಲ್ಲಿ ಬಿಜೆಪಿ ಹೆಚ್ಚು ಸ್ಥಾನ ಪಡೆದರೂ ಬಹುಮತ ಇರಲಿಲ್ಲ. ಬಹುಮತ ಸಾಬೀತು ಸಾಧ್ಯವಾಗದೇ ಬಿ.ಎಸ್.ಯಡಿಯೂರಪ್ಪ ಮೂರೇ ದಿನಕ್ಕೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಬಳಿಕ ರಚನೆಯಾದ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರವನ್ನು ಆಪರೇಷನ್ ಕಮಲದ ಮೂಲಕ ● 9ನೇ ಪುಟಕ್ಕೆ

ಮೊಮ್ಮಗ ಉತ್ತರಾಧಿಕಾರಿ ಎಂದು ಹೇಳಿಲ್ಲ

ಮೈಸೂರು, ಮೇ 6(ಪಿಎಂ)– ಪ್ರಧಾನಿ ನರೇಂದ್ರ ಮೋದಿಯವರ ಬೆಂಗಳೂರಿನ ರೋಡ್ ಶೋ ಹಿನ್ನೆಲೆಯಲ್ಲಿ ನೀಟ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಒಂದು ದಿನ ಮುಂಗಡವಾಗಿ ಬಂದು ಉಳಿದುಕೊಳ್ಳಬೇಕೆಂದು ಶೋಭಾ ಕರಂದ್ಲಾಜೆ ಹೇಳಿಕೆ ನೀಡಿರುವುದು ಸರಿಯಲ್ಲ. ಇದನ್ನು ಖಂಡಿಸುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ನೀಟ್ ಪರೀಕ್ಷೆ ಬರೆಯುತ್ತಿದ್ದಾರೆ. ರೋಡ್ ಶೋದಿಂದ ಹಲವು ರಸ್ತೆಗಳಲ್ಲಿ ನಿರ್ಬಂಧ ವಿಧಿಸಲಾಗುತ್ತದೆ. ಹಾಗಾಗಿ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ತೊಂದರೆ ಆಗಲಿದೆ. ಮೋದಿಯವರು ಚುನಾವಣಾ ಪ್ರಚಾರ ಮಾಡುವುದಕ್ಕೆ ನಮ್ಮದೇನು ವಿರೋಧವಿಲ್ಲ. ಆದರೆ ವಿದ್ಯಾರ್ಥಿಗಳಿಗೆ ಆಗುವ ತೊಂದರೆಗೆ ಹೊಣೆ ಯಾರು? ಎಂದು ಪ್ರತಿಕ್ರಿಯಿಸಿದರು.

■ **ನನಗೆ ಅನುಮತಿ ಕೊಡಲಿಲ್ಲ:** ಮೋದಿಯವರು ಹೆಲಿಕಾಪ್ಟರ್‌ನಲ್ಲಿ ಚುನಾವಣಾ ಪ್ರಚಾರಕ್ಕಾಗಿ ಹೊಸ ಕೋಟೆಗೆ ಹೋಗುತ್ತಿದ್ದರು. ಈ ಕಾರಣಕ್ಕೆ ನಾನು ಗಂಗಾವತಿಗೆ ಹೋಗಲು ಅನುಮತಿಯನ್ನೇ ನೀಡಿಲ್ಲ. ಅವರಂತೆ ನಾನೂ ಚುನಾವಣಾ ಪ್ರಚಾರಕ್ಕಾಗಿಯೇ ಹೋಗಬೇಕಿತ್ತು. ಆದರೆ ಎಷ್ಟೇ ಮನವಿ ಮಾಡಿದರೂ ಅನುಮತಿ ನೀಡಲಿಲ್ಲ. ವಿರೋಧ ಪಕ್ಷ ನಾಯಕನಾದರೂ ಅನುಮತಿ ನೀಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

■ **ಮೊಮ್ಮಗ ಉತ್ತರಾಧಿಕಾರಿ ಎಂದು ಹೇಳಿಲ್ಲ:** ಮೊಮ್ಮಗನನ್ನು ನಾನು ಉತ್ತರಾಧಿಕಾರಿ ಎಂದು ಹೇಳಿಲ್ಲ. ನನ್ನ ಮೊಮ್ಮಗ ಇನ್ನು 17 ವರ್ಷದ ಹುಡುಗ. ಒಂದು ವೇಳೆ ರಾಜಕಾರಣಕ್ಕೆ ಬರ ಬೇಕೆಂದರೂ ಇನ್ನೂ 8 ರಿಂದ 10 ವರ್ಷ ಆಗಬೇಕು. ನನ್ನ ಮೊಮ್ಮಗ ಬರಬಹುದು ಎಂದಷ್ಟೇ ಹೇಳಿದ್ದು, ಉತ್ತರಾಧಿಕಾರಿ ಎಂದು ಹೇಳಿಲ್ಲ ಎಂದು ಸ್ಪಷ್ಟಪಡಿಸಿದರು.

ವರುಣ ಕ್ಷೇತ್ರದ ಜನ ಜಾತಿವಾದಿಗಳಲ್ಲ

ಮೈಸೂರು,ಮೇ 6(ಪಿಎಂ)–ವರುಣ ಕ್ಷೇತ್ರದ ಜನತೆ ಜಾತಿವಾದಿಗಳಲ್ಲ. ಈ ಬಿಜೆಪಿಯವರು ಜಾತಿ ಜಾತಿಗಳ ಮಧ್ಯೆ ವಿಷ ಹಾಕಲು ಆರಂಭಿಸಿದ್ದು, ಅವರ ಈ ಷಡ್ಯಂತ್ರ ನಡೆಯುವುದಿಲ್ಲ. ನೂರಕ್ಕೆ ನೂರು ಹಿಂದಿಗಿಂತಲೂ ಹೆಚ್ಚು ಮತಗಳ ಅಂತರದಿಂದ ಕ್ಷೇತ್ರದ ಜನತೆ ಗೆಲ್ಲಿಸಲಿದ್ದಾರೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು. ಹುಟ್ಟೂರು ಇರುವ ಕ್ಷೇತ್ರದಲ್ಲೇ ಚುನಾವಣಾ ರಾಜಕಾರಣವನ್ನು ಕೊನೆಗೊಳಿಸಲು ನಿರ್ಧರಿಸಿ ವರುಣದಿಂದ ಸ್ಪರ್ಧೆ ಮಾಡಿದ್ದೇನೆ. ವರುಣದ ಜನ ಜಾತಿವಾದಿಗಳಲ್ಲ. ಹಾಗಾಗಿಯೇ ನನ್ನ ಪುತ್ರ ಡಾ.ಯತೀಂದ್ರಗೆ 59 ಸಾವಿರ ಮತಗಳ ಲೀಡ್ ಬರಲು ಸಾಧ್ಯವಾಯಿತು. ನನಗೆ 2008ರಲ್ಲಿ 28 ಸಾವಿರ, 2013ರಲ್ಲಿ 31 ಸಾವಿರ ಲೀಡ್ ಬಂದಿತ್ತು. ಜಾತಿ ಜಾತಿಗಳ ಮಧ್ಯೆ ವಿಷ ಹಾಕುತ್ತಿರುವ ಬಿಜೆಪಿಯವರ ಷಡ್ಯಂತ್ರ ನಡೆಯಲ್ಲ ಎಂದು ಹೇಳಿದರು.

ಕನ್ನಡಿಗರಿಗಾಗಿ ಕೊನೆ ಉಸಿರಿರುವವರೆಗೂ ಹೋರಾಟ: ದೇವೇಗೌಡ

ಮಂಡ್ಯ, ಮೇ 6– ಕನ್ನಡಿಗರಿಗಾಗಿ, ಕಾವೇರಿ, ಮಹದಾಯಿ ಸೇರಿದಂತೆ ಇನ್ನಿತರೆ ಸಮಸ್ಯೆಗಳ ವಿರುದ್ಧ ಪ್ರಾದೇಶಿಕ ಪಕ್ಷದ ದನಿಯಾಗಿ ನನ್ನ ಕೊನೆ ಉಸಿರಿರುವವರೆಗೂ ಹೋರಾಡುತ್ತೇನೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ತಿಳಿಸಿದರು.

ತಾಲೂಕಿನ ಕೆರಗೋಡು ಗ್ರಾಮದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅಭ್ಯರ್ಥಿ ಬಿ.ಆರ್.ರಾಮಚಂದ್ರ ಪರ ಮತಯಾಚಿಸಿ ಮಾತನಾಡಿದ ಅವರು, ಜೆಡಿಎಸ್ ಕನ್ನಡಿಗರ ಪಕ್ಷವಾಗಿದ್ದು, ಕರ್ನಾಟಕದ ಸಮಸ್ಯೆಗಳ ವಿರುದ್ಧ ರಾಷ್ಟ್ರೀಯ ಪಕ್ಷಗಳು ಒಮ್ಮೆಯೂ ದೊಡ್ಡ ಹೋರಾಟ ಮಾಡಿಲ್ಲ. ಸಮಸ್ಯೆಗಳು ಬಂದಾಗ ದೆಹಲಿವರೆಗೂ ನಾನೇ ಹೋಗಿ ಬಗೆಹರಿಸಿರುವ ಹತ್ತಾರು ಉದಾಹರಣೆಗಳಿವೆ. ಚುನಾವಣೆಗೆ ಸೀಮಿತವಾಗಿ ಈಗ ಜೆಡಿಎಸ್ ವಿರುದ್ಧ ಮಾತನಾಡುತ್ತಾ ಮತ ಕೇಳುತ್ತಿರುವ ರಾಷ್ಟ್ರೀಯ ಪಕ್ಷದ ನಾಯಕರ ಮಾತುಗಳಿಗೆ ಮರುಳಾಗದೇ ಜೆಡಿಎಸ್ ಬೆಂಬಲಿಸಿ ಎಂದರು.



ಕುಮಾರಸ್ವಾಮಿ ಈಗಾಗಲೇ ಪಂಚರತ್ನ ಯೋಜನೆ ಹೆಸರಿನಲ್ಲಿ ಜನಮಾನಸ ತಲುಪಿದ್ದಾರೆ. ಹೆಚ್ಚಿಕೆ ಈ ಬಾರಿ ರಾಜ್ಯದ ಮುಖ್ಯಮಂತ್ರಿಯಾಗುವುದು ಖಚಿತ. ನಿಮ್ಮ ಸಮಸ್ಯೆಗಳಿಗೆಲ್ಲಾ ಮುಕ್ತಿ ಸಿಗಲಿದೆ. ಶಿಕ್ಷಣ, ನಿರುದ್ಯೋಗ, ಸಾಲಮನ್ನಾ ಸೇರಿದಂತೆ ಹಲವು ಯೋಜನೆಗಳನ್ನು ಈಡೇರಿಸುವುದೇ ನಮ್ಮ ಗುರಿ. ಈ ನಿಟ್ಟಿನಲ್ಲಿ ಜೆಡಿಎಸ್‌ಗೆ ನಿಮ್ಮ ಸಹಕಾರ ಬೇಕು ಎಂದರು.

ಬಿ.ಆರ್.ರಾಮಚಂದ್ರ ಮಂಡ್ಯ ಕ್ಷೇತ್ರಕ್ಕೆ ಸಮರ್ಥ ಅಭ್ಯರ್ಥಿಯಾಗಿದ್ದಾರೆ. ಯಾರು ಏನೇ ಬಂಡಾಯವೆದ್ದರೂ ಅವು ಜೆಡಿಎಸ್‌ಗೆ ಸಮಸ್ಯೆಯಾಗುವುದಿಲ್ಲ. ಮಂಡ್ಯ ಜನರಿಗೆ ಕಾವೇರಿ ವಿಚಾರದಲ್ಲಿ ಸಮಸ್ಯೆಯಾದಾಗ ಜಿಲ್ಲೆ ಪರ ನಿಂತವನು ದೇವೇಗೌಡ. ಸಾಲಬಾಧೆ, ರೈತರ ಸಮಸ್ಯೆಗಳು, ಕಬ್ಬು ಬೆಳೆಗಾರರ ಸಮಸ್ಯೆಗಳ ಈಡೇರಿಕೆಗೆ ಹೋರಾಟ ಮಾಡಿದವನು ಇದೇ ದೇವೇಗೌಡ. ಈ ನಿಟ್ಟಿನಲ್ಲಿ ನಿಮ್ಮ ಸಮಸ್ಯೆ ಬಂದಾಗ ಕೈ ಹಿಡಿದ ನಮಗೆ ನಿಮಗೆ ಮತ ಕೊಟ್ಟರೆ ಕಡೆ ಉಸಿರಿರುವವರೆಗೆ ನಿಮ್ಮ ಬೆಂಬಲಕ್ಕೆ ನಾನು ನಿಲ್ಲುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಅಭ್ಯರ್ಥಿ ರಾಮಚಂದ್ರ, ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾಖಾನ್, ಮಾಜಿ ಶಾಸಕರಾದ ಜಿ.ಬಿ.ಶಿವಕುಮಾರ್, ಕೆ.ಟಿ. ಶ್ರೀಕಂಠೇಗೌಡ, ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ, ನಗರಸಭೆ ಮಾಜಿ ಅಧ್ಯಕ್ಷೆ ಅಂಬುಜಮ್ಮ, ಮನ್‌ಮುಲ್ ಉಪಾಧ್ಯಕ್ಷ ರಘುನಂದನ್, ಜೆಡಿಎಸ್ ಮುಖಂಡರಾದ ವಸಂತ್, ಉದ್ಯಮಿ ಸ್ವಾಮಿ, ಆನಂದ, ಶ್ರೀನಿವಾಸ್, ದಯಾನಂದ್, ರಂಗಸ್ವಾಮಿ, ರಾಜೇಶ್ ಮತ್ತಿತರರಿದ್ದರು.

ವಂಚನೆ, ಮೋಸಕ್ಕೆ ಮರುಳಾಗಬೇಡಿ

ಭಾರತೀನಗರ: ವಂಚನೆ, ಮೋಸಕ್ಕೆ ಮರುಳಾಗದೇ ಶಾಸಕ ಡಿ.ಸಿ.ತಮ್ಮಣ್ಣ ಅವರಿಗೆ ಮತನೀಡಿ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ತಿಳಿಸಿದರು.

ಕೆ.ಎಂ.ದೊಡ್ಡಿಯಲ್ಲಿ ಜೆಡಿಎಸ್ ಅಭ್ಯರ್ಥಿ ಡಿ.ಸಿ.ತಮ್ಮಣ್ಣ ಪರ ಮತಯಾಚಿಸಿದ ಅವರು, ಮೋಸ, ವಂಚನೆ ಮಾಡುವ ವ್ಯಕ್ತಿಗಳ ಬಗ್ಗೆ ನಾವು ಮಾತನಾಡುವುದು ಬೇಡ. ಅಂತಹವರ ಹೆಸರನ್ನು ಸೂಚಿಸುವುದು ಒಳ್ಳೆಯದಲ್ಲ ಎಂದು ಪರೋಕ್ಷವಾಗಿ ಕಾಂಗ್ರೆಸ್ ಅಭ್ಯರ್ಥಿ ಉದಯ್ ಮತ್ತು ಬಿಜೆಪಿ ಅಭ್ಯರ್ಥಿ ಎಸ್.ಪಿ.ಸ್ವಾಮಿ ಬಗ್ಗೆ ಕುಟುಕಿದರು.

ಡಿ.ಸಿ.ತಮ್ಮಣ್ಣ ನೀರಾವರಿ, ಶಿಕ್ಷಣ, ಕೈಗಾರಿಕೆ, ರಸ್ತೆ ಅಭಿವೃದ್ಧಿ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಿದ್ದಾರೆ. ಪ್ರಸ್ತುತ ಕೆಲವರನ್ನು ರಾಜಕೀಯಕ್ಕೆ ಕರೆತಂದು ಬೆಳೆಸಿದ ಮೇಲೆ ಅವರನ್ನೇ ಕುಟುಕುವ ಸ್ಥಿತಿ ನಿರ್ಮಾಣವಾಗಿದೆ. ತಮ್ಮಣ್ಣ ಕೆಲವರಿಂದ ಸಾಕಷ್ಟು ನೋವು ತಿಂದಿದ್ದಾರೆ. ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಅವರ ಅಂತಾಳವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅದನ್ನು ಅರ್ಥ ಮಾಡಿಕೊಂಡು ವಿಧಾನಸಭೆಗೆ ಕಳುಹಿಸಿಕೊಡುವುದು ಕ್ಷೇತ್ರದ ಜನರ ಜವಾಬ್ದಾರಿ ಎಂದರು.



ಜೆಡಿಎಸ್ ಅಭ್ಯರ್ಥಿ ಡಿ.ಸಿ.ತಮ್ಮಣ್ಣ ಮಾತನಾಡಿ, ಈ ಹಿಂದೆ ನಮ್ಮ ಪಕ್ಷದಿಂದಲೇ ಜಿಪಂ ಸದಸ್ಯ, ಅಧ್ಯಕ್ಷರಾಗಿ ಇಂದು ನಮ್ಮ ವಿರುದ್ಧ ತಿರುಗಿ ಬಿದ್ದಿದ್ದಾರೆ. ಅಧ್ಯಕ್ಷರಾಗಬೇಕಾದರೆ ನಾನು ಮತ್ತು ದೇವೇಗೌಡರು ಬೇಕಾಗಿತ್ತು. ಷರತ್ತಿನ ಮೇಲೆ ಅಧ್ಯಕ್ಷರಾಗಿದ್ದರು. ರಾಜೀನಾಮೆ ಕೇಳಿದ ಮೇಲೆ ಅವರ ಬಣ್ಣ ಬಯಲಾಯಿತು. ಈಗ ನಮ್ಮ ಎದುರಾಳಿಯಾಗಿ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಎರಡೂವರೆ ವರ್ಷದ ಜಿಪಂ ಅಧ್ಯಕ್ಷರ ಅವಧಿಯಲ್ಲಿ ಕ್ಷೇತ್ರಕ್ಕೆ ಏನು ಕೊಡುಗೆ ಕೊಟ್ಟಿದ್ದಾರೆ ಎಂದು ಪ್ರಶ್ನಿಸಿದರು.

ವೇದಿಕೆಯಲ್ಲಿ ಮಾಜಿ ಶಾಸಕರಾದ ಕಲ್ಪನಾ ಸಿದ್ದರಾಜು, ಮುಖಂಡರಾದ ಎಂ.ಎಸ್.ಗುರುಚರಣ್, ಸೌಮ್ಯ, ಕವಿತಾ, ಚಿಕ್ಕತಿಮ್ಮೇಗೌಡ ಸೇರಿದಂತೆ ಹಲವರಿದ್ದರು.

ಡಬಲ್ ಇಂಜಿನ್ ಸರ್ಕಾರದಿಂದ ಪ್ರಗತಿ



ಮದ್ದೂರು, ಮೇ 6– ಡಬಲ್ ಇಂಜಿನ್ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳಿಂದ ರಾಜ್ಯ ಪ್ರಗತಿ ಸಾಧಿಸಿದ್ದು, ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಸಹಕರಿಸಬೇಕೆಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮನವಿ ಮಾಡಿದರು. ಪಟ್ಟಣದ ಪ್ರವಾಸಿ ಮಂದಿರದಿಂದ ಕೊಲ್ಲಿ ವೃತ್ತದವರೆಗೆ ರೋಡ್ ಶೋ ನಡೆಸಿ ಬಳಿಕ ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರ ರೈತರ ಮಕ್ಕಳಿಗೆ ವಿದ್ಯಾನಿಧಿ ಯೋಜನೆ ಅನುಷ್ಠಾನಗೊಳಿಸುವ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದೆ. ರಾಜ್ಯದ ಜನರಿಗೆ ವಿವಿಧ ಸೌಲಭ್ಯಗಳನ್ನು ತಲುಪಿಸುವ ಜೊತೆಗೆ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 7 ಲಕ್ಷ ಮನೆಗಳನ್ನು ವಿತರಿಸಿದ್ದು, ರಾಷ್ಟ್ರದುದ್ದಕ್ಕೂ ಶೌಚಾಲಯಗಳನ್ನು ನಿರ್ಮಿಸಿ ಸ್ವಚ್ಛ ಭಾರತ್ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ ಎಂದರು.

ಮುಂದಿನ ಅವಧಿಗೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಲ್ಲಿ 5 ಕೆಜಿ ಸಿರಿಧಾನ್ಯ, 5 ಕೆಜಿ ಅಕ್ಕಿ, ಪ್ರತಿ ಬಿಪಿಎಲ್ ಕುಟುಂಬಕ್ಕೆ ಅರ್ಧ ಲೀಟರ್ ಹಾಲನ್ನು ವಿತರಿಸಲು ತೀರ್ಮಾನಿಸಿದ್ದು, ಕ್ಷೇತ್ರದ ಅಭ್ಯರ್ಥಿ ಎಸ್.ಪಿ.ಸ್ವಾಮಿ ಅವರಿಗೆ ಆಶೀರ್ವದಿಸುವಂತೆ ಮನವಿ ಮಾಡಿದರು. ಈ ವೇಳೆ ಬಿಜೆಪಿ ಅಭ್ಯರ್ಥಿ ಎಸ್.ಪಿ.ಸ್ವಾಮಿ, ಜಿಲ್ಲಾಧ್ಯಕ್ಷ ಸಿ.ಪಿ. ಉಮೇಶ್, ತಾಲೂಕು ಅಧ್ಯಕ್ಷ ಸಿ.ಕೆ.ಸತೀಶ್, ಟಿಎಪಿಸಿಎಂಎಸ್ ನಿರ್ದೇಶಕ ಚಂದ್ರನಾಯಕ್, ಜಿಪಂ ಮಾಜಿ ಸದಸ್ಯರಾದ ಮರಿ ಹೆಗಡೆ, ಕೃಷ್ಣೇಗೌಡ, ಬೋರಯ್ಯ, ಮುಖಂಡರಾದ ಮನೋಜ್, ವೆಂಕಟೇಶ್, ಸಿದ್ದರಾಮಯ್ಯ, ನಾಗೇಶ್, ಶಿವರಾಮು, ಶಿವರಾಜು, ಪ್ರಕಾಶ್ ಇತರರಿದ್ದರು.

ಬಿಜೆಪಿಯಿಂದ ವೀರಶೈವ ಸಮುದಾಯ ಕಡೆಗಣನೆ: ಎಂ.ಬಿ.ಪಾಟೀಲ್

ಮಳವಳ್ಳಿ, ಮೇ 6– ಬಿಜೆಪಿ ವೀರಶೈವ ಲಿಂಗಾಯಿತ ಸಮುದಾಯವನ್ನು ಕಡೆಗಣಿಸುತ್ತಿದ್ದು, ಹೀಗಾಗಿ ಸಮುದಾಯದವರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕೆಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್ ಮನವಿ ಮಾಡಿದರು.

ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಲಿಂಗಾಯಿತ ಸಮುದಾಯದ ಮುಖಂಡರನ್ನು ತುಳಿಯಲು ಅದೇ ಪಕ್ಷದ ನಾಯಕರನ್ನು ಬಳಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಯಡಿಯೂರಪ್ಪ ಅವರನ್ನು ಮೂಲೆ ಗುಂಪು ಮಾಡಲಿದ್ದಾರೆಂದು ಭವಿಷ್ಯ ನುಡಿದರು.

ವೀರೇಂದ್ರ ಪಾಟೀಲ್ ಅವರನ್ನು ಆರೋಗ್ಯ ಸಮಸ್ಯೆಯಿಂದಾಗಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲಾಗಿತ್ತೆ ಹೊರತು ಬೇರೆ ಕಾರಣ ಇರಲಿಲ್ಲ. ಆದರೆ ಬಿಜೆಪಿ ಯಡಿಯೂರಪ್ಪ ಜಗದೀಶ್ ಶೆಟ್ಟರ್‌ರಂತಹ ನಾಯಕರು ಆರೋಗ್ಯವಾಗಿದ್ದರೂ ಅಧಿಕಾರದಿಂದ ದೂರವಿಟ್ಟಿರುವುದನ್ನು ವೀರಶೈವ ಸಮುದಾಯ ಗಮನಿಸಬೇಕಿದೆ. ಬೇರೆಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲು ಹಾಗೂ ವೀರಶೈವ ಲಿಂಗಾಯಿತ ಸಮುದಾಯವನ್ನು ಅಧಿಕಾರದಿಂದ ದೂರವಿಡಲು ಸಂಚು ರೂಪಿಸಲಾಗಿದ್ದು, ವೀರಶೈವ ಲಿಂಗಾಯಿತ ಸಮುದಾಯ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕೆಂದು ಕೋರಿದರು.

ಪಕ್ಷವನ್ನು ಅಧಿಕಾರಕ್ಕೆ ತಂದ ಬಿ.ಎಸ್.ಯಡಿಯೂರಪ್ಪ ಅವರನ್ನು ಬಿಜೆಪಿ ವಯಸ್ಸಿನ ಕಾರಣ ನೀಡಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಸಿ ಪ್ರಹ್ಲಾದ್ ಜೋಶಿ ಅವರನ್ನು ಮುಖ್ಯಮಂತ್ರಿ ಮಾಡಲು ಮುಂದಾಗಿತ್ತು. ಸಮುದಾಯದ ಸ್ವಾಮೀಜಿಗಳ ಜೊತೆಗೂಡಿ ಶಾಮನೂರು ಶಿವಶಂಕರಪ್ಪ ವಿರೋಧಿಸಿದ ಹಿನ್ನೆಲೆಯಲ್ಲಿ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಲಾಯಿತು ಎಂದರು.



ತಾಲೂಕಿನಲ್ಲಿ ಸಾವಿರಾರು ಕೋಟಿ ಅನುದಾನದಲ್ಲಿ ನಡೆಯುತ್ತಿರುವ ನೀರಾವರಿ ಯೋಜನೆಗಳು ನೆನಗುದಿಗೆ ಬಿದ್ದಿದ್ದು, ಪೂರಿಗಾಲಿ ಹನಿ ನೀರಾವರಿ ಯೋಜನೆ ಪೂರ್ಣಗೊಳಿಸಲು, ಜಾತ್ಯಾತೀತ ಮನೋಭಾವ ಹೊಂದಿರುವ ಹಾಗೂ ಬಸವ ತತ್ವ ಆಧಾರದಲ್ಲಿ ಎಲ್ಲಾ ಸಮುದಾಯಕ್ಕೂ ಅಧಿಕಾರ ನೀಡಿರುವ ಪಿ.ಎಂ.ನರೇಂದ್ರಸ್ವಾಮಿ ಅವರನ್ನು ಗೆಲ್ಲಿಸಬೇಕು ಎಂದರು.

ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿದರು. ಸಭೆಯಲ್ಲಿ ಮುಖಂಡರಾದ ಆರ್.ಎನ್.ಚಂದ್ರಶೇಖರ್ ಮೂರ್ತಿ, ಪ್ರಕಾಶ್, ನಟರಾಜ್, ದಯಾಶಂಕರ್, ದೇವರಾಜು, ಸುಂದರ್ ರಾಜ್, ವಿಶ್ವಾಸ್, ಪರಶಿವಮೂರ್ತಿ, ಬಾಬಣ್ಣ, ಸುರೇಶ್, ಜಯಣ್ಣ, ಅಮೃತ್ ಕಂಟೇಶ್, ಅಂಬರೀಷ್ ಸೇರಿದಂತೆ ಇತರರಿದ್ದರು.

ಸಚಿವ ಕೆಸಿಎನ್ ಪರ ಕೆ.ಶಿವರಾಂ ಬಿರುಸಿನ ಪ್ರಚಾರ



ಕೆ.ಆರ್.ಪೇಟೆ ತಾಲೂಕಿನ ವಿವಿಧೆಡೆ ಬಿಜೆಪಿ ಅಭ್ಯರ್ಥಿ ಕೆ.ಸಿ.ನಾರಾಯಣಗೌಡರ ಪರ ರಾಜ್ಯ ಛಲವಾದಿ ಮಹಾಸಭಾ ಸಂಸ್ಥಾಪಕ ಅಧ್ಯಕ್ಷ, ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಪ್ರಚಾರ ನಡೆಸಿದರು.

ಜೆಡಿಎಸ್ ಅಧಿಕಾರಕ್ಕೆ ಬಂದರೆ ಸ್ತ್ರೀಶಕ್ತಿ ಸಂಘಗಳ ಸಾಲ ಮನ್ನಾ: ಸಿಎಸ್‌ಪಿ



ಪಾಂಡವಪುರ, ಮೇ 6– ಜೆಡಿಎಸ್ ಅಧಿಕಾರಕ್ಕೆ ಬಂದರೆ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲ ಮನ್ನಾ ಆಗಲಿದೆ. ಹಾಗಾಗಿ ಕ್ಷೇತ್ರದ ಜನತೆ ಜೆಡಿಎಸ್‌ಗೆ ಮತ ನೀಡಿ ಆಶೀರ್ವದಿಸಬೇಕು ಎಂದು ಮನವಿ ಮಾಡಿದರು. ತಾಲೂಕಿನ ಚಿಕ್ಕಾಡೆ ಗ್ರಾಮದಲ್ಲಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ರೈತರ 25 ಸಾವಿರ ಕೋಟಿ ಸಾಲಮನ್ನಾ ಮಾಡಿ ರೈತರಿಗೆ ನೆರವಾಗಿದ್ದಾರೆ. ಇದೀಗ ಹಮ್ಮಿಕೊಂಡಿರುವ ಪಂಚರತ್ನ ಯೋಜನೆಯಿಂದ ಎಲ್ಲರಿಗೂ ಸಾಕಷ್ಟು ಅನುಕೂಲವಾಗಲಿದೆ ಎಂದರು.

ಚಿಕ್ಕಾಡೆ ಗ್ರಾಮವನ್ನು 5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿದ್ದೇನೆ. ನಾನು ಚುನಾವಣೆ ಸಂದರ್ಭ ಬಂದು ಮತ ಕೇಳುತ್ತಿಲ್ಲ. ಪ್ರತಿ ಹಂತದಲ್ಲೂ ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸಿದ್ದೇವೆ. ಕೋವಿಡ್ ಸಂದರ್ಭ ಕ್ಷೇತ್ರದಲ್ಲಿದ್ದು ಜನರ ಕಷ್ಟ ಸುಖಗಳಿಗೆ ಸ್ಪಂದಿಸಿದ್ದೇನೆ. ಹಾಗಾಗಿ ಚಿಕ್ಕಾಡೆ ಗ್ರಾಮದ ಜನತೆ ಹೆಚ್ಚಿನ ಮತಕೊಟ್ಟು ನಿಮ್ಮ ಮನೆ ಮಗ ಪುಟ್ಟರಾಜುನನ್ನು ಗೆಲ್ಲಿಸಿಕೊಡಬೇಕೆಂದು ಮನವಿ ಮಾಡಿದರು.

ಪ್ರಚಾರಕ್ಕೆ ಆಗಮಿಸಿದ ಸಿ.ಎಸ್.ಪುಟ್ಟರಾಜು ಅವರಿಗೆ ಗ್ರಾಮದಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು. ಬೃಹತ್ ಹಣ್ಣಿನ ಹಾರಹಾಕಿ ಜೆಸಿಬಿಗಳ ಮೂಲಕ ಹೂವಿನ ಮಳೆಸುರಿಸಿ ಪಟಾಕಿ ಹೊಡೆದು ಸಂಭ್ರಮಿಸಿದರು. ಹೆಣ್ಣುಮಕ್ಕಳು ಪೂರ್ಣಕುಂಭ ಹೊತ್ತು, ಆರತಿ ಬೆಳಗಿ ಶುಭ ಹಾರೈಸಿದರು.

ಯಜಮಾನರಾದ ಪ್ರಕಾಶ್, ಸಿ.ವಿ.ಸ್ವಾಮೀಗೌಡ, ರಾಮಕೃಷ್ಣೇಗೌಡ, ಗಿರೀಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಡಿ.ರಾಜಪ್ಪ, ಸಾವಿಲ್ ಚೇತನ್ ತಿಮ್ಮೇಗೌಡ, ಅನಿಲ್ ತಿಮ್ಮೇಗೌಡ, ಪ್ರಸನ್ನಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್, ಗಿರೀಶ್, ನಾಗೇಶ್, ಶಾಮಿಯಾನ, ಮಂಜು ಗೌತಮ್ ಸೇರಿದಂತೆ ಇತರರಿದ್ದರು.

ಐದನೇ ಪುಟದಿಂದ

ಮಾಜಿ ಸಿಎಂ ಹೆಚ್‌ಡಿಕೆ ಮನವಿ

ಎಕರೆಗೆ 10,000 ರೂ.ನಂತೆ 10 ಎಕರೆವರೆಗೆ 1 ಲಕ್ಷದವರೆಗೆ ಕೃಷಿ ನೆರವು ನೀಡಲಾಗುವುದು. 65 ಮೇಲ್ಪಟ್ಟ ಹಿರಿಯರಿಗೆ ಮಾಸಿಕ 5000 ರೂ., ಭೂಮಿ ಇಲ್ಲದೆ ಕೂಲಿ ಮಾಡುವ ಪ್ರತಿ ಕುಟುಂಬಕ್ಕೂ 2000 ರೂ. ಭತ್ಯೆ ನೀಡಲಾಗುವುದು. ವಿಧವೆಯರಿಗೆ ಹಾಗೂ ಅಂಗವಿಕಲರಿಗೆ ಮಾಸಿಕ 2500 ರೂ. ನೀಡಲಾಗುವುದು. ಮಹಿಳಾ ಉಳಿತಾಯ ಸಂಘಗಳ ಬಲವರ್ಧನೆಗೆ ಆರ್ಥಿಕ ನೆರವು ನೀಡಲಾಗುವುದು. ಗ್ರಾಮೀಣ ಹಾಗೂ ಬಡಮಕ್ಕಳಿಗೆ, ಆದಿವಾಸಿಗಳಿಗೆ ಗುಣಮಟ್ಟ ಶಿಕ್ಷಣ ಜೊತೆಗೆ ರೈತರ ಹಾಗೂ ಮಹಿಳೆಯರ ಸಾಲ ಮನ್ನಾ ಮಾಡಲಾಗುವುದು ಎಂದು ಘೋಷಣೆ ಮಾಡಿದರು.

ಮೈಸೂರು ಜಿಲ್ಲೆಯ ಕುರುಬ ಸಮಾಜದ ಪ್ರಮುಖ ನಾಯಕರಲ್ಲಿ ಒಬ್ಬರಾದ ಎಂಎಲ್‌ಸಿ ಹೆಚ್.ವಿಶ್ವನಾಥ್ ಅವರಿಗೆ ಜೆಡಿಎಸ್ ಪಕ್ಷದಲ್ಲಿ ಗೌರವಯುತ ಸ್ಥಾನ ನೀಡಿ, ಹುಣಸೂರಿನ ಅಭ್ಯರ್ಥಿಯನ್ನಾಗಿಸಿ ಅವರನ್ನು ಗೆಲ್ಲಿಸಿದರೂ ಕೂಡ ತಮಗೆ ಹಾಗೂ ಪಕ್ಷಕ್ಕೆ ನಂಬಿಕೆ ದ್ರೋಹ ಮಾಡಿ ಪಕ್ಷದಿಂದ ಹೊರ ನಡೆದರು. ಆದರೆ ಅವರ ಪರಿಸ್ಥಿತಿ ಈಗ ಏನಾಗಿದೆ ನೋಡಿ ಎಂದರು.

ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ಪರಿಶಿಷ್ಟ ಪಂಗಡ ಸಮುದಾಯಕ್ಕೆ ಮೀಸಲಾತಿ ದೊರಕುವಂತೆ ಮಾಡಿದರು. ಇದೀಗ ನಾಯಕ ಸಮುದಾಯದವರು 15 ಮಂದಿ ಎಂಎಲ್‌ಎಗಳಾಗಿದ್ದಾರೆ. ಜೆಡಿಎಸ್ ಪಕ್ಷ ಎಲ್ಲಾ ಸಮುದಾಯವನ್ನು ಗೌರವದಿಂದ ಕಾಣಲಿದೆ. ಅಲ್ಲದೇ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಮಾರ್ಗದರ್ಶನದಲ್ಲಿ ಎಲ್ಲರ ಹಕ್ಕುಗಳನ್ನು ರಕ್ಷಣೆ ಮಾಡಲಾಗುವುದು. ಹೀಗಾಗಿ ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರಲು ಶ್ರಮಿಸಬೇಕು. ಆ ನಿಟ್ಟಿನಲ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹರೀಶ್‌ಗೌಡರನ್ನು ಭಾರೀ ಅಂತರದಿಂದ ಗೆಲ್ಲಿಸಿಕೊಡಿ ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಕಳೆದ 25 ವರ್ಷಗಳಿಂದ ನಮ್ಮ ಕುಟುಂಬ ಹುಣಸೂರು ಜನತೆಯ ಪ್ರೀತಿ, ವಾತ್ಸಲ್ಯದಲ್ಲಿ ಬೆಳೆದಿದೆ. ಈ ಚುನಾವಣೆಯಲ್ಲಿ ಜೆಡಿಎಸ್ ನನ್ನನ್ನು ಕ್ಷೇತ್ರದ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಹುಣಸೂರು ಮಿನಿ ಭಾರತವಿದ್ದಂತೆ. ಸರ್ವ ಜನಾಂಗದವರನ್ನು ಹೊಂದಿರುವ ಈ ಹುಣಸೂರಿನ ಘನತೆ ಕಾಪಾಡಿಕೊಂಡು ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಮಹದಾಸೆಯೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ. ಅಲ್ಲದೇ ಲಕ್ಷ್ಮಣ ತೀರ್ಥ ನದಿ ಮಲೀನತೆ ನಿರ್ಮೂಲನೆ ಮಾಡುವ ಸಂಕಲ್ಪ ತೊಟ್ಟಿದ್ದೇನೆ. ಹೀಗಾಗಿ ಹುಣಸೂರಿನ ಮಹಾಜನತೆ 5 ಕ್ರಮಾಂಕದ ತೆನೆ ಹೊತ್ತ ರೈತಮಹಿಳೆ ಗುರುತಿಗೆ ಮತ ನೀಡಿ ನನ್ನನ್ನು ಜಯಶೀಲನಾಗಿ ಮಾಡಬೇಕು ಎಂದು ವಿನಂತಿಸಿದರು. ಇಲ್ಲಿನ ಆದಿವಾಸಿಗಳು, ದಲಿತರು, ಹಿಂದುಳಿದ ವರ್ಗಗಳು ಕಷ್ಟದಲ್ಲಿದ್ದಾರೆ ಎಂಬುದನ್ನು ಮನಗಂಡಿದ್ದೇನೆ. ಇವರ ಏಳಿಗೆಗಾಗಿ ಶ್ರಮಿಸಲು ತಾವು ನನಗೆ ಆಶೀರ್ವದಿಸಬೇಕೆಂದು ಮನವಿ ಮಾಡಿದರು. ಸಭೆಯಲ್ಲಿ ತಾಲೂಕಿನ ನೂರಾರು ಗ್ರಾಮಗಳಿಂದ ಆಗಮಿಸಿದ್ದ ಸಾವಿರಾರು ಮಂದಿ ಮಳೆಯನ್ನೂ ಲೆಕ್ಕಿಸದೇ ಭಾಷಣ ಆಲಿಸಿದರು. ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕರಾದ ಚಿಕ್ಕಣ್ಣ, ಎ.ಮಂಜು, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಮೂರ್ತಿ, ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್, ಜೆಡಿಎಸ್ ನಗರಾಧ್ಯಕ್ಷ ಫಜಾಲುಲ್ಲಾ, ಮಾಜಿ ನಗರಸಭೆ ಸದಸ್ಯ ಹಜರತ್ ಜಾನ್, ರಂಜಿತ ಚಿಕ್ಕಮಾದು, ನಗರಸಭೆ ಮಾಜಿ ಅಧ್ಯಕ್ಷ ಮಹದೇವು, ಜೆಡಿಎಸ್ ವಕ್ತಾರ ಎಂ.ಶಿವಕುಮಾರ್, ಸದಸ್ಯರಾದ ಶ್ರೀನಾಥ್, ಹರೀಶ್, ರಾಣಿ ಪೆರುಮಾಳ್ ಎಚ್.ಪಿ.ಸತೀಶ್ ಕುಮಾರ್, ದಲಿತ ಮುಖಂಡರಾದ ಶಿವಶೇಖರ, ಕೆಂಪರಾಜು, ನಿಂಗರಾಜ್ ಮಲ್ಲಾಡಿ, ಸುರೇಶ್ ಗೌಡ, ಕೆ.ಗಣೇಶ್‌ಗೌಡ, ಜಿಪಂ ಮಾಜಿ ಕಟ್ಟನಾಯ್ಕ ಬಸವರಾಜ್ ಸೇರಿದಂತೆ 25ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಪ್ರತಾಪ್‌ಸಿಂಹ ಮತಯಾಚನೆ

ಎಂದು ಆರೋಪಿಸಿದ ಪ್ರತಾಪ್ ಸಿಂಹ, ಆದರೆ ರಾಜ್ಯ ಬಿಜೆಪಿ ಸರ್ಕಾರವು ಉಂಡವಾಡಿ ಹಾಗೂ ಪ್ರಧಾನಮಂತ್ರಿ ಮೋದಿಜೀ ಅವರ 'ಅಮೃತ್ ಜಲ್' ಯೋಜನೆ ಮೂಲಕ ಕ್ಷೇತ್ರದ ಎಲ್ಲಾ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಲ್ಲಿ ಯಶಸ್ವಿಯಾಗಿದೆ. ಮುಂದಿನ ದಿನಗಳಲ್ಲಿ ಮೈಸೂರು ಮಹಾನಗರ ಪಾಲಿಕೆಯನ್ನು ಮೈಸೂರು ಬೃಹತ್ ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸಿ ಈ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಬಿಜೆಪಿ ಬದ್ಧವಾಗಿದೆ ಎಂದರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬದಲಾವಣೆ ಪರ್ವ ಆರಂಭವಾಗಿದ್ದು, ಕ್ರಿಯಾಶೀಲ ಯುವಕರಾಗಿರುವ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಗ್ರಾಮಸ್ಥರು ಪ್ರತಾಪ್ ಸಿಂಹ ಮತ್ತು ಅಭ್ಯರ್ಥಿ ವಿ. ಕವೀಶ್‌ಗೌಡ ಅವರಿಗೆ ಪುಷ್ಪವೃಷ್ಟಿ ಮಾಡುವುದರ ಜೊತೆಗೆ ಬೃಹತ್ ಮೂಸಂಬಿ ಹಾರ ಹಾಕಿ ಅದ್ಧೂರಿಯಾಗಿ ಸ್ವಾಗತಿಸಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ನಗರ ಮಂಡಲ ಅಧ್ಯಕ್ಷ ಬಿ.ಎಂ. ರಘು ಇನ್ನಿತರರಿದ್ದರು.

ಸಿದ್ದರಾಮಯ್ಯ ಮತಯಾಚನೆ

ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿರುವುದಾಗಿ ತಿಳಿಸಿದರು. ಈ ಸರ್ವೇ ನಂಬರ್‌ಗೆ ಒಳಪಟ್ಟ ಸಿದ್ಧಾರ್ಥನಗರ, ವಿದ್ಯಾನಗರ, ಆಲನಹಳ್ಳಿ, ಕೆಸಿ ಬಡಾವಣೆ, ಜೆಸಿ ಬಡಾವಣೆ ಮತ್ತು ಆದಾಯ ತೆರಿಗೆ ಬಡಾವಣೆಗಳನ್ನು ಬಿ ಖರಾಬಿಗೆ ಸೇರಿಸಲಾಗಿತ್ತು. ಇಲ್ಲಿನ ಸಂಪೂರ್ಣ ಭೂಮಿ ಸರ್ಕಾರಕ್ಕೆ ಸೇರಿದ ಜಾಗವೆಂದು ಪರಿಗಣಿಸಲಾಗಿ, ಈ ಬಡಾವಣೆಗಳ ಸಾವಿರಾರು ನಿವಾಸಿಗಳು ತಮ್ಮ ಆಸ್ತಿಯ ಮೇಲಿನ ಸಂಪೂರ್ಣ ಹಕ್ಕು ಕಳೆದುಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ನೇತೃತ್ವದ ಸಂಪುಟ ಸಭೆಯಲ್ಲಿ ಕುರುಬಾರಹಳ್ಳಿ ಸರ್ವೇ ನಂಬರ್ 4ರ ಭೂಮಿಯನ್ನು ಬಿ ಖರಾಬಿನಿಂದ ಕೈಬಿಡುವ ಕುರಿತು ನಿರ್ಣಯ ಕೈಗೊಂಡು ಇಲ್ಲಿನ ನಿವಾಸಿಗಳ ಸಂಕಷ್ಟವನ್ನು ನಿವಾರಿಸಲಾಗಿತ್ತು ಎಂದು ಹೇಳಿದ ಅವರು, ಕ್ಷೇತ್ರದ ಹಲವಾರು ಸಮಸ್ಯೆಗಳನ್ನು ತಾವು ಶಾಸಕರಾಗಿದ್ದಾಗ ನಿವಾರಿಸಿದ್ದು, ಈ ಬಾರಿ ತಮ್ಮನ್ನು ಗೆಲ್ಲಿಸುವ ಮೂಲಕ ಮತ್ತೊಮ್ಮೆ ಜನಸೇವೆಗೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು. ಈ ವೇಳೆ ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ವಕೀಲ ರಾಮಕೃಷ್ಣ, ಮುಖಂಡರಾದ ಸಯ್ಯದ್ ಸಾದಿಕ್, ಖಲೀಂ ಷರೀಫ್, ಸಾದಿಕ್ ಉಲ್ಲಾ ರೆಹಮಾನ್, ನಾಜೀರ್, ಅತಾಉಲ್ಲಾ ಇನ್ನಿತರರಿದ್ದರು.

ಮೈಸೂರಲ್ಲಿ ಭಾರೀ ಮಳೆ


ಮೈಸೂರು, ಮೇ 6(ಎಂಕೆ)– ಮೈಸೂರಿನಲ್ಲಿ ಮಳೆ ಅಬ್ಬರ ಜೋರಾಗಿದ್ದು, ವಾರಾಂತ್ಯ ಸಡಗರದಲ್ಲಿದ್ದ ಪ್ರವಾಸಿಗರನ್ನು ಹೈರಾಣಾಗಿಸಿತು. ಸಂಜೆ 5 ಗಂಟೆ ಸುಮಾರಿಗೆ ಆರಂಭವಾದ ಮಳೆ ತಡರಾತ್ರಿಯವರೆಗೂ ಧಾರಾಕಾರವಾಗಿ ಸುರಿಯಿತು. ಪರಿಣಾಮ ರಸ್ತೆ–ಚರಂಡಿಗಳು ತುಂಬಿ ಹರಿದವು. ಜೋರು ಮಳೆಯಿಂದಾಗಿ ಪ್ರವಾಸಿ ತಾಣಗಳ ವೀಕ್ಷಣೆಗೆ ಮುಗಿ ಬಿದ್ದಿದ್ದ ಪ್ರವಾಸಿಗರಿಗೆ ಭಾರೀ ನಿರಾಸೆ ಉಂಟಾಯಿತು.



ಎಡೆಬಿಡದೆ ಸುರಿದ ಮಳೆಯಿಂದಾಗಿ ನಿರಾಸೆ ಜೊತೆಗೆ ಟ್ರಾಫಿಕ್‌ನಿಂದಾಗಿ ವಾಹನ ಸವಾರರು, ಪ್ರವಾಸಿಗರು ನಲುಗಿದರು. ನಗರದ ಪ್ರಮುಖ ರಸ್ತೆ, ವೃತ್ತಗಳಲ್ಲಿ ವಾಹನಗಳ ದಟ್ಟನೆ ಹೆಚ್ಚಾಗಿತ್ತು. ನಂಜನಗೂಡು ರಸ್ತೆಯಲ್ಲಿರುವ ಟೋಲ್‌ಗೇಟ್ ಬಳಿ ಸುಮಾರು ಅರ್ಧ ಕಿಲೋಮೀಟರ್‌ನಷ್ಟು ದೂರದವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಯಾವುದೇ ಅನಾಹುತವಿಲ್ಲ: ಮಳೆ ನಿರಂತರವಾಗಿ ಸುರಿಯುತ್ತಿದ್ದರೂ ಗಾಳಿ, ಗುಡುಗು ಮಿಂಚು ಕಡಿಮೆ ಇಲ್ಲದೆ ಇದ್ದಿದ್ದರಿಂದ ಯಾವುದೇ ತೊಂದರೆ ಉಂಟಾಗಿಲ್ಲ. ಕೆಲ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕ ಕೆಲಕಾಲ ಕಡಿತಗೊಂಡಿರುವುದು ಬಿಟ್ಟರೆ, ಮರಗಳು, ವಿದ್ಯುತ್ ಕಂಬಗಳು ಮುರಿದು ಬಿದ್ದಿರುವ ಕುರಿತು ವರದಿಯಾಗಿಲ್ಲ ಎಂದು ನಗರಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಆದರೆ ರಸ್ತೆಗಳು ಜಲಮಯವಾಗಿದ್ದವು. ತಗ್ಗು ಪ್ರದೇಶಗಳಲ್ಲಿ ಭಾರೀ ನೀರು ನಿಂತಿತ್ತು. ಸರಿ ರಾತ್ರಿಯವರೆಗೂ ಧೋ ಎಂದು ಸುರಿಯುತ್ತಲೇ ಇತ್ತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.5.2023 ಭಾನುವಾರ, ಮಳೆ ನಕ್ಷತ್ರ: ಭರಣಿ, 28.04.2023 ರಿಂದ 10.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಅನೂರಾಧ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಅವರೊಂದಿಗೆ ಪತ್ರಿಕಾ ಸಂವಾದ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಿಗ್ಗೆ 9ಕ್ಕೆ.

■ **ಬಸವ ಸಮಿತಿ:** ಶರಣ ಸಂಗಮ–281, ಬಸವ ಜಯಂತಿ ಮತ್ತು ಶರಣೆ ಅಕ್ಕಮಹಾದೇವಿ ಜಯಂತಿ, ಬೆಳಗ್ಗೆ 10.30ರಿಂದ ಲಿಖಿತ ರಸಪ್ರಶ್ನೆ, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಹಿನಕಲ್, ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗ ಹಾಗೂ ಬಸವ ಸಮಿತಿ ಸದಸ್ಯರಿಂದ ವಚನ ವೈಭವ, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ.

■ **ನಟನಾ ರಂಗಶಾಲೆ :** ರಜಾ ಮಜಾ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಡಗರ, ಸ್ಥಳ: ಗಾನಭಾರತಿ ರಮಾಗೋವಿಂದ ರಂಗಮಂದಿರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 11ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಸಂಗೀತಾಮೃತ ವರ್ಷಿಣಿ ರಾಗಾಧಾರಿತ ಮನೋಧರ್ಮ ಸಂಗೀತ ಶಿಬಿರ, ಸ್ಥಳ: ಸುರಭಿ ಗಾನ ಕಲಾಮಂದಿರ, ಗೋಕುಲಂ 3ನೇ ಹಂತ, ಸಂಜೆ 4.30 ರಿಂದ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ:** ಬಸವ ಜಯಂತಿ ಮತ್ತು ಕಾಯಕ ದಿನಾಚರಣೆ ಹಾಗೂ ಸನ್ಮಾನ ಸಮಾರಂಭ, ಸಾನ್ನಿಧ್ಯ: ಬರಡನಪುರ ಶ್ರೀ ಮಹಾಂತೇಶ್ವರ ಮಠದ ಮಠಾಧ್ಯಕ್ಷ ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಅವರಿಂದ ಕಾಯಕ ಮತ್ತು ದಾಸೋಹದ ಆಶಯ ಕುರಿತು ಉಪನ್ಯಾಸ, ಕಾಯಕ ಪ್ರಶಸ್ತಿ ಪ್ರದಾನ: ನಿವೃತ್ತ ಡಿವೈಎಸ್ಪಿ ಶಿವಬಸಪ್ಪ ಹೊರೆಯಾಲ, ಕಾಯಕ ಜೀವಿ ಸುರೇಶ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಶ್ರೀರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟೆಬಲ್ ಟ್ರಸ್ಟ್ :** ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಲಿ, ಕೆರೆಮನೆ ಅವರಿಂದ ಮಾರುತಿ ಪ್ರತಾಪ ಯಕ್ಷಗಾನ ಕಾರ್ಯಕ್ರಮ, ನಿರ್ದೇಶನ : ಕೆರೆಮನೆ ಶಿವಾನಂದ ಹೆಗ್ಡೆ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕುಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ– ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ– ಜಿ. ಪುಷ್ಪಲತಾ, ವ್ಯಾಖ್ಯಾನ– ಡಾ.ಜ್ಯೋತಿ ಶಂಕರ್, 8.30 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.30 ಚುನಾವಣೆ 2023, ಮತ ಕ್ಷೇತ್ರ ದರ್ಶನ–ಸಮಗ್ರ ಚಿತ್ರಣ, 9.45 ನಮ್ಮ ಆರೋಗ್ಯ–ಸಿಕಲ್ ಸೆಲ್ ಡಿಸೀಸ್ ಕುರಿತು ಡಾ. ದೀಪಾಭಟ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ವಿವಿಧ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ಪಾಲಹಳ್ಳಿ ಶ್ರೀ ಶಾರದಾ ದೇವಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಸಾಲಿಟ್ಟು ಹಣತೆ ಬೆಳಗೀವು– ಭಾಗವಹಿಸುವವರು ಖ್ಯಾತನಹಳ್ಳಿ ರಾಮಣ್ಣ

ಮಧ್ಯಾಹ್ನ: 12.30 ದೇವರನಾಮ–ಸಿ.ಎಸ್. ಲಕ್ಷ್ಮೀ, 12.45 ಜನಪದ ಸಂಗೀತ–ಬನ್ನೂರು ಕೆಂಪಮ್ಮ ಮತ್ತು ಸಂಗಡಿಗರು, 1.00 ರಂಗಗೀತೆಗಳು–ಸುಮಿತ್ರಾ ಎನ್., 1.20 ಭಾವಗೀತೆಗಳು – ಹೆಚ್.ಕೆ. ನಾರಾಯಣ, ಕಸ್ತೂರಿ ಶಂಕರ್, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಅಂಗದ ಸಂಧಾನ, ಪ್ರಸ್ತುತಿ– ಪರ್ಲ ಕೃಷ್ಣ ಭಾತ್ ಮತ್ತು ಬಳಗದವರು, 5.05 ಮಿತ್ರ ಮಾಧುರ್ಯ, 6.55 ಕೃಷಿರಂಗ–ರಸಮೇವಿನ ತಯಾರಿಕೆ ಹಾಗೂ ಪೌಷ್ಟಿಕಾಂಶಗಳ ನಿರ್ವಹಣೆ ಕುರಿತು ಡಾ. ಎಲ್.ಆರ್. ಕರಿಬಸವರಾಜು ಆರೊಂದಿಗೆ ಸಂದರ್ಶನ, 7.55 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.15 ರಂಗಗೀತೆಗಳು–ಬಿ.ಎಸ್. ಸ್ವಾಮಿಗೌಡ, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಸೇಲಂ ಗಾಯಿತ್ರಿ ವೆಂಕಟರಾಘವನ್ – ಹಾಡುಗಾರಿಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಸೋದರ ಸಂನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಶ್ರೀ ಗುರುವಾದಿರಾಜರ ಪಂಚರಾತ್ರೋತ್ಸವ ವೈಭವ, ಗಾನಸಿರಿ–ವೇದಾಂತ ಲಹರಿ ವಿನೂತನ ಕಾರ್ಯಕ್ರಮ, ಸಂಜೆ 4.30 ರಿಂದ ಶ್ರೀಮತಿ ರೇಖಾ ಭಟ್, ಶ್ರೀಮತಿ ರೂಪಶ್ರೀ, ಡಾ. ಸುಷ್ಮಾ ಅರುಣ್ ಹಾಗೂ ತಂಡದವರಿಂದ ದಾಸವಾಣಿ, ಸಂಜೆ 6 ರಿಂದ ಡಾ. ಬೆ.ನಾ. ವಿಜಯೀಂದ್ರಾಚಾರ್ಯ ಅವರಿಂದ ಭೂತರಾಜ ವೈಭವ ಭೂತರಾಜರ ಚರಿತ್ರೆಯ ವಿಶ್ಲೇಷಣೆ ಹಾಗೂ ಕೃತಿಗಳ ಗಾಯನ, ಸಂಜೆ 7 ರಿಂದ ವಿಶೇಷ ಕಾರ್ಯಕ್ರಮ, ಶ್ರೀಪಾದಂಗಳವರಿಂದ ತೊಟ್ಟಿಲು ಪೂಜೆ ಹಾಗೂ ಭೂತರಾಜರ ಪೂಜೆ, ಭೂತರಾಜರ ಪ್ರಸಾದ ವಿನಿಯೋಗ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಸಮಿತಿ, ಕೃಷ್ಣಮೂರ್ತಿಪುರಂ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ಪ್ರಶಿಕ್ಷಣಾರ್ಥಿಗಳಿಂದ ಹಾನೂಶ್ ನಾಟಕ ಪ್ರದರ್ಶನ, ನಿರ್ದೇಶನ : ಚಿತ್ತರಂಜನ್ ಗಿರಿ, ಸಂಗೀತ : ಸುಬ್ರಹ್ಮಣ್ಯ ಮೈಸೂರು, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

■ **ಯವನಿಕ ರಂಗ ತಂಡ, ನೇಪಥ್ಯ ರಂಗ ತಂಡ :** ನೇಪಥ್ಯ ರಂತ ತಂಡದಿಂದ ವಿಗಡ ವಿಕ್ರಮರಾಯ ನಾಟಕ ಪ್ರದರ್ಶನ, ನಿರ್ದೇಶನ : ಮಂಜುನಾಥ್ ಭ್ಯಾಟೆ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ, ಸಂಜೆ 7ಕ್ಕೆ

ಮೈತ್ರಿ ಸರ್ಕಾರದಿಂದ ಅಭಿವೃದ್ಧಿ ಅಸಾಧ್ಯ, ಕಾಂಗ್ರೆಸ್ ಬೆಂಬಲಿಸಿ

ಮೈಸೂರಿನಲ್ಲಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇ ಗೌಡ ಮಾತನಾಡಿದರು.

ಮೈಸೂರು,ಮೇ 6(ಜಿಎ)–ರಾಜ್ಯದಲ್ಲಿ ಮೈತ್ರಿ ಸರ್ಕಾರದಿಂದ ಯಾವುದೇ ಅಭಿವೃದ್ಧಿಗಳು ಈವರೆಗೂ ಆಗಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯದ ಮತದಾರರು ಅತಂತ್ರ ವಿಧಾನಸಭೆಗೆ ಅವಕಾಶ ನೀಡದೇ ಕಾಂಗ್ರೆಸ್‌ಗೆ ಸಂಪೂರ್ಣ ಬಹುಮತ ನೀಡಿ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದಿಂದ ಜನಪರ ಯೋಜನೆಗಳು ಅನುಷ್ಠಾನಗೊಂಡಿಲ್ಲ. ಕೋಮು ಮತ್ತು ಜಾತಿ ಸಂಘರ್ಷವನ್ನೇ ಅಸ್ತ್ರ ಮಾಡಿಕೊಂಡು ರಾಜಕೀಯ ಮಾಡುತ್ತಿದ್ದಾರೆ. ಜನರು ಮತದಾನದ ಮೂಲಕ ಇಂತಹವರನ್ನು ತಿರಸ್ಕರಿಸಬೇಕು ಎಂದರು.

ರಾಜ್ಯದಲ್ಲಿ ಕಳೆದ 15 ವರ್ಷಗಳಲ್ಲಿ ಅಧಿಕಾರಕ್ಕೆ ಬಂದಂತಹ ಮೂರು ಸಮ್ಮಿಶ್ರ ಸರ್ಕಾರಗಳು ತಮ್ಮ ಅವಧಿಯನ್ನು ಪೂರ್ಣಗೊಳಿಸಿಲ್ಲ. ಹಾಗೇ ಅಭಿವೃದ್ಧಿ ಕುಂಠಿತಕ್ಕೆ ಕಾರಣವಾಗಿವೆ. ಸಮರ್ಥ ಯೋಜನೆಗಳ ಅನುಷ್ಠಾನ ಸಾಧ್ಯವಾಗದೇ ಪರಸ್ಪರರ ಒಳ್ಳೆಕೆಯಲ್ಲಿ, ಭ್ರಷ್ಟತೆಯಲ್ಲಿ ತೊಡಗಿದ್ದವು. ಮತ್ತೊಮ್ಮೆ ಅಂತಹ ಪರಿಸ್ಥಿತಿಗೆ ಅವಕಾಶ ನೀಡಬಾರದು ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ, ವಿದ್ಯಾರ್ಥಿವೇತನ ನಿಲ್ಲಿಸಲಾಗಿದೆ. ಶಿಕ್ಷಕರ ನೇಮಕಾತಿಗೂ ಕ್ರಮ ಕೈಗೊಂಡಿಲ್ಲ. ಅವಧಿ ಮುಗಿದು ಮೂರು ವರ್ಷವಾಗಿದ್ದರೂ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಚುನಾವಣೆ ನಡೆಸದ ಪ್ರಜಾತಂತ್ರ ವಿರೋಧಿ ಪಕ್ಷವಿದು ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರವು ರೈತ ಮತ್ತು ಕಾರ್ಮಿಕ ವಿರೋಧಿಯಾಗಿದ್ದು, ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಗಳಿಗೆ ಇವರಲ್ಲಿ ಎಳ್ಳಷ್ಟೂ ಬೆಲೆಯಿಲ್ಲ. ದುಬಾರಿಯಾದ ರಸಗೊಬ್ಬರ ಮತ್ತು ರೈತರ ಪಂಪ್ ಸೆಟ್‌ಗಳಿಗೆ ಸೂಕ್ತ ವಿದ್ಯುತ್ ಇಲ್ಲ. ಹಲವು ಇಲಾಖೆಗಳಲ್ಲಿ ನೇಮಕಾತಿಗಳನ್ನು ಮಾಡದೆ ಇರುವ ಹುದ್ದೆಗಳನ್ನೇ ಕಡಿತಗೊಳಿಸಲಾಗುತ್ತಿದೆ ಎಂದರು.

ಕಳೆದ ಒಂದು ವರ್ಷದಿಂದ ಜೆಡಿಎಸ್ ಪಕ್ಷದ ಜೊತೆ ಅಂತರ ಕಾಯ್ದುಕೊಂಡಿದ್ದು, ಪಕ್ಷವೂ ನನ್ನನ್ನು ಸಂಪರ್ಕಿಸಿಲ್ಲ. ಯಾವುದನ್ನು ಸರಿಪಡಿಸಲಾಗದೇ, ಉತ್ತಮ ಗೌರವವೂ ದೊರೆಯದೆ ನೊಂದಿದ್ದೇನೆ. ಸೂಕ್ತ ಸಂದರ್ಭದಲ್ಲಿ ಎಲ್ಲವನ್ನು ತಿಳಿಸಲಿದ್ದು, ಪಕ್ಷಕ್ಕೆ, ವಿಧಾನ ಪರಿಷತ್ತಿನ ಸದಸ್ಯ ಸ್ಥಾನಕ್ಕೂ ರಾಜೀನಾಮೆ ನೀಡಲಿದ್ದೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಎನ್.ಜಯರಾವ್ ಕಿಲಾರ, ಶಂಕರೇಗೌಡ ಉಪಸ್ಥಿತರಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯರಿಂದ ಸ್ವಜಾತಿಯವರಿಗೆ ಹೆಚ್ಚು ಅವಕಾಶ

ಲಿಂಗಾಯತ ಗೌಡ ಮಹಾಸಭಾ ಯುವ ಘಟಕ ಆರೋಪ



ಮೈಸೂರು,ಮೇ 6(ಜಿಎ)–ಸಿದ್ದರಾಮಯ್ಯ ಅವರು ಸ್ವಜಾತಿ ಚಿಂತನೆಯನ್ನು ಇಟ್ಟುಕೊಂಡು ವರುಣ ಕ್ಷೇತ್ರದ ಕೈಗಾರಿಕೆಗಳಲ್ಲಿ ಉದ್ಯೋಗ ಕೊಡಿಸಿದ್ದಾರೆ. ಆದರೆ, ಲಿಂಗಾಯತರಿಗೆ ಅವಕಾಶ ನೀಡಿಲ್ಲ ಎಂದು ಲಿಂಗಾಯತ ಗೌಡ ಮಹಾಸಭಾ ಯುವ ಘಟಕದ ರಾಜ್ಯಾಧ್ಯಕ್ಷ ಶಂಭು ಪಟೇಲ್ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಹಾಗೂ ಅವರ ಮಗ ಯತೀಂದ್ರ ಅವರು ಕ್ಷೇತ್ರದಲ್ಲಿರುವ ವಿವಿಧ ಕೈಗಾರಿಕೆಗಳಲ್ಲಿ ಅವರ ಜಾತಿಯವರಿಗೆ ಹೆಚ್ಚಿನ ಅವಕಾಶ ಕಲ್ಪಿಸಿದ್ದು, ಲಿಂಗಾಯತ ಯುವಕರಿಗೆ ಯಾವುದೇ ಉದ್ಯೋಗಾವಕಾಶ ನೀಡಿಲ್ಲ. ಆದರಿಂದ ಈ ಬಾರಿ ವರುಣ ಕ್ಷೇತ್ರದ ಮತದಾರರು ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ರಾಜ್ಯದಾದ್ಯಂತ ಅನೇಕ ಸಾಹಿತಿಗಳು ಸಿದ್ದರಾಮಯ್ಯ ಅವರನ್ನು ಬೆಂಬಲಿಸುವಂತೆ ಸಂದೇಶವನ್ನು ನೀಡುತ್ತಿದ್ದಾರೆ. ಇದು ಸರಿಯಲ್ಲ. ಸಾಹಿತಿಗಳು ನೀಡುವ ಪ್ರತಿ ಹೇಳಿಕೆಗಳು ಸಮಾಜದಲ್ಲಿ ಹೆಚ್ಚಿನ ಪರಿಣಾಮ ಬೀರುತ್ತದೆ. ಆದ್ದರಿಂದ ಅವರ ಪರ ಮಾತನಾಡುವುದನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ತೀರ್ಥಪ್ರಸಾದ್, ನಾಗೇಂದ್ರ, ಮಹೇಶ್, ರಾಜೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

ರೈತರು, ಕಾರ್ಮಿಕರು, ಯುವಜನತೆ ಕಾಂಗ್ರೆಸ್ ಬೆಂಬಲಿಸುವಂತೆ ಮನವಿ



ಮೈಸೂರು, ಮೇ 6(ಜಿಎ)–ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ರೈತರು, ಕಾರ್ಮಿಕರು ಮತ್ತು ಯುವಜನತೆ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಕರ್ನಾಟಕ ಪ್ರಾಂತ್ಯ ರೈತ ಮತ್ತು ಕಾರ್ಮಿಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಜೆ.ಜವರೇಗೌಡ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರವು ಪ್ರಜಾಪ್ರಭುತ್ವದ ಹೆಸರಿನಲ್ಲಿ ಭ್ರಷ್ಟಚಾರ, ಸುಳ್ಳುಗಳನ್ನು ಪ್ರತಿಪಾದಿಸುತ್ತ ಬಂದಿದ್ದು, ಭೂ ಮಾಫಿಯಾ, ಶಿಕ್ಷಣ ಸಂಸ್ಥೆಗಳ ಮಾಫಿಯಾ ಹಾಗೂ ಕಾರ್ಪೋರೇಟ್ ಸಂಸ್ಥೆಯವರನ್ನು ಬೆಂಬಲಿಸಿ, ರೈತರು ಮತ್ತು ಕಾರ್ಮಿಕರಿಗೆ ಅನ್ಯಾಯವೆಸಗಲು ಮುಂದಾಗಿದ್ದಾರೆ ಎಂದು ದೂರಿದರು. ಈ ಹಿನ್ನೆಲೆಯಲ್ಲಿ ರೈತರು, ಕಾರ್ಮಿಕರು, ಯುವ ಜನತೆ ಈ ಸರ್ಕಾರವನ್ನು ಕಿತ್ತೆಸೆದು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವನ್ನು ನೀಡಿ. ಈಗಾಗಲೇ ಕಾಂಗ್ರೆಸ್ ಪಕ್ಷದ ರಾಜ್ಯ ಮುಖಂಡರೊಂದಿಗೆ ರೈತರು ಮತ್ತು ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿದ್ದು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಎಲ್ಲಾ ಬೇಡಿಕೆಗಳನ್ನು ಈಡೇರಿಸುತ್ತೇವೆಂದು ಭರವಸೆ ನೀಡಿದ್ದಾರೆ ಎಂದರು. ಗೋಷ್ಠಿಯಲ್ಲಿ ವೇದಿಕೆ ಉಪಾಧ್ಯಕ್ಷ ಮಧುಗೌಡ, ರಾಜ್ಯ ಪ್ರದಾನ ಕಾರ್ಯದರ್ಶಿ ಎಸ್.ವಿ.ದೇವರಾಜು, ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಕೆ.ಶಶಿಕುಮಾರ್ ಹಾಗೂ ಜಿಲ್ಲಾಧ್ಯಕ್ಷೆ ಗೌರಮ್ಮ ಉಪಸ್ಥಿತರಿದ್ದರು.

ನಿಧನ



ಅಟ್ರಂಗಡ ಚೋಂದಮ್ಮ

ಮೈಸೂರು, ಮೇ 6– ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಕಂದಗಾಲ ಗ್ರಾಮದ ನಿವಾಸಿ ದಿವಂಗತ ಎ.ಎನ್.ಕುಟ್ಟಪ್ಪ ಅವರ ಪತ್ನಿ ಅಟ್ರಂಗಡ ಚೋಂದಮ್ಮ ಮೇ 5 ಶುಕ್ರವಾರ ಮಧ್ಯಾಹ್ನ 12.40ರ ಸಮಯದಲ್ಲಿ ಮಂಡ್ಯದಲ್ಲಿರುವ ಅವರ ಪುತ್ರ ನಂಜಪ್ಪ ಅವರ ಮನೆಯಲ್ಲಿ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು. ಮೃತರು ಮೂವರು ಪುತ್ರರು–ಎ.ಕೆ.ನಂಜಪ್ಪ, ಎ.ಕೆ.ನಾಣಯ್ಯ ಮತ್ತು ಎ.ಕೆ.ಉತ್ತಪ್ಪ, ನಾಲ್ವರು ಪುತ್ರಿಯರು–ಪೂಚಿಮಾಡ ಯಶೋಧ ತಮ್ಮಯ್ಯ, ಕವಡಿಚಂಡ ಪೊನ್ನು ಧರ್ಮಜ, ಚಾಮೇರಾ ನಿರ್ಮಲ ಮುತ್ತಪ್ಪ ಮತ್ತು ಕೂಪಡಿರ ರುಕ್ಮಿಣಿ ಗಣಪತಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಹಿರಿಯ ಪುತ್ರ ಎ.ಕೆ.ಕರುಂಬಯ್ಯ ಕೆಲವು ವರ್ಷಗಳ ಹಿಂದೆ ನಿಧನರಾಗಿದ್ದರು. ಪಾರ್ಥಿವ ಶರೀರವನ್ನು ಶನಿವಾರ ಮೈಸೂರಿಗೆ ತಂದು, ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆಯನ್ನು ಮಧ್ಯಾಹ್ನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲಾಜ್ ದಸ್ತಗಿರ್ ಖಾನ್



ಮೈಸೂರಿನ ಬನ್ನಿಮಂಟಪದ ನಿವಾಸಿ ಹಾಗೂ ಹೂವಿನ ವ್ಯಾಪಾರಿ ಅಲಾಜ್ ದಸ್ತಗಿರ್ ಖಾನ್ (77) ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಬನ್ನಿಮಂಟಪದಲ್ಲಿರುವ ಮಸೀದಿ–ಇ–ಟಿಪ್ಪುವಿನಲ್ಲಿ ನಮಾಜ್ ಇ ಜನಾಜಾ ನಂತರ ಟಿಪ್ಪು ವೃತ್ತದಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

15 ವರ್ಷದಿಂದ ಚಾಮರಾಜ ಕ್ಷೇತ್ರದ ಜನರ ಒಡನಾಟವಿದೆ

–ಕೆ. ಹರೀಶ್‌ಗೌಡ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ಸಂದರ್ಶನ: ಎಸ್.ಬಿ.ದೇವರಾಜ



> “ಕಳೆದ 15 ವರ್ಷಗಳಿಂದ ಸೇವಾ ಕಾರ್ಯಗಳನ್ನು ಮಾಡುತ್ತಾ ಕ್ಷೇತ್ರಾದ್ಯಂತ, ಪ್ರತಿನಿತ್ಯ ಒಂದಲ್ಲ ಒಂದು ಕಡೆ ಸಂಚರಿಸುತ್ತಿದ್ದೇನೆ. ಚಾಮರಾಜ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸಂಪೂರ್ಣವಾಗಿ ನನಗೆ ಅರಿವಿದೆ. ಈ ಸಮಸ್ಯೆಗಳನ್ನು ನಿವಾರಿಸುವ ಬಗ್ಗೆಯೂ ಚಿಂತನೆ ನಡೆಸಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಹತ್ತು ಹಲವು ಸಮಸ್ಯೆಗಳಿವೆ. ಕೇವಲ ರಸ್ತೆಗೆ ಟಾರು ಹಾಕಿಸುವುದು, ಮೋರಿ ಮಾಡಿಸುವುದಷ್ಟೇ ಅಭಿವೃದ್ಧಿಯಲ್ಲ. ಕ್ಷೇತ್ರದ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವುದೇ ಶಾಸಕನ ಕರ್ತವ್ಯ ಎಂಬುದನ್ನು ಅರಿತಿದ್ದೇನೆ.

ಸಾಂಸ್ಕೃತಿಕ ನಗರಿ ಮೈಸೂರು ನಗರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳ ಪೈಕಿ ಅತೀ ಹೆಚ್ಚು ಅಭಿವೃದ್ಧಿ ಹೊಂದಿದ, ವಿದ್ಯಾವಂತರನ್ನು ಹೊಂದಿರುವ ಕ್ಷೇತ್ರವಾದ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಅಖಾಡ ರಂಗೇರಿದೆ. ಈ ಕ್ಷೇತ್ರದಲ್ಲಿ ಕಣದಲ್ಲಿರುವ ಪ್ರಮುಖ 3 ಪಕ್ಷಗಳ ಅಭ್ಯರ್ಥಿಗಳು ಕೆ.ಜಿ.ಕೊಪ್ಪಲಿನವರು. ಇವರೆಲ್ಲಾ ಸಾಹಸಿಗರು. ಹಾಗಾಗಿ ಪ್ರತಿಷ್ಠಿತ ಕಣವಾಗಿ ಮಾರ್ಪಟ್ಟಿದೆ. ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ, ಶೇ. 15.14ರಷ್ಟು ಅಂದರೆ 21,282 ಮತಗಳನ್ನು ಪಡೆದಿದ್ದ ಕೆ. ಹರೀಶ್‌ಗೌಡ ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದು, ಯುವ ಪಡೆ ಕಟ್ಟಿಕೊಂಡು ಕ್ಷೇತ್ರದಾದ್ಯಂತ ಬಿರುಸಿನ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಬಿಡುವಿಲ್ಲದ ಪ್ರಚಾರದ ನಡುವೆಯೂ ಹರೀಶ್‌ಗೌಡರು ‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿದ್ದಾರೆ.

ಮೈಸೂರು ಮಿತ್ರ: *ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶ ಸಿಕ್ಕಿರುವ ಬಗ್ಗೆ ನಿಮ್ಮ ಮೊದಲ ಪ್ರತಿಕ್ರಿಯೆ?*

ಕೆ.ಹರೀಶ್‌ಗೌಡ: ಚಾಮರಾಜ ಕ್ಷೇತ್ರದಲ್ಲಿ ಇಬ್ಬರು ಪ್ರಬಲ ಆಕಾಂಕ್ಷಿಗಳಿದ್ದೆವು. ಪಕ್ಷದ ಹೈಕಮಾಂಡ್, ನಮ್ಮ ನಾಯಕರು ಹಾಗೂ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ನನಗೆ ಆಶೀರ್ವಾದ ಮಾಡಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಸಹಜವಾಗಿಯೇ ಕಾಂಗ್ರೆಸ್‌ನಂತಹ ರಾಷ್ಟ್ರೀಯ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಯಾಗಿರುವುದು ಖುಷಿ ಮಾತ್ರವಲ್ಲದೇ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ.

ಮಿತ್ರ: *ಕಳೆದ ಬಾರಿ ಪಕ್ಷೇತರರಾಗಿ ಸ್ಪರ್ಧಿಸಿದ್ದೀರಿ. ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದೀರಿ. ನಿಮಗೆ ಮತದಾರರ ಸ್ಪಂದನೆ ಹೇಗಿದೆ?*

ಕೆ.ಹರೀಶ್‌ಗೌಡ: ಕಳೆದ ಬಾರಿ ಪಕ್ಷೇತರರಾಗಿ ಸ್ಪರ್ಧಿಸಿದಾಗ ನನಗೆ ಕೇವಲ ನನ್ನ ಸ್ನೇಹಿತರು ಹಾಗೂ ಹಿತೈಷಿಗಳ ಬೆಂಬಲ ಮಾತ್ರ ದೊರೆತಿತ್ತು. ಯಾವುದೇ ರಾಜಕೀಯ ಪಕ್ಷದ ಬೆಂಬಲವಿಲ್ಲದಿದ್ದರೂ ಮತದಾರರು ನನ್ನ ಮೇಲೆ ವಿಶ್ವಾಸವಿಟ್ಟು 21,282 ಮತಗಳನ್ನು ನೀಡಿ ಪ್ರೋತ್ಸಾಹಿಸಿದ್ದರು. ಆದರೆ ಈ ಬಾರಿ ನಾನು ಕಾಂಗ್ರೆಸ್ ಎಂಬ ಹೆಮ್ಮರದ ಆಶ್ರಯ ಪಡೆದಿದ್ದಾನೆ. ಅನೇಕ ರಾಷ್ಟ್ರೀಯ, ರಾಜ್ಯ ಹಾಗೂ ಸ್ಥಳೀಯ ನಾಯಕರ ಬೆಂಬಲ ನನಗೆ ದೊರಕಿದೆ. ಮತಯಾಚನೆಗೆ ಹೋದ ಕಡೆಯೆಲ್ಲಾ ಮತದಾರರು ತಮ್ಮ ಮನೆಯ ಮಗನೇ ಚುನಾವಣೆಗೆ ಸ್ಪರ್ಧಿಸಿದ್ದಾನೆ ಎಂಬ ಮನೋಭಾವದಿಂದ ನನ್ನನ್ನು ಸ್ವಾಗತಿಸಿ, ಗೆದ್ದೇ ಗೆಲ್ಲಿಸುತ್ತೇವೆ ಎಂದು ಹರಸಿ, ಹಾರೈಸುತ್ತಿದ್ದಾರೆ. ಅವರ ಪ್ರೀತಿ, ಅಭಿಮಾನ ಪ್ರೋತ್ಸಾಹದಿಂದ ಕ್ಷೇತ್ರದಲ್ಲಿ ಪ್ರಚಾರ ಮಾಡುತ್ತಿದ್ದೇನೆ. ನನಗೆ ಈ ಬಾರಿ ಗೆದ್ದೇ ಗೆಲ್ಲುತ್ತೇನೆ ಎಂಬ ವಿಶ್ವಾಸವೂ ಇದೆ.



ಮಿತ್ರ: *ಚಾಮರಾಜ ಕ್ಷೇತ್ರದ ಸಮಸ್ಯೆಗಳ ಬಗ್ಗೆ ನಿಮಗೆ ಅರಿವಿದೆಯೇ.*

ಕೆ. ಹರೀಶ್‌ಗೌಡ: ಕಳೆದ 15 ವರ್ಷಗಳಿಂದ ಸೇವಾ ಕಾರ್ಯಗಳನ್ನು ಮಾಡುತ್ತಾ ಕ್ಷೇತ್ರದಾದ್ಯಂತ, ಪ್ರತಿನಿತ್ಯ ಒಂದಲ್ಲ ಒಂದು ಕಡೆ ಸಂಚರಿಸುತ್ತಿದ್ದೇನೆ. ಚಾಮರಾಜ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸಂಪೂರ್ಣವಾಗಿ ನನಗೆ ಅರಿವಿದೆ. ಈ ಸಮಸ್ಯೆಗಳನ್ನು ನಿವಾರಿಸುವ ಬಗ್ಗೆಯೂ ಚಿಂತನೆ ನಡೆಸಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಹತ್ತು ಹಲವು ಸಮಸ್ಯೆಗಳಿವೆ. ಕೇವಲ ರಸ್ತೆಗೆ ಟಾರು ಹಾಕಿಸುವುದು, ಮೋರಿ ಮಾಡಿಸುವುದಷ್ಟೇ ಅಭಿವೃದ್ಧಿಯಲ್ಲ. ಕ್ಷೇತ್ರದ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವುದೇ ಶಾಸಕನ ಕರ್ತವ್ಯ ಎಂಬುದನ್ನು ಅರಿತಿದ್ದೇನೆ. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗುತ್ತೇನೆ.

ಮಿತ್ರ: ಗೆದ್ದರೆ ನೀವು ಪ್ರಥಮ ಆದ್ಯತೆಯಲ್ಲಿ ಮಾಡಬಹುದಾದ ಕೆಲಸವೇನು?

ಕೆ.ಹರೀಶ್‌ಗೌಡ: ಕ್ಷೇತ್ರದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತಕ್ಕೆ ನನ್ನ ಪ್ರಥಮ ಆದ್ಯತೆ. ದೈನಂದಿನ ಸಮಸ್ಯೆಯಾಗಿ ಕಾಡುತ್ತಿರುವ ಕಾನೂನು–ಸುವ್ಯವಸ್ಥೆ ಕಾಪಾಡುವುದು, ಸೂರು ರಹಿತ ಕುಟುಂಬಗಳಿಗೆ ನಿವೇಶನದ ಹಕ್ಕುಪತ್ರ ನೀಡುವ ಬಗ್ಗೆ ತುರ್ತು ಕ್ರಮ ಕೈಗೊಳ್ಳುತ್ತೇನೆ. ಉಳಿದಂತೆ ಜನಪರ ಕೆಲಸ ಮಾಡುವ ನಿಟ್ಟಿನಲ್ಲಿ ಮೈಲಿಗಲ್ಲು ನಿರ್ಮಿಸುವ ವಿಶ್ವಾಸವಿದೆ.

ಮಿತ್ರ: ಮತದಾರರಿಗೆ ನಿಮ್ಮ ಭರವಸೆ ಏನು?

ಕೆ.ಹರೀಶ್‌ಗೌಡ: ಕಳೆದ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಆಶ್ರಯ ಫಲಾನುಭವಿಗಳಿಗೆ ನಿವೇಶನ ಮತ್ತು ಮನೆಗಳನ್ನು ಆದಷ್ಟು ಬೇಗ ವಿತರಿಸುವುದು. ಕ್ಷೇತ್ರದ ಜನರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತೇನೆ. ಕಟ್ಟಕಡೆಯ ಪ್ರಜೆಯೂ ಕೂಡ ನನ್ನನ್ನು ನೇರವಾಗಿ ಭೇಟಿ ಮಾಡಿ ತಮ್ಮ ಸಮಸ್ಯೆಯನ್ನು ಹೇಳಿ, ಪರಿಹರಿಸಿಕೊಳ್ಳುವಂತಹ ವಾತಾವರಣ ನಿರ್ಮಾಣ ಮಾಡುತ್ತೇನೆ. ಎಲ್ಲರಿಗೂ ಸರ್ಕಾರದ ಸವಲತ್ತುಗಳನ್ನು ತಲುಪಿಸುವ ಕೆಲಸ ಪ್ರಾಮಾಣಿಕವಾಗಿ ಮಾಡುತ್ತೇನೆ.

ಮಿತ್ರ: *ಪ್ರಚಾರದ ವೇಳೆ ಮತದಾರರು ನಿಮ್ಮ ಮುಂದಿಡುತ್ತಿರುವ ಗಂಭೀರ ಸಮಸ್ಯೆ ಯಾವುದು?*

ಕೆ.ಹರೀಶ್‌ಗೌಡ: ಹದಗೆಟ್ಟಿರುವ ಕಾನೂನು–ಸುವ್ಯವಸ್ಥೆ ಬಗ್ಗೆ ಹೋದಲ್ಲೆಲ್ಲಾ ಮತದಾರರು ದೂರಿದ್ದಾರೆ. ಕ್ಷೇತ್ರದಲ್ಲಿ ಶಾಂತಿಯ ವಾತಾವರಣ ನಿರ್ಮಾಣ ಮಾಡಬೇಕು ಎಂಬುದು ಮತದಾರರ ಕೋರಿಕೆಯಾಗಿದೆ. ಜೊತೆಗೆ ಬೆಲೆ ಏರಿಕೆ, ನಿರುದ್ಯೋಗ ಹಾಗೂ ಸ್ವಜನ ಪಕ್ಷಪಾತದ ಬಗ್ಗೆಯೂ ಜನರು ನನ್ನ ಗಮನಕ್ಕೆ ತಂದಿದ್ದಾರೆ. ಖಂಡಿತವಾಗಿಯೂ ನಾನು ಶಾಸಕನಾದರೆ ಈ ಗಂಭೀರ ಸಮಸ್ಯೆಗಳ ಪರಿಹಾರದತ್ತ ಗಮನ ಹರಿಸುತ್ತೇನೆ.

ಮಿತ್ರ: *ಯುವ ಮತದಾರರ ಬೆಂಬಲ ಹೇಗಿದೆ? ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯಲು ಏನಾದರು ಕಾರ್ಯತಂತ್ರ ಅನುಸರಿಸುತ್ತಿದ್ದೀರಾ?*

ಕೆ.ಹರೀಶ್‌ಗೌಡ: ಚಾಮರಾಜ ಕ್ಷೇತ್ರದಲ್ಲಿ ಅತೀ ಹೆಚ್ಚು ಯುವ ಮಿತ್ರರು ನನ್ನ ಪರವಾಗಿದ್ದಾರೆ. ಯುವಕರನ್ನು ಸೆಳೆಯಲು ವಿಶೇಷವಾಗಿ ಚುನಾವಣಾ ಸಮಯದಲ್ಲಿ ಯಾವುದೇ ಕಾರ್ಯತಂತ್ರವನ್ನು ರೂಪಿಸುವ ಅವಶ್ಯಕತೆ ನನಗೆ ಕಂಡುಬಂದಿಲ್ಲ. ಯಾಕೆಂದರೆ ಕಳೆದ 15 ವರ್ಷಗಳಿಂದಲೂ ನಾನು ಯುವ ಮಿತ್ರರ ಜೊತೆ ಜೊತೆಯಾಗಿ ಹೆಜ್ಜೆ ಹಾಕುತ್ತಿದ್ದೇನೆ. ಅವರ ಕಷ್ಟ–ಸುಖಗಳಲ್ಲಿ ಭಾಗಿಯಾಗುತ್ತಿದ್ದೇನೆ. ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದರೂ 20 ಸಾವಿರಕ್ಕಿಂತ ಹೆಚ್ಚು ಮತಗಳನ್ನು ಪಡೆಯಲು ಸಾಧ್ಯವಾಗಿದ್ದು, ಯುವ ಮಿತ್ರರ ಬೆಂಬಲದಿಂದಲೇ. ಈಗ ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದರಿಂದ ಸಹಜವಾಗಿಯೇ ಯುವ ಸಮೂಹ ಅತ್ಯುತ್ಸಾಹದಿಂದ ನನ್ನ ಗೆಲುವಿಗೆ ಶ್ರಮಿಸುತ್ತಿದೆ. ಮೇಲಾಗಿ ಹರೀಶ್‌ಗೌಡ ಅಂದರೆ ಕ್ಷೇತ್ರದ ಜನರಲ್ಲಿ ನಮ್ಮವ ಎಂಬ ಭಾವನೆ ಇದೆ. ಈ ಒಂದು ಪ್ರೀತಿಗೆ ನಾನು ಚಿರಋಣಿ. ನನ್ನದು ಸ್ವಾರ್ಥರಹಿತ ರಾಜಕೀಯ, ಪಾರದರ್ಶಕವಾಗಿ ಜನಸೇವೆ ನನ್ನ ಧ್ಯೇಯವಾಗಿದೆ.

ಕೆಆರ್ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಪರ ಮತಯಾಚನೆ

ಮೈಸೂರು ಮೇ 6(ಸಿಎನ್)– ಕೆಆರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಪರ ದೆಹಲಿ ಬಿಜೆಪಿ ಉಪಾಧ್ಯಕ್ಷ ರಾಜೀವ್ ಬಬ್ಬರ್ ಕ್ಷೇತ್ರದ ಮತದಾರರ ಮನೆಮನೆಗೆ ತೆರಳಿ ಮತಯಾಚಿಸಿದರು.

ನಗರದ ವಿದ್ಯಾರಣ್ಯಪುರಂನ 2ನೇ ಹಂತದ ಭೂತಾಳ ಮೈದಾನದಲ್ಲಿ ಕೆಆರ್ ಕ್ಷೇತ್ರದ ಬಿಜೆಪಿ ಯುವ ಮೋರ್ಚ ಘಟಕದಿಂದ ಬೃಹತ್ ವಾಕ್‌ಥಾನ್ ಹಮ್ಮಿಕೊಳ್ಳಲಾಗಿತ್ತು. ಬಿಜೆಪಿ ಬಾವುಟ ತೋರುವ ಮೂಲಕ ವಾಕ್‌ಥಾನ್‌ಗೆ ರಾಜೀವ್ ಬಬ್ಬರ್ ಚಾಲನೆ ನೀಡಿದರು. ಭೂತಾಳ ಮೈದಾನದಿಂದ ಆರಂಭವಾದ ವಾಕ್‌ಥಾನ್, ಚಾಮುಂಡಿಪುರಂ ಸರ್ಕಲ್, ನಂಜುಮಳಿಗೆ, ನೂರೊಂದು ಗಣಪತಿ ವೃತ್ತ, ಬಸವೇಶ್ವರ ರಸ್ತೆ, ಸೇಂಟ್ ಮೇರಿಸ್ ವೃತ್ತದಲ್ಲಿ ತೆರಳಿ ಮತ್ತೆ ವಾಪಸ್ ಭೂತಾಳ ಮೈದಾನದಲ್ಲಿ ಅಂತ್ಯವಾಯಿತು.

ಪಾದಯಾತ್ರೆಯಲ್ಲಿ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಬಿಜೆಪಿ ಮುಖಂಡ ರಮೇಶ್, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕೆಆರ್ ಕ್ಷೇತ್ರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಮನು ಶೈವ, ಕೆಆರ್ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಮತ್ತಿತರರು ಭಾಗಿಯಾಗಿದ್ದರು.




ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಪರ ದೆಹಲಿ ಬಿಜೆಪಿ ಉಪಾಧ್ಯಕ್ಷ ರಾಜೀವ್ ಬಬ್ಬರ್ ಶನಿವಾರ ಮತಯಾಚಿಸಿದರು.



ಮೈಸೂರಿನ 58ನೇ ವಾರ್ಡ್ ರಾಮಕೃಷ್ಣನಗರದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ ಮತಯಾಚಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಆರ್.ದಿನೇಶ್, ಕಾರ್ಗಿಲ್ ಮಹೇಶ್, ಸುರೇಶ್ ಮತ್ತಿತರರಿದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಪರ ಅವರ ಪತ್ನಿ ಕಮಲಾ ಸಿದ್ದೇಗೌಡ ದಾರಿಪುರ, ಬರಡನಪುರ, ಜಯಪುರ, ಹೊಸಕೆರೆ ಮತ್ತು ತೋಟದ ಮನೆಗಳಲ್ಲಿ ಮತಯಾಚಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ನರ್ಸರಿ ಗುರು, ರವಿ, ಕಂಠಿ ಮತ್ತು ಬಸವಬಳಗದ ಸದಸ್ಯರು ಉಪಸ್ಥಿತರಿದ್ದರು.



ಕಾಂಗ್ರೆಸ್ ಸೇರ್ಪಡೆಯಾದ ನಂದೀಶ್ ಪ್ರೀತಮ್ ಅವರನ್ನು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡರು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಕುಂಬಾರ ಸಂಘದ ಸದಸ್ಯರು ಹರೀಶ್‌ಗೌಡರಿಗೆ ಬೆಂಬಲ ಸೂಚಿಸಿದರು.



ಚಾಮುಂಡೇಶ್ವರಿ ಕ್ಷೇತ್ರದ ಹಿನಕಲ್, ವಿಜಯನಗರ 3ನೇ ಹಂತದಲ್ಲಿ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಮನೆಮನೆಗೆ ತೆರಳಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರ ಪರ ಮತ ಯಾಚಿಸಿದರು.

ಹುಯಿಲಾಳು ರಾಮಸ್ವಾಮಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆ



ಮೈಸೂರು, ಮೇ 6– ಡಿಸಿಸಿ ಕಾರ್ಯದರ್ಶಿ ಹಾಗೂ ಗ್ರಾಮ ಪಂಚಾಯತಿ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಅವರು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸಮ್ಮುಖದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು.

ಹುಯಿಲಾಳು ರಾಮಸ್ವಾಮಿ, ಕಳೆದ 25 ವರ್ಷಗಳಿಂದ ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತರಾಗಿ ಪಕ್ಷ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್‌ನಲ್ಲಿ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಲಾಗುತ್ತಿದ್ದು, ಮುಖಂಡರು ತಮ್ಮ ಬೆಂಬಲಿಗರಿಗೆ ಮಾತ್ರ ಮಣೆ ಹಾಕುತ್ತಿದ್ದಾರೆ. ದಶಕಗಳ ಕಾಲ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು ಪಕ್ಷ ಕಟ್ಟಿದವರಿಗೆ ಕಾಂಗ್ರೆಸ್‌ನಲ್ಲಿ ಬೆಲೆ ಇಲ್ಲದಂತಾಗಿದ್ದು, ಇದರಿಂದ ತಾವು ಮನನೊಂದು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡಿರುವುದಾಗಿ ತಿಳಿಸಿರುವ ರಾಮಸ್ವಾಮಿ, ಈ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿರುವ ಶಾಸಕ ಜಿ.ಟಿ.ದೇವೇಗೌಡರ ಗೆಲುವಿಗಾಗಿ ಶ್ರಮಿಸಲಿರುವುದಾಗಿ ತಿಳಿಸಿದ್ದಾರೆ.

ಈ ವೇಳೆ ಶಾಸಕ ಜಿ.ಟಿ. ದೇವೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಬೆಳವಾಡಿ ಶಿವಮೂರ್ತಿ, ಮೈಸೂರು ಜೆಡಿಎಸ್ ಎಸ್‌ಸಿ ವಿಭಾಗದ ಜಿಲ್ಲಾಧ್ಯಕ್ಷ ಬೆಳವಾಡಿ ಶಿವಕುಮಾರಸ್ವಾಮಿ, ಹೊಸಕೋಟೆ ನಾಗರಾಜು, ಜೆಡಿಎಸ್ ಮುಖಂಡ ಬೋಗಾದಿ ಚಂದ್ರಶೇಖರ್, ಬೊಮ್ಮೇನಹಳ್ಳಿ ಕೋಡಿಕುಮಾರ್, ತಾಲೂಕು ಪಂಚಾಯ್ತಿ ಮಾಜಿ ಸದಸ್ಯ ಮಹದೇವ, ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಆರ್. ಮಲ್ಲಯ್ಯ, ಮಾಜಿ ಉಪಾಧ್ಯಕ್ಷರಾದ ಮಮತಾ ಶಿವಕುಮಾರ್, ಮಾಜಿ ಗ್ರಾಪಂ ಸದಸ್ಯರಾದ ಕತ್ವಪ್ಪನ ಶಿವಣ್ಣ, ಕೇಬಲ್ ಶಿವರಾಮ್, ಚಿಕ್ಕ ಹುಯಿಲಾಳು ಪ್ರಸನ್ನ, ವಿಶ್ವಕರ್ಮದ ಮುಖಂಡ ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 7 ಮೇ 2023

ಸಂಸದ ಸ್ಥಾನ ಗ್ಯಾರಂಟಿಯೇ ಇಲ್ಲದ ರಾಹುಲ್ ಗಾಂಧಿಯಿಂದ ಗ್ಯಾರಂಟಿ ಕಾರ್ಡ್ ವಿತರಣೆ

ಶನಿವಾರ ಸಂತೆಯಲ್ಲಿ ಅಸ್ಸಾಂ ಮುಖ್ಯಮಂತ್ರಿ ಹೇಮಂತ್ ಬಿಸ್ವಾಸ್ ಶರ್ಮಾ ವಾಗ್ದಾಳಿ



ಮಡಿಕೇರಿ, ಮೇ 6– ತಮ್ಮ ಸಂಸದ ಸ್ಥಾನದ ಬಗ್ಗೆ ಗ್ಯಾರಂಟಿ ಇಲ್ಲದ ರಾಹುಲ್ ಗಾಂಧಿ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್ ಅನ್ನು ರಾಜ್ಯದ ಜನರಿಗೆ ಹಂಚುತ್ತಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹೇಮಂತ್ ಬಿಸ್ವಾಸ್ ಶರ್ಮಾ ವ್ಯಂಗ್ಯವಾಡಿದ್ದಾರೆ.

ಶನಿವಾರಸಂತೆಯ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ನಡೆದ ಬಿಜೆಪಿ ಪಕ್ಷದ ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡು, ಕೊಡಗಿನ ಜನತೆಗೆ ನಮಸ್ಕಾರಗಳು ಎಂದು ಕನ್ನಡದಲ್ಲಿ ಭಾಷಣ ಆರಂಭಿಸಿದ ಡಾ. ಹಿಮಂತ್ ಬಿಸ್ವಾಸ್ ಶರ್ಮಾ, ಈ ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ 150 ಸ್ಥಾನಗಳ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತವೆಂದು ವಿಶ್ವಾಸ ವ್ಯಕ್ತಪಡಿಸಿದರು.

ಸುಮಾರು 3 ಸಾವಿರ ಕಿಲೋ ಮೀಟರ್ ದೂರದ ಅಸ್ಸಾಂನಿಂದ ಬಿಜೆಪಿಗೆ ಮತ ನೀಡಿ ಎಂದು ಕೇಳಲು ಕೊಡಗಿಗೆ ಬಂದಿದ್ದು, ದೇಶದ ಉದ್ದಗಲಕ್ಕೂ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಕೇಳಿ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಚುನಾವಣೆಯಲ್ಲಿ ಬಿಜೆಪಿ ಪಕ್ಷವು ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ದೃಢವಾಗಿ ನುಡಿದರು. ಈ ಹಿಂದೆ ಬಿಜೆಪಿ 130 ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ ಎಂದು ಹೇಳಲಾಗುತ್ತಿದ್ದರೂ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭಜರಂಗದಳದ ನಿಷೇಧ ವಿಚಾರದ ಪ್ರಸ್ತಾಪದಿಂದಾಗಿ ಬಿಜೆಪಿ 150 ಸ್ಥಾನಗಳಿಸಲಿದೆ ಎಂದರು.

ಕಾಂಗ್ರೆಸ್ ಟಿಪ್ಪು ಪಾರ್ಟಿ: ಧರ್ಮದ ಆಧಾರದ ಮೀಸಲಾತಿಯನ್ನು ರದ್ದುಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರ ಅಭಿನಂದಾರ್ಹ ಕಾರ್ಯ ಮಾಡಿದೆ. ಆದರೆ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಕೇವಲ ಒಂದು ಧರ್ಮವನ್ನು ಓಲೈಕೆ ಮಾಡುವ ಯೋಜನೆಗಳನ್ನು ಜಾರಿಗೆ ತರುವ ಭರವಸೆ ನೀಡಿದ್ದು, ಕಾಂಗ್ರೆಸ್ ಪಕ್ಷ ಟಿಪ್ಪು ಸುಲ್ತಾನ್ ಪಾರ್ಟಿಯಾಗಿದ್ದು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೇ ಈ ನೆಲ ಪಿಎಫ್ಐ ಅಡ್ಡೆಯಾಗಲಿದೆ ಎಂದು ಟೀಕಿಸಿದರು. ಅಸ್ಸಾಂ ರಾಜ್ಯದಲ್ಲಿ ತಮ್ಮ ನೇತೃತ್ವದ ಬಿಜೆಪಿ ಸರಕಾರ ಸುಮಾರು 600ಕ್ಕೂ ಅಧಿಕ ಮದರಸಾಗಳನ್ನು ಬಂದ್ ಮಾಡಿದ್ದರೇ, ಕಾಂಗ್ರೆಸ್ ಆಡಳಿತದ ಪಕ್ಕದ ರಾಜಸ್ಥಾನ ಮದರಸಗಳನ್ನು ತೆರೆಯುತ್ತಿದೆ ಎಂದು ಆರೋಪಿಸಿದರು.

ಗ್ಯಾರಂಟಿಯೇ ಇಲ್ಲದ ಕಾಂಗ್ರೆಸ್ ಮತ್ತು ಅದರ ಮುಖಂಡ ರಾಹುಲ್ ಗಾಂಧಿ, ಉಚಿತ ಭರವಸೆಗಳ ಗ್ಯಾರಂಟಿಗಳನ್ನು ನೀಡುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು. ಆರೋಗ್ಯ ಕ್ಷೇತ್ರ, ಕೃಷಿ, ಐಟಿಬಿಟಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗುವ ಮೂಲಕ ದೇಶದಲ್ಲೇ ಮುಂದುವರೆದ ರಾಜ್ಯವಾದ ಕರ್ನಾಟಕದ ಜನತೆಗೆ ಕಾಂಗ್ರೆಸ್‌ನ ಉಚಿತ ಗ್ಯಾರಂಟಿಗಳ ಅಗತ್ಯವಿಲ್ಲವೆಂದು ಡಾ. ಹಿಮಂತ್ ಬಿಸ್ವಾಸ್ ಹೇಳಿದರಲ್ಲದೇ, ಬಿಜೆಪಿ ಅಭ್ಯರ್ಥಿ ಶಾಸಕ ಅಪ್ಪಚ್ಚು ರಂಜನ್ ಅವರನ್ನು ಸ್ಪಷ್ಟಬಹುಮತದೊಂದಿಗೆ ಗೆಲ್ಲಿಸುವಂತೆ ಮನವಿ ಮಾಡಿದರು.

ಸಂತ ಪರಂಪರೆಗೆ ಮತ ನೀಡಿ: ಸ್ವತಂತ್ರ ಬಸವಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿ, ಕಾಂಗ್ರೆಸ್ ಅಭ್ಯರ್ಥಿ ಈ ಹಿಂದೆ ಅರಕಲಗೋಡುವಿನಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಅವಧಿಯಲ್ಲಿ ಏನೂ ಅಭಿವೃದ್ಧಿ ಕಾರ್ಯ ಮಾಡದೇ, ಇದೀಗ ಕೊಡಗನ್ನು ಅಭಿವೃದ್ಧಿ ಮಾಡುತ್ತೇನೆಂದು ಹೇಳುತ್ತಿದ್ದಾರೆಂದು ಟೀಕಿಸಿದರು. ಹಿಂದುತ್ವದ ಆಧಾರದಲ್ಲಿ ಸರಕಾರ ರಚನೆ ಮಾಡುವ ಪಕ್ಷ ಅಂತ ಇದ್ದರೇ ಅದು ಭಾರತೀಯ ಜನತಾ ಪಾರ್ಟಿ ಮಾತ್ರ ಎಂದು ಸಮರ್ಥಿಸಿಕೊಂಡರಲ್ಲದೇ, ಈದೇಶದಲ್ಲಿ ಕೇಸರಿ ತೊಟ್ಟ ಸನಾತನಾ ಸಂತ ಪರಂಪರೆ ಮುಂದುವರೆಯಬೇಕಿದೆ. ಈ ಕಾರಣದಿಂದ ಹಿಂದುತ್ವವನ್ನು ಪ್ರತಿಪಾದಿಸುವ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರಲೇ ಬೇಕಿದೆ. ಈ ನಿಟ್ಟಿನಲ್ಲಿ ಪಕ್ಷದ ಕಾರ್ಯಕರ್ತರು ಚಿಂತನೆ ನಡೆಸಬೇಕಿದ್ದು, ಮತದಾರರು ಬಿಜೆಪಿಯನ್ನು ಬೆಂಬಲಿಸಬೇಕೆಂದು ಕರೆ ನೀಡಿದರು.

ಸಭೆಯನ್ನು ಉದ್ದೇಶಿಸಿ ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ ಮಾತನಾಡಿದರು. ಇದೇ ಸಂದರ್ಭ ಕಾಂಗ್ರೆಸ್ ಪಕ್ಷದ ಮುಖಂಡರಾಗಿದ್ದ ಬಿ.ಎಸ್.ಅನಂತಕುಮಾರ್ ಅವರು ತಮ್ಮ ಬೆಂಬಲಿಗರೊಂದಿಗೆ ಅಸ್ಸಾಂ ರಾಜ್ಯದ ಮುಖ್ಯಮಂತ್ರಿ ಡಾ. ಹಿಮಂತ್ ಬಿಸ್ವಾಸ್ ಶರ್ಮಾ ಅವರ ಸಮ್ಮುಖದಲ್ಲಿ ಬಿಜೆಪಿ ಪಕ್ಷ ಸೇರ್ಪಡೆಗೊಂಡರು. ಇದೇ ಸಂದರ್ಭ ಶಾಸಕ ಅಪ್ಪಚ್ಚು ರಂಜನ್ ಅವರು ಅಸ್ಸಾಂ ಮುಖ್ಯಮಂತ್ರಿ ಹೇಮಂತ್ ಬಿಸ್ವಾಸ್ ಶರ್ಮಾ ಅವರಿಗೆ ಕೊಡಗಿನ ಕುಮೇಣಸು ಮತ್ತು ಜೇನನ್ನು ಕೊಡುಗೆಯಾಗಿ ನೀಡಿ ಗೌರವಿಸಿದರು.

ಬೃಹತ್ ಬೈಕ್ ಜಾಥಾ: ಬಿಜೆಪಿಯ ಬೃಹತ್ ಚುನಾವಣಾ ಸಮಾವೇಶದ ಹಿನ್ನೆಲೆಯಲ್ಲಿ ಶನಿವಾರಸಂತೆಯಲ್ಲಿ ಬೃಹತ್ ಬೈಕ್ ಜಾಥಾ ನಡೆಸಲಾಯಿತು. ನೂರಾರು ಮಂದಿ ಬಿಜೆಪಿಯ ಧ್ವಜ ಹಿಡಿದು ಬೈಕ್ ಜಾಥಾದಲ್ಲಿ ಪಾಲ್ಗೊಂಡಿದ್ದರು. ಮೋದಿ, ಅಮಿತ್ ಶಾ, ಬೊಮ್ಮಾಯಿ ಹಾಗೂ ಅಪ್ಪಚ್ಚು ರಂಜನ್ ಪರ ಘೋಷಣೆಗಳನ್ನು ಮೊಳಗಿಸುವ ಮೂಲಕ ಕಾರ್ಯಕರ್ತರು ಗುಡುಗಳಲೆ ಜಾತ್ರಾ ಮೈದಾನದಿಂದ ಬೈ ಜಾಥಾ ಮೂಲಕ ಶನಿವಾರಸಂತೆ ಕಿತ್ತೂರು ರಾಣಿ ಚೆನ್ನಮ್ಮ ವೃತ್ತಕ್ಕೆ ಆಗಮಿಸಿದರು.

ವೇದಿಕೆಯಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ.ಭಾರತೀಶ್, ಮಾಜಿ ಎಂಎಲ್‌ಸಿ, ಎಸ್.ಜಿ. ಮೇದಪ್ಪ, ಮುಖಂಡರಾದ ಮಾದಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಾಂಪ್ರದಾಯಿಕ ಮತಗಟ್ಟೆಗೆ ಭೇಟಿ



ಮಡಿಕೇರಿ, ಮೇ 6– ಜಿ.ಪಂ. ಸಿಇಒ ಮತ್ತು ಸ್ವೀಪ್ ಸಮಿತಿ ಅಧ್ಯಕ್ಷ ಡಾ.ಎಸ್.ಆಕಾಶ್ ಮತ್ತು ಭಾರತೀಯ ಮಾಹಿತಿ ಸೇವೆ(ಐಐಎಸ್) ವಿಭಾಗದ ಅಧಿಕಾರಿ ಪವನ್ ಅವರು ನಾಗರಹೊಳೆಯ ಸರ್ಕಾರಿ ವಾಲ್ಮೀಕಿ ಆಶ್ರಮ ಶಾಲೆಯಲ್ಲಿ ತೆರೆಯಲಾಗಿರುವ 'ಸಾಂಪ್ರದಾಯಿಕ' ಮತಗಟ್ಟೆಗೆ ಶನಿವಾರ ಭೇಟಿ ನೀಡಿ ವೀಕ್ಷಿಸಿದರು. ಜಿ.ಪಂ ಯೋಜನಾ ನಿರ್ದೇಶಕ ಜಗದೀಶ್, ಆಶ್ರಮ ಶಾಲೆಯ ಪ್ರಾಂಶುಪಾಲ ಎನ್.ಎಸ್.ಬಸವರಾಜು, ಐಟಿಡಿಪಿ ಇಲಾಖೆಯ ತಾಲೂಕು ಅಧೀಕ್ಷಕ ನವೀನ್ ಕುಮಾರ್ ಇತರರು ಇದ್ದರು.

ಗುಣಮಟ್ಟದ ಶಿಕ್ಷಣ ಸಂಸ್ಥೆಗಳು ಅಗತ್ಯ



ವಿರಾಜಪೇಟೆ, ಮೇ 6– ದೇಶಕ್ಕೆ ಮುಖ್ಯವಾಗಿ ಬೇಕಾಗಿರುವುದು ಗುಣಮಟ್ಟವುಳ್ಳ ಶಿಕ್ಷಣ ಸಂಸ್ಥೆಗಳು. ಈ ಸಾಲಿಗೆ ಕೊಡಗು ದಂತ ವೈದ್ಯಕೀಯ ಕಾಲೇಜು ಕೂಡ ಸೇರಿದೆ ಎಂದು ಕ್ಲಿನಿಕಲ್ ಫಾರ್ಮಾ ಸ್ಯುಟಿಕಲ್ಸ್‌ನ ನಿರ್ದೇಶಕ ಡಾ.ಕೃತೀಶ್ ಬೋಪಣ್ಣ ಹೇಳಿದರು.

ವಿರಾಜಪೇಟೆ ಬಳಿಯ 'ಕೊಡಗು ದಂತ ವೈದ್ಯಕೀಯ ಕಾಲೇಜಿನ 21ನೇ ವಾರ್ಷಿಕೋತ್ಸವ' ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಐದು ಸಾವಿರ ಜನಕ್ಕೆ ಒಬ್ಬ ದಂತ ವೈದ್ಯರಿದ್ದಾರೆ. ಇತರ ದೇಶಗಳಲ್ಲಿ ಏಳು ಸಾವಿರ ಜನಸಂಖ್ಯೆಗೆ ಒಬ್ಬ ದಂತ ವೈದ್ಯರಿದ್ದಾರೆ. ಭಾರತದಲ್ಲಿ ಬಾಯಿಯ ಮೂಲಕವೇ ಅನೇಕ ಕಾಯಿಲೆಗಳು ಮನುಷ್ಯನಿಗೆ ಹರಡುವ ಸಾಧ್ಯತೆಗಳಿವೆ. ಆದ್ದರಿಂದ ಬಾಯಿಯ ಶುಚಿತ್ವದ ಬಗ್ಗೆ ಜನರು ಹೆಚ್ಚು ಗಮನ ಹರಿಸಬೇಕಾಗಿದೆ ಎಂದರು.

ದಂತ ವೈದ್ಯಕೀಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ಆಗಬೇಕಿದ್ದು, ದಂತ ವೈದ್ಯಕೀಯ ವಿಜ್ಞಾನಿಗಳ ತರಬೇತಿ ಮತ್ತು ಅತ್ಯಾಧುನಿಕವಾದ ಮೆಡಿಕಲ್ ಸಾಧನಗಳು ಬರಬೇಕಾಗಿದೆ ಎಂದ ಕೃತೀಶ್ ಬೋಪಣ್ಣ ತಿಳಿಸಿದರು. ಕೊಡಗು ದಂತ ವೈದ್ಯಕೀಯ ಕಾಲೇಜಿನ ಡೀನ್ ಡಾ.ಸುನೀಲ್ ಮುದ್ದಯ್ಯ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಂತ ಕಾಲೇಜಿನ ಪ್ರಾಂಶುಪಾಲ ಡಾ. ಕೆ.ಸಿ.ಪೊನ್ನಪ್ಪ ವಾರ್ಷಿಕ ವರದಿ ವಾಚಿಸಿದರು, ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಿ.ಬಿ.ಲಿಯಾನಾ ಸ್ವಾಗತಿಸಿದರು.

ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಮಂಜೇಶ್ ಮೌರ್ಯ ವಂದಿಸಿದರು. ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಕೊನೆಯಲ್ಲಿ ವಿದ್ಯಾರ್ಥಿ ಹಾಗೂ ಶಿಕ್ಷಕ ವೃಂದದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಮೇ 15ರಿಂದ ಮಕ್ಕಳ ಉಚಿತ ಬೇಸಿಗೆ ಶಿಬಿರ

ಮಡಿಕೇರಿ, ಮೇ 6– ರಾಜ್ಯ ಬಾಲ ಭವನ ಸೊಸೈಟಿ, ಬೆಂಗಳೂರು, ಜಿಲ್ಲಾ ಬಾಲ ಭವನ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ (1 ರಿಂದ 10ನೇ ತರಗತಿ) 5 ರಿಂದ 16 ವರ್ಷದ ಮಕ್ಕಳಿಗಾಗಿ ಮಡಿಕೇರಿಯ ಪೊನ್ನಮ್ಮ ಕುಶಾಲಪ್ಪ ಸ್ಕೌಟ್ಸ್ ಅಂಡ್ ಗೈಡ್ಸ್ ಭವನ, ಮೇ 15 ರಿಂದ 29 ರವರೆಗೆ ಉಚಿತ ಬೇಸಿಗೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆದ್ದರಿಂದ ಈ ಶಿಬಿರದಲ್ಲಿ ಭಾಗವಹಿಸಲು ಆಸಕ್ತಿ ಇರುವ ಮಕ್ಕಳು ಮೇ 12 ರೊಳಗೆ ದೂರವಾಣಿ ಸಂಖ್ಯೆ 8618861505, 6363285685 ಕಚೇರಿ ಸಮಯದಲ್ಲಿ ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳುವಂತೆ ತಿಳಿಸಿದೆ.

ಮೂರ್ನಾಡ್‌ನಲ್ಲಿ ಮತದಾನ ಮಹತ್ವ ಸಂದೇಶದ ಮ್ಯಾರಥಾನ್



ಮಡಿಕೇರಿ, ಮೇ 6– ಜಿಲ್ಲಾಡಳಿತ ಹಾಗೂ ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ (ಸ್ವೀಪ್) ಹಾಗೂ ರೋಟರ್ಯಾಕ್ಟ್ ಕ್ಲಬ್ ಪದವಿ ಕಾಲೇಜು ಮೂರ್ನಾಡು ಸಹಯೋಗದಲ್ಲಿ ಮೂರ್ನಾಡು ಬಳಿಯ ಹೆಚ್.ಪಿ.ಪೆಟ್ರೋಲ್ ಬಂಕ್ ಬಳಿಯಿಂದ ಮೂರ್ನಾಡು ಬಾಚೆಟ್ಟಿರ ಲಾಲುಮುದ್ದಯ್ಯ ಕ್ರೀಡಾಂಗಣದವರೆಗೆ ಮತದಾನ ಮಹತ್ವ ಸಾರುವ ಜಾಗೃತಿ ಜಾಥಾ ಶನಿವಾರ ನಡೆಯಿತು.

ಸ್ಪರ್ಧೆಗೆ ಸ್ವೀಪ್ ಸಮಿತಿಯ ಅಧ್ಯಕ್ಷರು ಹಾಗೂ ಜಿ.ಪಂ.ಸಿಇಒ ಡಾ. ಆಕಾಶ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಡಿಕೇರಿ ರೋಟರಿ ಸಂಸ್ಥೆಯ ಮುಖ್ಯಸ್ಥರಾದ ಅನಿಲ್ ಎಚ್.ಟಿ, ಮಡಿಕೇರಿ ವುಡ್ಸ್‌ನ ಅಧ್ಯಕ್ಷ ಸಂಪತ್ ಕುಮಾರ್, ಕಾರ್ಯದರ್ಶಿ ವಸಂತ್ ಕುಮಾರ್, ಮಡಿಕೇರಿ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಧನಂಜಯ್, ಮೂರ್ನಾಡು ವಿದ್ಯಾಸಂಸ್ಥೆಯ ಅಧ್ಯಕ್ಷ ಬಾಚೆಟ್ಟಿರ ಜಿ.ಮಾದಪ್ಪ, ಉಪಾಧ್ಯಕ್ಷ ಪುದಿಯೊಕ್ಕಡ ಸುಬ್ರಮಣಿ, ಸ್ವೀಪ್ ಸಮಿತಿಯ ನವೀನ್, ಸಮಿತಿಯ ಪದಾಧಿಕಾರಿಗಳು, ರೋಟರಿ ವುಡ್ಸ್‌ನ ಸದಸ್ಯರಾದ ಹರೀಶ್, ನವೀನ್, ಬೋಪಣ್ಣ, ರೋಟರ್ಯಾಕ್ಟ್ ಕ್ಲಬ್‌ನ ಅಧ್ಯಕ್ಷೆ ಶ್ರೀರಕ್ಷಾ, ಕಾರ್ಯದರ್ಶಿ ಸಂಜಯ್, ಸದಸ್ಯರು ಇದ್ದರು. ಮತದಾನ ಜಾಗೃತಿ ಮೂಡಿಸಲು ವಿರಾಜಪೇಟೆ, ನಾಪೋಕ್ಲು, ಮಡಿಕೇರಿ ಮತ್ತು ಮೂರ್ನಾಡುವಿನ ಸುಮಾರು 100 ಸ್ಪರ್ಧಿಗಳು ಪಾಲ್ಗೊಂಡಿದ್ದರು.

ವಿಜೇತರು: ಪುರುಷರ ವಿಭಾಗದಲ್ಲಿ ನಿತಿನ್ ಪ್ರಥಮ, ಮಿಲನ್ ದ್ವಿತೀಯ, ತಿಶನ್ ಎ.ಎಂ ತೃತೀಯ ಸ್ಥಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ತ್ರಿಶಾ ಪ್ರಥಮ, ಲೀನಾ ದ್ವಿತೀಯ, ವೀಕ್ಷಿತಾ ದೇಚಮ್ಮ ತೃತೀಯ ಸ್ಥಾನ ಪಡೆದರು. ವಿಜೇತರಿಗೆ ನಗದು ಹಾಗೂ ಪ್ರಶಸ್ತಿ ಪತ್ರ ನೀಡಲಾಯಿತು. ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೆ ಪ್ರಶಂಸನಾ ಪತ್ರವನ್ನು ನೀಡಲಾಯಿತು. 'ನಾನು ಮತ ಹಾಕುತ್ತೇನೆ' ಎಂಬ ಸಂದೇಶಕ್ಕೆ ಎಲ್ಲರೂ ತಮ್ಮ ಹಸ್ತಾಕ್ಷರ ಬರೆದು ಜಾಗೃತಿ ಮೂಡಿಸಿದರು.

ಮತದಾನದ ಸಂದೇಶ ಸಾರಿದ ಮಿನಿ ವಿಮಾನಗಳು

ಮಡಿಕೇರಿ, ಮೇ 6– ಬಾಳೆಲೆ ಬಳಿಯ ನಿಟ್ಟೂರು ಕಾರ್ಮಾಡು ಗ್ರಾಮದಲ್ಲಿ ಮಿನಿ ವಿಮಾನಗಳು ವಿಭಿನ್ನ ರೀತಿಯಲ್ಲಿ ಬಾನಂಗಣದಲ್ಲಿ ಹಾರಾಡಿ ಮತದಾನದ ಮಹತ್ವ ಸಾರುವ ಮೂಲಕ ಕಿಕ್ಕಿರಿದು ಸೇರಿದ್ದ ಗ್ರಾಮಸ್ಥರ ಗಮನ ಸೆಳೆದವು.

ಜಿಲ್ಲಾಡಳಿತ ಹಾಗೂ ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ (ಸ್ವೀಪ್) ಆಶ್ರಯದಲ್ಲಿ ಬಾಳೆಲೆ ಕಾರ್ಮಾಡು ಗ್ರಾಮ ನಿವಾಸಿ ಕೊಳ್ಳಿ ಮಾಡ ರಾಜಿ ಗಣಪತಿ ಅವರ ಸಂಗ್ರಹದಲ್ಲಿರುವ ಮಿನಿ ವಿಮಾನಗಳ ಪ್ರದರ್ಶನ ಮತ್ತು ಹಾರಾಟ ಅತ್ಯಾಕರ್ಷಕವಾಗಿ ಜರುಗಿತು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಮತ್ತು ಜಿ.ಪಂ ಸಿಇಒ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಡಾ.ಎಸ್.ಆಕಾಶ್ ಮಿನಿ ವಿಮಾನ ಹಾರಿಸುವ ಮೂಲಕ ವಿಭಿನ್ನ ರೀತಿಯಲ್ಲಿ ಮತದಾನ ಮಹತ್ವ ಸಾರುವ ಸಂದೇಶ ಅಭಿಯಾನಕ್ಕೆ ಚಾಲನೆ ನೀಡಿದರು.

ಸುಮಾರು ಒಂದೂವರೆ ಗಂಟೆಗಳ ಕಾಲ ಕಾರ್ಮಾಡು ಗ್ರಾಮದ ಖಾಸಗಿ ಏರ್‌ಸ್ಟ್ರಿಪ್‌ನಲ್ಲಿ ಮಿನಿ ವಿಮಾನಗಳು ಸದ್ದು ಮಾಡುತ್ತಾ ಬಾನಂಗಣದಲ್ಲಿ ಹಾರಾಟ ನಡೆಸಿದವು. ಮಿನಿ ಸೆಸ್ನಾ, ಎಕ್ಸ್‌ಎಫ್ 80, ಎಕ್ಸ್ 380 ಶ್ರೇಣಿಯ ಮಿನಿ ವಿಮಾನಗಳು, ಮಿನಿ ಹೆಲಿಕಾಪ್ಟರ್‌ಗಳು, ತ್ರಿಡಿ ವಿಮಾನಗಳು ಕೂಡ ಹಾರಾಟದ ಮೂಲಕ ಗಮನ ಸೆಳೆದವು. ಕೊಳ್ಳಿಮಾಡ ರಾಜಿ ಗಣಪತಿ ಸಂಗ್ರಹದಲ್ಲಿರುವ 32 ಮಿನಿ ವಿಮಾನಗಳ ಪ್ರದರ್ಶನ ಕೂಡ ಗ್ರಾಮಸ್ಥರು, ಸಾರ್ವಜನಿಕರ ಮನ ಸೆಳೆಯಿತು. ಬೆಂಗಳೂರಿನ ಯುವ ಪೈಲಟ್ ಆದಿತ್ಯ ಪವಾರ್ ತನ್ನ ಕೈಚಳಕದಲ್ಲಿ ಮಿನಿ ವಿಮಾನವನ್ನು ಸಂಗೀತದ ನಾದಕ್ಕೆ ತಕ್ಕಂತೆ ಬಾನಿನಲ್ಲಿ ತೇಲಿ ಸುತ್ತಾ, ನೃತ್ಯಶೈಲಿಯಲ್ಲಿ ತೇಲಿಸುತ್ತಾ ಪ್ರದರ್ಶನ ನೀಡಿದ್ದು, ಪ್ರೇಕ್ಷಕರ ಅಪಾರ ಶ್ಲಾಘನೆಗೆ ಕಾರಣವಾಯಿತು. ಬೆಂಗಳೂರಿನ ಪೈಲಟ್ ಎಮಿಲ್ ಅವರಿಂದಲೂ ವಿಶಿಷ್ಟ ರೀತಿಯಲ್ಲಿ ಮಿನಿವಿಮಾನಗಳ ಹಾರಾಟ ನಡೆಯಿತು. ಮಾಪಂಗಡ ಮುತ್ತಣ್ಣ ಕೋಡಿಮಣಿಯಂಡ ಸುನಿಲ್ ಸುಬ್ಬಯ್ಯ ಅವರು ಮಿನಿ ವಿಮಾನಗಳ ಹಾರಾಟಕ್ಕೆ ಸಹಕಾರ ನೀಡಿದ್ದರು.









ಹನೂರಲ್ಲಿ ಕುಮಾರಸ್ವಾಮಿ ಭರ್ಜರಿ ರೋಡ್ ಶೋ

ಪಕ್ಷದ ಅಭ್ಯರ್ಥಿ ಎಂ.ಆರ್. ಮಂಜುನಾಥ್ ಪರ ಮತಯಾಚನೆ

ಹನೂರು, ಮೇ 6– ಜೆಡಿಎಸ್ ಅಭ್ಯರ್ಥಿ ಎಂ.ಆರ್.ಮಂಜುನಾಥ್ ಪರ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅವರು ಸಾವಿರಾರು ಜನರ ಸಮ್ಮುಖದಲ್ಲಿ ಬೃಹತ್ ರೋಡ್ ಶೋ ಮೂಲಕ ಮತಪ್ರಚಾರ ನಡೆಸಿದರು.

ಪಟ್ಟಣದ ಹೊರವಲಯದ ಅಜ್ಜಿಪುರ ಮುಖ್ಯ ರಸ್ತೆಯಲ್ಲಿರುವ ಹೆಲಿಪ್ಯಾಡ್‌ಗೆ ಹೆಲಿಕ್ಯಾಪ್ಟರ್ ಮೂಲಕ ಆಗಮಿಸಿದ ಅವರು ಪಟ್ಟಣದ ಅನ್ನಪೂರ್ಣೇಶ್ವರಿ ಹೋಟೆಲ್ ವೃತ್ತದಿಂದ ಸಾವಿರಾರು ಕಾರ್ಯಕರ್ತರ ನೂಕು ನುಗ್ಗಲಿನ ನಡುವೆ ತೆರೆದ ವಾಹನದಲ್ಲಿ ಸಾಗಿದರು. ನಂತರ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಖಾಸಗಿ ಬಸ್ ನಿಲ್ದಾಣದ ಬಳಿ ಮಾತನಾಡಿದ ಎಚ್.ಡಿ.ಕುಮಾರಸ್ವಾಮಿ ಅವರು ಹನೂರು ಪಟ್ಟಣದಲ್ಲಿ ನಡೆಯುತ್ತಿರುವ ಜೆಡಿಎಸ್ ಚುನಾವಣಾ ಪ್ರಚಾರದ ರೋಡ್ ಶೋ ಐತಿಹಾಸಿಕವಾದದ್ದು ಎಂದರು.

ಜೆಡಿಎಸ್ ಅಭ್ಯರ್ಥಿ ಎಂ.ಆರ್.ಮಂಜುನಾಥ್ ಅವರನ್ನು ಶಾಸಕರನ್ನಾಗಿ ಕಳುಹಿಸಿ ನಾನು ಈ ಜಿಲ್ಲೆಗೆ ಮಂತ್ರಿ ಮಾಡುತ್ತೇನೆ. ಮೇಕೆದಾಟು ಯೋಜನೆಯನ್ನು ಸಾಕಾರಗೊಳಿಸಿ ಈ ಭಾಗದ ಜನತೆಯ ಕಲ್ಯಾಣಕ್ಕೆ ಶ್ರಮಿಸುತ್ತೇನೆ. ಹನೂರು ಕ್ಷೇತ್ರವನ್ನು ದತ್ತು ಪಡೆದು ರಾಮನಗರ ಜಿಲ್ಲೆಯಂತೆ ಅಭಿವೃದ್ಧಿ ಮಾಡಲಾಗುವುದು. ಮಂಜುನಾಥ್ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೊನೆ ಗಳಿಗೆಯಲ್ಲಿ ಸ್ಪರ್ಧಿಸಿ ಅಲ್ಪ ಮತಗಳಿಂದ ಸೋತಿದ್ದರೂ ಕೂಡ ಕ್ಷೇತ್ರ ಬಿಟ್ಟು ಹೋಗದೆ ಕಳೆದ 5 ವರ್ಷಗಳಿಂದ ನಿರಂತರವಾಗಿ ಜನರ ಕಷ್ಟ ಸುಖಗಳಿಗೆ ಭಾಗಿಯಾಗಿ ಮನೆ ಮಗನಂತಿದ್ದಾರೆ. ನನ್ನ ಬಳಿ ಯಾವಾಗಲೂ ಚರ್ಚಿಸುತ್ತಾರೆ. ಕ್ಷೇತ್ರದಲ್ಲಿ ಉದ್ಯೋಗ ಕಲ್ಪಿಸಬೇಕೆಂದು. ಈ ನಿಟ್ಟಿನಲ್ಲಿ ನಾನು ಮಂಜುನಾಥ್ ಅವರ ಜೊತೆ ಕೈಜೋಡಿಸಿ ಹನೂರು ಭಾಗದಲ್ಲಿ ಕೈಗಾರಿಕೆಯನ್ನು ತೆರೆಯುವ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುತ್ತೇನೆ ಎಂದರು.

ಬಿಜೆಪಿ ಕಾಂಗ್ರೆಸ್ ಜೊತೆಗೂಡಿ ಒಂದು ಕಾರ್ಯವನ್ನು ಕೈಗೊಳ್ಳಲು ಸಾಧ್ಯವಿಲ್ಲ ಎಂದ ಅವರು ಹನೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂ.ಆರ್. ಮಂಜುನಾಥ್ ಅವರನ್ನು ರಾಜ್ಯದ ಇತರೆ ವಿಧಾನಸಭಾ ಕ್ಷೇತ್ರಗಳಿಗಿಂತ ಹೆಚ್ಚಿನ ಬಹುಮತದ ಮೂಲಕ ಆಶೀರ್ವದಿಸಬೇಕೆಂದು ಮನವಿ ಮಾಡಿದರು.

ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಕೂಡ ರೋಡ್ ಶೋನಲ್ಲಿ ಭಾಗಿ

ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಮಾತನಾಡಿ, ಕೇಂದ್ರದಲ್ಲಿ ಅಧಿಕಾರದಲ್ಲಿರುವುದು ಕೋಮುವಾದಿ ಬಿಜೆಪಿ ಸರ್ಕಾರವಾಗಿದೆ. ಇವರು ಪ್ರತಿ ದಿನ ಎರಡು ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣ ಮಾಡುವುದು, ನಿರಪರಾಧಿಗಳನ್ನು ಜೈಲಿಗೆ ಕಳಿಸುವುದು ಇವರ ಕೆಲಸವಾಗಿದೆ. ರಾಜ್ಯ ಮತ್ತು ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ 40% ಭ್ರಷ್ಟ ಸರ್ಕಾರಗಳಾಗಿವೆ. ಇದನ್ನು ತೊಲಗಿಸಲು ಈ ಬಾರಿ ಜನತೆ ಜೆಡಿಎಸ್ ಅನ್ನು ಬೆಂಬಲಿಸಬೇಕು. 2024 ರ ಚುನಾವಣೆಯಲ್ಲಿ ಇವರು ಮತ್ತೆ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ಬದಲಾವಣೆ ಮಾಡುತ್ತಾರೆ. ದ್ವೇಷ ಭಾಷಣದ ಮೂಲಕ ಮುಸ್ಲಿಮರನ್ನು ಹೆದರಿಸುವ ಕೆಲಸ ಮಾಡುತ್ತಿದ್ದಾರೆ. ಮುಸ್ಲಿಮರ ರಕ್ಷಣೆ ಆಗಬೇಕಾದರೆ ಮುಸ್ಲಿಂ ಸಮುದಾಯದವರು ಜೆಡಿಎಸ್ ಪಕ್ಷಕ್ಕೆ ಬೆಂಬಲ ನೀಡಿ. ಜೆಡಿಎಸ್ ಮೀಸಲಾತಿ ಹಾಗೂ ಮುಸ್ಲಿಮರ ರಕ್ಷಣೆಯನ್ನು ಮಾಡುತ್ತದೆ ಎಂದರು.



ಕೊಳ್ಳೇಗಾಲ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ಅವರೊಡಗೂಡಿ ಮೈಸೂರು ನಗರ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಹಿರಿಯ ಉಪಾಧ್ಯಕ್ಷ ಜಿ. ಮಂಟೇಲಿಂಗಯ್ಯ ಹೊನ್ನೂರು ಗ್ರಾಮದಲ್ಲಿ ಮತಯಾಚಿಸಿದರು.

ವಿ.ಸೋಮಣ್ಣ ಪರ ಪಾಪು, ರಾಮು ಅಬ್ಬರದ ಮತ ಬೇಟೆ

ಬಡವರ ನೋವಿಗೆ ಸ್ಪಂದಿಸುವ ಸೋಮಣ್ಣರನ್ನೂ ಚಾ.ನಗರದಿಂದ ಗೆಲ್ಲಿಸಿ ಸಿಎಂ ಮಾಡಿ



ಚಾಮರಾಜನಗರ, ಮೇ 6– ಬಿಜೆಪಿ ಅಭ್ಯರ್ಥಿ ಹಾಗೂ ಸಚಿವ ವಿ.ಸೋಮಣ್ಣ ಅವರು ಚಾ.ನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿದ್ದು, ಅವರನ್ನು ಹೆಚ್ಚಿನ ಬಹುಮತದಲ್ಲಿ ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಿಕೊಟ್ಟರೆ, ಮುಖ್ಯಮಂತ್ರಿಯಾಗುವ ಅದೃಷ್ಟ ಅವರಿಗಿದೆ ಎಂದು ಬಿಜೆಪಿ ಹಿರಿಯ ದಲಿತ ಮುಖಂಡ ವೆಂಕಟರಮಣಸ್ವಾಮಿ (ಪಾಪು) ಹಾಗೂ ಬಿಜೆಪಿ ರಾಷ್ಟ್ರೀಯ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಿ.ಎನ್. ರಾಮು ವಿಶ್ವಾಸ ವ್ಯಕ್ತಪಡಿಸಿದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚನ್ನಪ್ಪನಪುರ, ಹರದನಹಳ್ಳಿ, ಅಮಚವಾಡಿ, ಕೋಡಿಉಗನೆ ಗ್ರಾಮಗಳಲ್ಲಿ ಮನೆ–ಮನೆಗೆ ತೆರಳಿ ಮತಯಾಚನೆ ಮಾಡಿದ ಅವರು, ಚಾವಡಿಗಳಲ್ಲಿ ದಲಿತ ಮುಖಂಡರು ಹಾಗೂ ಯಜಮಾನರುಗಳ ಸಭೆ ಮಾಡಿ ಬಿಜೆಪಿ ಬೆಂಬಲಿಸುವಂತೆ ಮನವಿ ಮಾಡಿ ಮಾತನಾಡಿದರು.

ವಿ. ಸೋಮಣ್ಣ ಅಮು ಸಮಾನತೆಯ ಹರಿಕಾರ ಬಸವಣ್ಣ ಅನುಯಾಯಿಯಾಗಿದ್ದು, ಕಾಯಕವೇ ಕೈಲಾಸವೆಂದು ಜಾತ್ಯಾತೀತ ನಾಯಕರಾಗಿರುವ ಸೋಮಣ್ಣ ಅವರಿಗೆ ಕ್ಷೇತ್ರದಲ್ಲಿ ಉತ್ತಮವಾದ ವಾತಾವರಣವಿದೆ. ಎಲ್ಲಾ ವರ್ಗದ ಜನರು ಅವರನ್ನು ಗೆಲ್ಲಿಸಲು ಮುಂದಾಗಿದ್ದಾರೆ. ದಲಿತ ಸಮುದಾಯದ ಬಂಧುಗಳ ಸಹ ಈ ಬಾರಿ ಕ್ಷೇತ್ರ ಅಭಿವೃದ್ದಿಯನ್ನು ಬಯಸಿ, ಬದಲಾವಣೆ ಮಾಡಿ, ವಿ.ಸೋಮಣ್ಣ ಅವರಿಗೆ ನಿಮ್ಮ ಒಂದು ಮತ ಹಾಕಿ, ನಿಮ್ಮೆಲ್ಲರ ಬದುಕು ಹಸನಾಗುತ್ತದೆ ಎಂದು ತಿಳಿಸಿದರು.

ಬಿಜೆಪಿ ರಾಷ್ಟ್ರೀಯ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಿ.ಎನ್. ರಾಮು ಮಾತನಾಡಿ, ಬಡವರ ನೋವಿಗೆ ಸ್ಪಂದಿಸುವ ವಿ.ಸೋಮಣ್ಣ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಿಕೊಡುವ ಮೂಲಕ ಮುಖ್ಯಮಂತ್ರಿಯನ್ನಾಗಿ ಮಾಡುವ ಅವಕಾಶ ಚಾಮರಾಜನಗರ ಕ್ಷೇತ್ರದ ಜನರಿಗೆ ದೊರೆಯುತ್ತದೆ ಎಂದರು.

ನಾನು ಸಹ 28 ವರ್ಷಗಳಿಂದ ಸೋಮಣ್ಣ ಅವರನ್ನು ಬಲ್ಲೆ. ಅವರ ಅಭಿವೃದ್ಧಿ ಚಿಂತನೆ ಮತ್ತು ಬಡವರಿಗೆ ಸಹಾಯ ಮಾಡುವ ಗುಣ ಹೆಚ್ಚಿನದ್ದಾಗಿದೆ. ಹೀಗಾಗಿ ಅವರು ಚಾ.ನಗರಕ್ಕೆ ಬಂದಿದ್ದಾರೆ. ಇಂಥ ನಾಯಕರನ್ನು ಗೆಲ್ಲಿಸುವ ಮೂಲಕ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ, ನಿಮ್ಮ ಗ್ರಾಮಗಳ ಗುಡಿಸಲು ಮುಕ್ತರಾಗಿ ಮಾಡಲಿದ್ದಾರೆ ಎಂದರು. ಬಿಜೆಪಿ ಮುಖಂಡರಾದ ಸೂರ್ಯಪ್ರಕಾಶ್, ಶಿವಕುಮಾರ್, ಕೆರೆಹಳ್ಳಿ ವೆಂಕಟೇಶ್, ಕಾಳಿಚರಣ್, ಮಹದೇವ ಸ್ವಾಮಿ ಹಾಜರಿದ್ದರು.



ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಭ್ಯರ್ಥಿ ವಾಟಾಳ್ ನಾಗರಾಜ್ ಪುತ್ರಿ ಅನುಪಮ ಅವರು ತಮ್ಮ ತಂದೆ ವಾಟಾಳ್ ನಾಗರಾಜು ಅವರೊಂದಿಗೆ ತೆರೆದ ಜೀಪಿನಲ್ಲಿ ನಗರದಲ್ಲಿ ಪ್ರಮುಖ ಬೀದಿಗಳಲ್ಲಿ ರೋಡ್ ಶೋ ನಡೆಸಿ ಅಬ್ಬರದ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಬಸವಪ್ಪನಪಾಳ್ಯ ಕುಮಾರ್, ಗೋಪಾಲ್‌ನಾಯಕ, ವರದನಾಯಕ, ಮಹೇಶ್, ಪಣ್ಯದ ಹುಂಡಿ ರಾಜು, ಶಿವಲಿಂಗಮೂರ್ತಿ, ಚಾ.ರಾ.ಕುಮಾರ್ ಇತರರು ಹಾಜರಿದ್ದರು.

ಸಿದ್ದರಾಮಯ್ಯರದ್ದು ಅಡ್ಜಸ್ಟ್‌ಮೆಂಟ್ ರಾಜಕಾರಣ

ಹನೂರಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

ಚಾಮರಾಜನಗರ, ಮೇ 6– ಸಿದ್ದರಾಮಯ್ಯ ಅವರು ಅಡ್ಜಸ್ಟ್‌ಮೆಂಟ್ ರಾಜಕಾರಣ ಮಾಡುತ್ತಿದ್ದಾರೆ ಎಂದು ಟೀಕಿಸಿದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಸುಮಲತಾ ಗೆಲ್ಲಿಸಿ ತಪ್ಪು ಮಾಡಿದ್ವಿ ಎಂದಿದ್ದಾರೆ. ಸಿದ್ದರಾಮಯ್ಯ ಅವರದ್ದು ಅಡ್ಜಸ್ಟಮೆಂಟ್ ರಾಜಕಾರಣ ಅನ್ನೋಕೆ ಇನ್ನೂ ಉದಾಹರಣೆ ಬೇಕಾ ಎಂದ ಅವರು, ಸಿದ್ದರಾಮಯ್ಯ ಅವರಿಗೆ ಯಾವ ಸಿದ್ಧಾಂತ ಇದೆ, ಯಾವ ಸಿದ್ಧಾಂತ ಇಟ್ಕೊಂಡಿದ್ದಾರೆ ಹೇಳಿ ಎಂದು ಹನೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಪ್ರಶ್ನಿಸಿದರು.

ಭಾಷಣ ಮಾಡುವಾಗ ಕಾಂಗ್ರೆಸ್ ಮುಗಿಸಿ ಅಂತ ಹೇಳ್ತಾರೆ. ನಂತರ ಇಲ್ಲ ಬಿಜೆಪಿ ಮುಗಿಸಿ ಅಂತಾರೆ, ಹೃದಯದಲ್ಲಿ ಏನಿದೆಯೋ ಅದನ್ನ ಹೇಳ್ತಾರೆ. ಇದು ಅವರ ಸಿದ್ಧಾಂತ. ನಾನು ಅವರಿಂದ ತತ್ವ–ಸಿದ್ಧಾಂತ ಕಲಿಬೇಕಿಲ್ಲ. ಸಾರ್ವಜನಿಕರ ಕಷ್ಟ–ಸುಖ ಏನು ಅಂತ ನಾನು ತಿಳ್ಕೊಂಡಿದ್ದೇನೆ ಎಂದು ತಿಳಿಸಿದರು.

ರೋಡ್ ಶೋನಿಂದ ತೊಂದರೆ: ಬೆಂಗಳೂರಿನಲ್ಲಿ ನಡೆಯುವ ಪ್ರಧಾನಿ ಮೋದಿ ಅವರ ರೋಡ್ ಶೋನಿಂದ ಜನರಿಗೆ ತೊಂದರೆಯೇ ಹೊರತು ಬಿಜೆಪಿಗೆ ಅದರಿಂದ ಏನೂ ಲಾಭವಿಲ್ಲ ಎಂದು ಕುಮಾರಸ್ವಾಮಿ ಹೇಳಿದರು.

ಜನರಿಗೆ ತೊಂದರೆ ನೀಡಿ ಪ್ರಧಾನಿ ರೋಡ್ ಶೋ ಮಾಡುತ್ತಿದ್ದಾರೆ. ಇದರಿಂದ ದುಡಿಯುವ ಜನ ಬೀದಿ ಪಾಲಾಗುತ್ತಿದ್ದಾರೆ. ಯಾವ ಪುರುಷಾರ್ಥಕ್ಕೆ ರೋಡ್ ಶೋ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ನಾಳೆ ನೀಟ್ ಪರೀಕ್ಷೆ ಬರೆಯುವ ಮಕ್ಕಳಿಗೆ ರೋಡ್ ಶೋನಿಂದ ತೊಂದರೆಯಾಗಲಿದೆ. ಮನೆ ಬಾಗಿಲು ತೆಗೆಯಬೇಡಿ, ಗಲ್ಲಿಗಳಲ್ಲಿ ಓಡಾಡಬೇಡಿ ಅಂತಾರೆ, ಹಾಗಾದರೆ ರೋಡ್ ಶೋ ಯಾಕೆ ಮಾಡುತ್ತೀರಾ? ಯಾರೋ ಕೆಲವರನ್ನು ಕರೆದುಕೊಂಡು ಬಂದು ಮೋದಿ... ಮೋದಿ... ಎಂದು ಕೂಗಿಸಿಕೊಂಡು ಹೋಗುತ್ತಾರೆ ಎಂದು ಕಿಡಿಕಾರಿದರು.

ಸಮೀಕ್ಷೆಗಳೆಲ್ಲ ಸುಳ್ಳು: ಚುನಾವಣೆ ಘೋಷಣೆಗೊಂಡ ನಂತರ ಹಲವು ಸಮೀಕ್ಷೆಗಳನ್ನು ಮಾಡಲಾಗುತ್ತಿದ್ದು, ಇವು ಕೃತಕವಾಗಿವೆ. ರಾಷ್ಟ್ರೀಯ ಪಕ್ಷಗಳು ಹಣ ನೀಡಿ ಜನರ ಭಾವನೆಗಳನ್ನು ಕದಡುವ ಕೆಲಸ ಮಾಡುತ್ತಿವೆ. ಈ ಸಮೀಕ್ಷೆಗಳಲ್ಲಿ ಯಾವುದೇ ಸತ್ಯಾಂಶವಿಲ್ಲ. ಸಮೀಕ್ಷೆಗಳೆಲ್ಲ ಈ ಬಾರಿ ಉಲ್ಟಾ ಹೊಡೆಯುತ್ತವೆ. ಯಾವುದೇ ರಾಷ್ಟ್ರೀಯ ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಗಲ್ಲ. ಅದು ಅವರ ಕನಸು. ಸಮೀಕ್ಷೆಗಳಲ್ಲಿ ಜೆಡಿಎಸ್‌ಗೆ ಕಡಿಮೆ ಸ್ಥಾನ ಕೊಟ್ಟಿರುವುದು ಆನಂದಪಡಲಿ. ಸಮೀಕ್ಷೆ ಮೀರಿ ಜೆಡಿಎಸ್ ಹೆಚ್ಚಿನ ಸ್ಥಾನ ಗೆಲ್ಲಲಿದೆ ಎಂದರು.

ಐದನೇ ಪುಟದಿಂದ

ಕಾಂಗ್ರೆಸ್ ಸರ್ಕಾರ ಬಯಸಿದ್ದಾರೆ

ಕೆಳಗಿಳಿಸಲಾಯಿತು. ಬಿಜೆಪಿಯವರಿಂದ ಆಪರೇಷನ್ ಕಮಲ ಎನ್ನುವುದು ಕರ್ನಾಟಕದಲ್ಲಿ ಪರಿಚಯ ವಾಯಿತು. 2008 ಮತ್ತು 2018ರಲ್ಲಿ ಅಪರೇಷನ್ ಕಮಲ ಮಾಡಿದರು ಎಂದು ವಿವರಿಸಿದರು. ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ 40 ಪರ್ಸೆಂಟ್ ಸರ್ಕಾರ ಎಂದು ಆರೋಪಿಸಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಪ್ರಧಾನಿಗಳಿಗೆ ಪತ್ರ ಬರೆದು ವರ್ಷ ಕಳೆದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಪ್ರಧಾನಿ ಮೋದಿ ಅವರು 'ನ ಖಾವೂಂಗ ನ ಖಾನೇದೂಂಗ' ಎನ್ನುವುದು ಪ್ರಚಾರಕ್ಕೆ ಸೀಮಿತ. ರುಪ್ಸಾದವರು (ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಒಕ್ಕೂಟ) ಪ್ರಧಾನಿಗಳಿಗೆ ಪತ್ರ ಬರೆದು ಈ ಸರ್ಕಾರ 40 ಪರ್ಸೆಂಟ್ ಕಮಿಷನ್ ಕೇಳುತ್ತಿದ್ದೆ ಆರೋಪಿಸಿದರು. ಬಸವರಾಜ ಬೊಮ್ಮಾಯಿ ತಮ್ಮ ಸರ್ಕಾರದ ವಿರುದ್ಧದ ಭ್ರಷ್ಟಾಚಾರ ಆರೋಪಕ್ಕೆ ದಾಖಲೆ ಕೊಡಿ ಎನ್ನುತ್ತಾರೆ. ಈ ಪತ್ರಗಳು ದಾಖಲಾತಿಗಳಲ್ಲವೇ? ಎಂದು ಪ್ರಶ್ನಿಸಿದರು.

ಬಿಜೆಪಿ ಭ್ರಷ್ಟಾಚಾರಕ್ಕೆ ಇನ್ಯಾವ ಸಾಕ್ಷ್ಯ ಬೇಕು: ಸಬ್ ಇನ್ಸ್‌ಪೆಕ್ಟರ್ ನೇಮಕಾತಿ ಸಂಬಂಧ ಎಡಿಜಿಪಿ ಒಳಗೊಂಡಂತೆ ಹಲವರು ಜೈಲಿಗೆ ಹೋಗಿದ್ದು ಸಾಕ್ಷ್ಯ ಆಗುವುದಿಲ್ಲವೇ? ಬಿಜೆಪಿ ಕಾರ್ಯಕರ್ತ ಸಂತೋಷ್ ಪಾಟೀಲ್ ಗ್ರಾಮೀಣಾಭಿವೃದ್ಧಿ ಇಲಾಖೆ ಯಲ್ಲಿ ಗುತ್ತಿಗೆ ಕೆಲಸ ನಿರ್ವಹಿಸಿ ಬಿಲ್ ಪಾವತಿಗೆ 40 ಪರ್ಸೆಂಟ್ ಕಮಿಷನ್ ಕೇಳಿದ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ. ಡೆತ್‌ನೋಟ್‌ನಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಈಶ್ವರಪ್ಪನವರೇ ನನ್ನ ಸಾವಿಗೆ ಕಾರಣವೆಂದು ಆರೋಪಿಸಿದ್ದ. ಇದು ಸಾಕ್ಷ್ಯ ಆಗುವುದಿಲ್ಲವೇ? ನಾವು ಸದನದ ಒಳಗೆ ಹೊರಗೆ ಹೋರಾಟ ಮಾಡಿದ ನಂತರ ಈಶ್ವರಪ್ಪ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಇತ್ತೀಚೆಗೆ ಬಿಜೆಪಿ ಶಾಸಕ ವಿರೂಪಾಕ್ಷಪ್ಪ ಮಾಡಾಳ್ ಪುತ್ರ ತಮ್ಮ ತಂದೆ ಪರವಾಗಿ ಲಂಚ ಪಡೆಯುವಾಗ ಲೋಕಾಯುಕ್ತಕ್ಕೆ ಸಿಕ್ಕಿ ಬಿದ್ದರು. ಬಿಜೆಪಿ ಸಂಪೂರ್ಣ ಭ್ರಷ್ಟಾಚಾರದಲ್ಲಿ ತೊಡಗಿದೆ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷ್ಯ ಇನ್ನೇನು ಬೇಕು ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಸರ್ಕಾರದಲ್ಲೂ ಭ್ರಷ್ಟಾಚಾರ ಇತ್ತು ಎಂದು ಬಸವರಾಜ ಬೊಮ್ಮಾಯಿ ಪ್ರತ್ಯಾರೋಪ ಮಾಡುತ್ತಾರೆ. ಆಗ ವಿರೋಧ ಪಕ್ಷದಲ್ಲಿದ್ದೂ ಮತ್ತೇಕೆ ಮಾತನಾಡಲಿಲ್ಲ. ಅಲ್ಲದೇ, 3 ವರ್ಷ 10 ತಿಂಗ ಳಿಂದ ಇವರೇ ಅಧಿಕಾರದಲ್ಲಿದ್ದೂ ಸಾಕ್ಷ್ಯ ಇದ್ದರೆ ಕ್ರಮ ವಹಿಸಬಹುದಿತ್ತಲ್ಲ ಎಂದು ಪ್ರಶ್ನಿಸಿದರು. ಬಿಜೆಪಿ ಸರ್ಕಾರ ಅಭಿವೃದ್ಧಿಯನ್ನೂ ಮಾಡಿಲ್ಲ. ಜೊತೆಗೆ ದ್ವೇಷ ರಾಜಕಾರಣ ಮಾಡಿದರು. ಕೋಮುವಾದ ಮುನ್ನೆಲೆಗೆ ತಂದರು. ಹಿಜಾಬ್, ಹಲಾಲ್, ಆಜಾನ್ ವಿವಾದ ಹುಟ್ಟು ಹಾಕಿದರು. ಇದರಿಂದ ಅಲ್ಪಸಂಖ್ಯಾತರು ಆತಂಕದಲ್ಲಿ ಬದುಕಬೇಕಾದ ಸ್ಥಿತಿ ನಿರ್ಮಾಣವಾಗಿತ್ತು. ಇವೆಲ್ಲಾ ಜನರಿಗೆ ಬೇಕಿದೆಯೇ? ಎಂದು ಕಿಡಿಕಾರಿದರು.

ನಾನು ಐದು ವರ್ಷ ಮುಖ್ಯಮಂತ್ರಿ ಆಗಿದ್ದಾಗ ವಸತಿ ಯೋಜನೆಗಳಡಿ ರಾಜ್ಯದಲ್ಲಿ 15 ಲಕ್ಷ ಮನೆ ಗಳನ್ನು ನಿರ್ಮಾಣ ಮಾಡಲಾಯಿತು. ಇವರು 3 ವರ್ಷ 10 ತಿಂಗಳ ಅಧಿಕಾರಾವಧಿಯಲ್ಲಿ ಹೊಸದಾಗಿ ಒಂದೇ ಒಂದು ಮನೆ ಕಟ್ಟಿದ್ದರೆ ದಾಖಲೆ ತೋರಿಸಲಿ. ನಮ್ಮ ಅವಧಿಯಲ್ಲಿ ಮಂಜೂರಾಗಿ ವಿವಿಧ ಹಂತ ಗಳಲ್ಲಿ ಇದ್ದ ಮನೆಗಳಿಗೆ ಇವರು ಸಮರ್ಪಕವಾಗಿ ಬಾಕಿ ಕೊಡಲಿಲ್ಲ ಎಂದು ಆರೋಪಿಸಿದರು.

ನಾವು ಬಡವರಿಗೆ ನೀಡುತ್ತಿದ್ದ 7 ಕೆ.ಜಿ ಅಕ್ಕಿ ಯನ್ನು 5 ಕೆ.ಜಿಗೆ ಇಳಿಸಿದರು. ಇದು ಜನರ ತೆರಿಗೆ ಹಣದಲ್ಲಿ ನೀಡುತ್ತಿದ್ದ ಸೌಲಭ್ಯ. ಇದನ್ನು ಕಡಿತ ಮಾಡಿದ್ದೇಕೆ? ನಾವು 2013ರಲ್ಲಿ ನೀಡಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿ, 20ಕ್ಕೂ ಹೆಚ್ಚು ಹೆಚ್ಚುವರಿ ಕಾರ್ಯಕ್ರಮಗಳನ್ನು ನೀಡಿದ್ದೇವೆ. ಬಿಜೆಪಿಯವರು 2018ರಲ್ಲಿ 600 ಭರವಸೆಗಳನ್ನು ನೀಡಿದ್ದರು. ಅದರಲ್ಲಿ ಎಷ್ಟು ಭರವಸೆಗಳನ್ನು ಈಡೇರಿಸಿದ್ದಾರೆ ಎಂದರು.

ಕಳೆದ ಚುನಾವಣೆ ಸಂದರ್ಭದಲ್ಲಿ ಯಡಿಯೂರಪ್ಪ ನಾವು ಅಧಿಕಾರಕ್ಕೆ ಬಂದ ಕೂಡಲೇ ಮಹದಾಯಿ ಯೋಜನೆ ಪೂರ್ಣ ಮಾಡುತ್ತೇವೆ. ಇದನ್ನು ರಕ್ತದಲ್ಲಿ ಬರೆದು ಕೊಡುತ್ತೇನೆ ಎಂದಿದ್ದರು. ಆದರೆ ಏನೂ ಮಾಡಲಿಲ್ಲ. ಮೇಕೆದಾಟು ಯೋಜನೆಗೆ ಅನುಮೋದನೆ ಕೊಟ್ಟಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿಗೆ ಸರ್ಕಾರದ ಅಧಿಸೂಚನೆ ಪ್ರಕಟಿಸಿಲ್ಲ. ಈ ಸರ್ಕಾರ ಯಾವುದನ್ನು ಮಾಡಿದೆ ಎಂದು ಪ್ರಶ್ನಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಮತ್ತಿತರರು ಹಾಜರಿದ್ದರು.

ಹಬ್ಬಗಳಲ್ಲಿ ಉಚಿತ ಸಿಲಿಂಡರ್ ಹೇಗೆ ಕೊಡುತ್ತಾರೆ?

ಮೈಸೂರು,ಮೇ 6(ಪಿಎಂ)– ಕಾಂಗ್ರೆಸ್ ನೀಡಿರುವ ಗ್ಯಾರಂಟಿ ಈಡೇರಿಸಲು ಆಗುವುದಿಲ್ಲ ಎಂದು ಪ್ರಧಾನಿ ಮೋದಿ ಟೀಕಿಸಿದ್ದಾರೆ. ಇದೀಗ ಇವರು ವಿವಿಧ ಹಬ್ಬಗಳಲ್ಲಿ ಉಚಿತ ಗ್ಯಾಸ್ ಸಿಲಿಂಡರ್ ಕೊಡುವುದಾಗಿ ಭರವಸೆ ನೀಡಿದ್ದಾರೆ. ಹಾಗಾದರೆ ಇದನ್ನು ಇವರೇಗೆ ಮಾಡುತ್ತಾರೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. ಸ್ವಾತಂತ್ರ್ಯ ಬಂದಾಗಿನಿಂದ ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದವರೆಗೆ ದೇಶದ ಮೇಲಿದ್ದ ಸಾಲ 53 ಲಕ್ಷದ 11 ಸಾವಿರ ಕೋಟಿ. ಇಂದು ದೇಶದ ಮೇಲಿನ ಸಾಲ 155 ಲಕ್ಷ ಕೋಟಿ ಇದೆ. ಮೋದಿ ಅವರು 9 ವರ್ಷದಲ್ಲಿ ಸುಮಾರು 102 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಹಾಗಾದರೆ ದೇಶ ದಿವಾಳಿ ಮಾಡಿದ್ದು ಯಾರು? ಕರ್ನಾಟಕದಲ್ಲಿ 2018 ಮಾರ್ಚ್‌ವರೆಗೆ ಇದ್ದ ಸಾಲ 2 ಲಕ್ಷದ 42 ಸಾವಿರ ಕೋಟಿ. ಇಂದು ರಾಜ್ಯದ ಮೇಲೆ 5 ಲಕ್ಷದ 64 ಸಾವಿರ ಕೋಟಿ ಸಾಲ ಇದೆ. ಅಂದರೆ 5 ವರ್ಷಗಳಲ್ಲಿ 3 ಲಕ್ಷದ 22 ಸಾವಿರ ಕೋಟಿ ಸಾಲ ಮಾಡಲಾಗಿದೆ. ರಾಜ್ಯ ಮತ್ತು ಕೇಂದ್ರವನ್ನು ದಿವಾಳಿ ಮಾಡಿದ್ದು ಯಾರು? ಎಂದು ಪ್ರಶ್ನಿಸಿದರು. ಈ ವರ್ಷ ಅಸಲು ಮತ್ತು ಬಡ್ಡಿ ರೂಪದಲ್ಲಿ 56 ಸಾವಿರ ಕೋಟಿ ಹಣವನ್ನು ಸಾಲದ ಮರುಪಾವತಿ ಮಾಡಬೇಕು. ನಾನು ಮುಖ್ಯಮಂತ್ರಿಯಾಗಿದ್ದಾಗ ಪ್ರತಿ ವರ್ಷ ಅಂದಾಜು 20 ಸಾವಿರ ಕೋಟಿ ಸಾಲ ಮಾಡಲಾಗುತ್ತಿತ್ತು. 5 ವರ್ಷದಲ್ಲಿ 1 ಲಕ್ಷದ 16 ಸಾವಿರ ಕೋಟಿ ಸಾಲ ಆಗಿತ್ತು. ಇದು ವಿತ್ತೀಯ ಹೊಣೆಗಾರಿಕೆ ನೀತಿ ಮಾನದಂಡಗಳ ಒಳಗಿತ್ತು. ಬಿಜೆಪಿ ಬಂದ ಮೇಲೆ ಈ ಎಲ್ಲಾ ಮಾನದಂಡಗಳನ್ನು ಉಲ್ಲಂಘಿಸಿದ್ದಾರೆ. ಇದಕ್ಕೆ ಕೋವಿಡ್ ನೆಪ ಹೇಳುತ್ತಾರೆ. ಕೋವಿಡ್ ನಿರ್ವಹಣೆಗೆ 2 ವರ್ಷಗಳಲ್ಲಿ 15 ಸಾವಿರ ಕೋಟಿ ಖರ್ಚು ಮಾಡಿದ್ದಾರೆ. ಈ ವೇಳೆ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ. ಹಾಗಾಗಿ ಇದು ಕಾರಣ ಆಗುವುದಿಲ್ಲ. ಈ ವರ್ಷ 78 ಸಾವಿರ ಕೋಟಿ ಸಾಲ ಮಾಡಿದ್ದಾರೆ ಎಂದು ವಿವರಿಸಿದರು.



ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದ ಮಾಜಿ ಶಾಸಕ ಹೆಚ್.ಎಸ್.ಶಂಕರ ಲಿಂಗೇಗೌಡ ಅವರ ಪುತ್ರ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ನಂದೀಶ್ ಪ್ರೀತಂ ಅವರನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಸಂವಾದ ಕಾರ್ಯಕ್ರಮದ ಬಳಿಕ ಮಾಜಿ ಸಿಎಂ ಸಿದ್ದರಾಮಯ್ಯ ಅಭಿನಂದಿಸಿದರು.

ನಂಜನಗೂಡಿಗೆ ಇಂದು ಮೋದಿ

ಸವಿ ನೆನಪಿಗಾಗಿ ನರೇಂದ್ರ ಮೋದಿಯವರಿಗೆ ನಾಡಿನ ಕಲೆ, ಸಂಸ್ಕೃತಿ ಬಿಂಬಿಸುವ ಉಡುಗೊರೆ ನೀಡಲಾಗುವುದು ಎಂದರು.

ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಮೋದಿ ಭೇಟಿ: ವೇದಿಕೆ ಕಾರ್ಯಕ್ರಮ ಮುಗಿದ ಬಳಿಕ ಮೋದಿಯವರು ಸಂಜೆ 5.35ಕ್ಕೆ ಹೊರಟು 6.45ರವರೆಗೆ ದೇವಾಲಯದಲ್ಲಿ ಗಣಪತಿ, ಸುಬ್ರಹ್ಮಣ್ಯ, ಆದಿ ನಾರಾಯಣ, ಪಾರ್ವತಿ ಅಮ್ಮನವರ ದರ್ಶನ ಪಡೆಯಲಿದ್ದಾರೆ. ಶ್ರೀಕಂಠೇಶ್ವರನಿಗೆ ಅಭಿಷೇಕ, ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ನಂತರ ವಾಹನದ ಮೂಲಕ ಮೈಸೂರಿನ ವಿಮಾನ ನಿಲ್ದಾಣಕ್ಕೆ ತೆರಳಿ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ಪ್ರಧಾನ ಮಂತ್ರಿಗಳು ದೇವಾಲಯಕ್ಕೆ ತೆರಳುವ ನಗರದ ಚಾಮರಾಜನಗರ ಬೈಪಾಸ್ ರಸ್ತೆಯ ಇಕ್ಕೆಲಗಳಲ್ಲಿ ಉತ್ತರದ ಕಾಶಿಯಿಂದ ದಕ್ಷಿಣ ಕಾಶಿಯವರೆಗೆ ಮೋದಿಯವರು ದೇವಾಲಯಗಳನ್ನು ಅಭಿವೃದ್ಧಿಪಡಿಸಿರುವ ಚಿತ್ರಗಳ ಪ್ರದರ್ಶಿಸಲಾಗುವುದು ಎಂದು ಮಾಹಿತಿ ನೀಡಿದರು.

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ದಕ್ಷಿಣಕಾಶಿ ನಂಜನಗೂಡಿಗೆ ದೇಶದ ಹೆಮ್ಮೆಯ ಪ್ರಧಾನಮಂತ್ರಿ ಆಗಮಿಸುತ್ತಿರುವುದು ವೈಯಕ್ತಿಕವಾಗಿ ನನಗೆ ಹೆಮ್ಮೆಯ ವಿಚಾರ. ಪ್ರಧಾನ ಮಂತ್ರಿಗಳು ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಾಗ, ಮೈಸೂರಿನ ಚಾಮುಂಡೇಶ್ವರಿ ದರ್ಶನ ಪಡೆದು ಹೋಗುತ್ತಿದ್ದರು. ಪಕ್ಷದ ವರಿಷ್ಠರಿಗೆ ನಮ್ಮ ಕ್ಷೇತ್ರದ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡುವಂತೆ ಮನವೊಲಿಸಲು ಕೋರಿಕೆ ಸಲ್ಲಿಸಿದ್ದೆ. ನನ್ನ ಬಯಕೆ ಈಡೇರುತ್ತಿರುವುದು ಸಂತಸ ತಂದಿದೆ. ಗುಂಡ್ಲುಪೇಟೆ– ನಂಜನಗೂಡು ಉಪ ಚುನಾವಣೆ ಸಂದರ್ಭ ಕಾಂಗ್ರೆಸ್ ಆಡಳಿತ ಯಂತ್ರ ದುರುಪಯೋಗಪಡಿಸಿಕೊಂಡು ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಿದ್ದರು. ಗುಂಡ್ಲುಪೇಟೆ– ನಂಜನಗೂಡು ಕ್ಷೇತ್ರವನ್ನು ಗೆದ್ದು, ನಾವು ಇಬ್ಬರು ಶಾಸಕರು ಸಾಕಷ್ಟು ಅಭಿವೃದ್ಧಿ ಕಾರ್ಯ ನಡೆಸಿದ್ದೇವೆ. ಪ್ರಧಾನ ಮಂತ್ರಿಗಳು ಪ್ರಚಾರ ಮಾಡಿದ ಕಡೆಗಳಲ್ಲಿ ಅವರ ಪ್ರಚಾರ ಪ್ರಭಾವ ಬೀರಿದೆ. ಹೀಗಾಗಿ ಮತ್ತೆ ನಾವು ಚುನಾವಣೆಯಲ್ಲಿ ಬಹುಮತದಿಂದ ವಿಜಯ ಸಾಧಿಸುತ್ತೇವೆ ಎಂದರು. ಈ ವೇಳೆ ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ತಾಲೂಕು ಬಿಜೆಪಿ ಅಧ್ಯಕ್ಷ ಹೊರಳವಾಡಿ ಮಹೇಶ್, ವೈ.ವಿ.ರವಿಶಂಕರ್, ಡಾ.ಶಿವರಾಂ, ಕ್ಷೇತ್ರದ ಚುನಾವಣಾ ಉಸ್ತುವಾರಿ ವಿವೇಕ್ ರಾಥೋಡ್, ಸುರೇಶ್ ಬಾಬು, ದೇವನೂರು ಪ್ರತಾಪ್, ಮಹೇಶ್, ಬಾಲಚಂದ್ರ ಉಪಸ್ಥಿತರಿದ್ದರು.

ಕಲಾವಿದರ ಕುಂಚದಲ್ಲಿ ಮೂಡಿತು ಚಿತ್ತಾರ: ಸಖಿ, ಬುಡಕಟ್ಟು ಮತಗಟ್ಟೆಗೆ ಸಿಂಗಾರ







● ಮೋಹನ್ ಕಾಯಕ

ಮೈಸೂರು, ಮೇ 6– ಕಲಾವಿದರ ಕುಂಚದಲಿ ಅರಳಿದ ವರ್ಣಮಯ ಪುಷ್ಪಗಳ ಚಿತ್ತಾರದ ನಡುವೆ ಕಂಗೊಳಿಸುತ್ತಿರುವ ಮತಗಟ್ಟೆಗಳು, ಮತದಾನದ ಜಾಗೃತಿ ಸಂದೇಶಗಳೊಂದಿಗೆ ಕಣ್ಮನ ಸೆಳೆಯುತ್ತಿವೆ.

ರಾಜ್ಯ ವಿಧಾನಸಭಾ ಚುನಾವಣೆಯ ಮತದಾನಕ್ಕೆ ಕೆಲವು ದಿನಗಳಷ್ಟೇ ಬಾಕಿ ಉಳಿದಿದ್ದು, ಮತಗಟ್ಟೆಗಳು ಅತ್ಯಾಕರ್ಷಕವಾಗಿ ಸಿಂಗಾರಗೊಂಡಿವೆ. ಅದರಲ್ಲೂ ಸಖಿ(ಪಿಂಕ್ ಬೂತ್) ಹಾಗೂ ಬುಡಕಟ್ಟು ಮತಗಟ್ಟೆಗಳು ಮನ ಸೆಳೆಯುವಂತಿವೆ. ವಿವಿಧ ಬಗೆ ಬಗೆಯ ಹೂಗಳ ಜೊತೆಗೆ ಹಳ್ಳಿಯ ಸೊಬಗು ಮತಗಟ್ಟೆಗಳ ಗೋಡೆಗಳಲ್ಲಿ ಮೂಡಿ ಬಂದಿದೆ.

ಮಹಿಳಾ ಸಮುದಾಯದ ಮತದಾನ ಪ್ರಮಾಣ ಹೆಚ್ಚಿಸುವ ಸುದ್ದುದ್ದೇಶದಿಂದ ಮಹಿಳಾ ಸ್ನೇಹಿ ವಾತಾವರಣದೊಂದಿಗೆ ವಿಶೇಷವಾಗಿ ಸಜ್ಜುಗೊಂಡಿರುವ ಸಖಿ ಮತಗಟ್ಟೆಗಳಲ್ಲಿ ಮಹಿಳೆಯರು ಇತರರಿಗೆ ಆಸರೆಯಾಗಬಲ್ಲರು. ಕೂಲಿ–ನಾಲಿ ಮಾಡಿ ಮಕ್ಕಳನ್ನು ಸಲುಹುವ ಶಕ್ತಿ ಅವರಲ್ಲಿದೆ. ದೇಶದ ಏಳ್ಗೆಗೆ ಅವರ ಕೊಡುಗೆ ಅಪಾರ ಎಂಬುದನ್ನು ಕಲೆಯ ಮೂಲಕ ವ್ಯಕ್ತಪಡಿಸಲಾಗಿದೆ.

ಹಾಗೆಯೇ ಬುಡಕಟ್ಟು ಸಮುದಾಯದ ಮತದಾರರನ್ನು ಸೆಳೆಯಲು ನಿರ್ಮಿಸಿರುವ ಬುಡಕಟ್ಟು ಮಾದರಿ(Ethnic Based Polling booths) ಮತಗಟ್ಟೆಗಳು ಹಳ್ಳಿಯ ಸೊಬಗನ್ನು ಪಸರಿಸುತ್ತಿವೆ. ಕಾಡಿನಂಚಿನಲ್ಲಿ ವಾಸಿಸುವ ಗ್ರಾಮಸ್ಥರ ಗುಡಿಸಲು, ಉಡುಗೆ–ತೊಡುಗೆಗಳನ್ನು ಚಿತ್ರಿಸುವ ಮೂಲಕ ಬುಡಕಟ್ಟು ಸಮುದಾಯದ ಕಲೆ–ಸಂಸ್ಕೃತಿಯನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.


ಜಿಲ್ಲೆಯಲ್ಲಿ 55 ಸಖಿ ಮತಗಟ್ಟೆಗಳು: ಜಿಲ್ಲೆಯಲ್ಲಿ 55 ಸಖಿ ಮತಗಟ್ಟೆಗಳಿದ್ದು, ಪಿಂಕ್ ಬಣ್ಣದಿಂದ ಕಂಗೊಳಿಸುತ್ತಿವೆ. ಜಿಲ್ಲೆಯ 11 ಕ್ಷೇತ್ರಗಳಲ್ಲಿ ಪ್ರತಿ ಕ್ಷೇತ್ರಕ್ಕೆ 5 ರಂತೆ 55 ಮತಗಟ್ಟೆಗಳಿಗೆ ಗುಲಾಬಿ ಸ್ಪರ್ಶ ನೀಡಲಾಗಿದೆ. ಜೊತೆಗೆ 'ನಿಮ್ಮ ಮತ ನಾಡಿಗೆ ಹಿತ', 'ಮತದಾನ ನಮ್ಮ ಕರ್ತವ್ಯ' ಎಂಬಿತ್ಯಾದಿ ಜಾಗೃತಿ ಸಂದೇಶಗಳ ಜೊತೆಗೆ ಮಹಿಳೆ ಅಬಲೆಯಲ್ಲ, ಸಬಲೆ, ಭೂಮಿಯಂತೆ ಎಲ್ಲರನ್ನು ಸಲುಹುವ ತಾಯಿ ಹೃದಯಿ ಎಂಬ ಭಾವನೆಗಳು ವ್ಯಕ್ತವಾಗಿವೆ. ಮತದಾನದ ದಿನದಂದು ಈ ಮತಗಟ್ಟೆಗಳಲ್ಲಿ ಪ್ರೀಸೈಡಿಂಗ್ ಆಫೀಸರ್ (ಪಿಆರ್‌ಓ), ಅಸಿಸ್ಟೆಂಟ್ ಪ್ರೆಸೈಡಿಂಗ್ ಆಫೀಸರ್ (ಎಪಿಆರ್‌ಓ), ಪೋಲಿಂಗ್ ಆಫೀಸರ್ (ಪಿಓ) ಸೇರಿದಂತೆ ಎಲ್ಲಾ ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಮಹಿಳೆಯರೇ ಆಗಿರುತ್ತಾರೆ.


9 ಬುಡಕಟ್ಟು ಮತಗಟ್ಟೆಗಳು: ಬುಡಕಟ್ಟು ಸಮುದಾಯದವರ ಸಂಖ್ಯೆ ಹೆಚ್ಚಾಗಿರುವ ಪಿರಿಯಾಪಟ್ಟಣದ ರಾಣಿಗೇಟ್ (ಮತಗಟ್ಟೆ ಸಂಖ್ಯೆ–121), ಕೆ.ಆರ್.ನಗರದ ಸತಿಗ್ರಾಮ(ಮತಗಟ್ಟೆ ಸಂಖ್ಯೆ–229), ಹುಣಸೂರಿನ ನಾಗಾಪುರ ಆಶ್ರಮ ಶಾಲೆ(ಮತಗಟ್ಟೆ ಸಂಖ್ಯೆ–260), ಶೆಟ್ಟಿಹಳ್ಳಿ(ಮತಗಟ್ಟೆ ಸಂಖ್ಯೆ–251) ಮತ್ತು ನಲ್ಲೂರುಪಾಲ(ಮತಗಟ್ಟೆ ಸಂಖ್ಯೆ–210), ಹೆಚ್.ಡಿ.ಕೋಟೆಯ ಬೂದನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಮತಗಟ್ಟೆ ಸಂಖ್ಯೆ–56), ಬೀಮನಹಳ್ಳಿ ಆಶ್ರಮ ಶಾಲೆ(ಮತಗಟ್ಟೆ ಸಂಖ್ಯೆ–03), ಪೆಂಜಳ್ಳಿ ಕಾಲೋನಿ (ಮತಗಟ್ಟೆ ಸಂಖ್ಯೆ–136)ಹಾಗೂ ನಂಜನಗೂಡಿನ ತಾಂಡವಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಮತಗಟ್ಟೆ ಸಂಖ್ಯೆ–185)ಯಲ್ಲಿ ಆತ್ಯಾಕರ್ಷಕವಾಗಿ ಬುಡಕಟ್ಟು ಮತಗಟ್ಟೆಗಳು ನಿರ್ಮಾಣವಾಗಿವೆ. ಕಾಡಂಚಿನಲ್ಲಿರುವ ಹಾಡಿಗಳು, ಅಲ್ಲಿನ ಜನರ ಜೀವನ ಶೈಲಿಗೆ ಅನುಗುಣವಾಗಿ ರೂಪುಗೊಂಡಿರುವ ಬುಡಕಟ್ಟು ಮತಗಳಲ್ಲಿ ಕಾರ್ಯನಿರ್ವಹಿಸುವ ಚುನಾವಣಾ ಅಧಿಕಾರಿ–ಸಿಬ್ಬಂದಿಗಳು ಬುಡಕಟ್ಟು ಮತದಾರರಂತೆಯೇ ವಸ್ತ್ರ ವಿನ್ಯಾಸದೊಂದಿಗೆ ಮತಗಟ್ಟೆಗೆ ಸ್ವಾಗತಿಸಲಿದ್ದಾರೆ.

ಸಾಮಾನ್ಯ ಮತಗಟ್ಟೆಗಳೂ ವರ್ಣಮಯ: ಸಖಿ ಹಾಗೂ ಬುಡಕಟ್ಟು ಮತಗಟ್ಟೆಗಳಂತೆ ಸಾಮಾನ್ಯ ಮತಗಟ್ಟೆಗಳನ್ನು ಆಕರ್ಷಕವಾಗಿ ಕಾಣುವಂತೆ ಮಾಡಲಾಗಿದೆ. ರಾಷ್ಟ್ರ ಲಾಂಛನಗಳು, ಸೈನಿಕರು ಸೇರಿದಂತೆ ಮತದಾನ ಜಾಗೃತಿಗೆ ಅನುಗುಣವಾಗಿ ಗೋಡೆ ಚಿತ್ರಗಳ ಮೂಲಕ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ವಿಶೇಷಚೇತನ ಮತದಾರರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಕಲ್ಪಿಸಲಾಗಿದೆ.

ನೂರಾರು ಕಲಾವಿದರು ಭಾಗಿ: ಮೈಸೂರು ನಗರ ಸೇರಿದಂತೆ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ಚಿತ್ರಕಲಾ ಶಾಲಾ ಶಿಕ್ಷಕರು ಸೇರಿದಂತೆ ನೂರಾರು ಕಲಾವಿದರು ತಮ್ಮ ಕೈ ಚಳಕ ತೋರಿದ್ದಾರೆ. ಪಿಂಕ್ ಬೂತ್‌ಗಳಿಗೆ ಮೊದಲು ಗುಲಾಬಿ ಪೇಂಟಿಂಗ್ ಮಾಡಿದ ಬಳಿಕ ಅದರ ಮೇಲೆ ಆಕರ್ಷಕ ಚಿತ್ರಗಳು ಹಾಗೂ ಸಂದೇಶಗಳನ್ನು ಚಿತ್ರಿಸಿದ್ದಾರೆ. ಹಾಗೆಯೇ ಬುಡಕಟ್ಟು ಮತಗಟ್ಟೆಗಳಲ್ಲಿ ನುರಿತ ಕಲಾವಿದರಿಂದ ವಿನ್ಯಾಸಗೊಳಿಸಲಾಗಿದೆ.

ಎಲ್ಲರಿಗೂ ಅವಕಾಶ: ಸಖಿ ಮತಗಟ್ಟೆಗಳಲ್ಲಿ ಮಹಿಳೆಯರು ಮಾತ್ರ ಮತದಾನ ಮಾಡಬೇಕು ಎಂಬುದಿಲ್ಲ. ಬೂತ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮತದಾರರು ತಮ್ಮ ಹಕ್ಕು ಚಲಾಯಿಸಬಹುದು. ಹಾಗೆಯೇ ಪ್ರತೀ ತಾಲೂಕಿಗೊಂದು ಅಂಗವಿಕಲರ ಮತಗಟ್ಟೆ ಎಂದು ಗುರ್ತಿಸಿದ್ದರೂ ಎಲ್ಲರೂ ಮತದಾನ ಮಾಡಲು ಅವಕಾಶವಿರಲಿದೆ. ಮತದಾರರು ಸೆಳೆಯುವ ಮೂಲಕ ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿವಿಧ ಪರಿಕಲ್ಪನೆಗಳನ್ನು ಮತಗಟ್ಟೆಗಳಲ್ಲಿ ವಿಶೇಷವಾಗಿ ಕಾಣುವಂತೆ ಮಾಡಲಾಗಿದೆ.







ರಾಜ್ಯ ಒಕ್ಕಲಿಗರ ಸಂಘದ ಮಾಜಿ ಕಾರ್ಯದರ್ಶಿ ಹಾಗೂ ಮಾಜಿ ಸೆನೆಟ್ ಸದಸ್ಯರೂ ಆದ ಡಾ.ಕೆ.ಮಹದೇವ್ ಅವರ ನಿವಾಸದಲ್ಲಿ ಶನಿವಾರ ಸಭೆ ಸೇರಿದ ಮಾಜಿ ಉಪ ಕುಲಪತಿ ಶ್ರೀಮತಿ ಪದ್ಮಾ ಶೇಖರ್, ಪ್ರೊ.ಶಿವರಾಜ್, ಹೆಚ್.ಎಸ್. ನಂದೀಶ್ ಪ್ರೀತಮ್, ನಿವೃತ್ತ ಪ್ರಾಂಶುಪಾಲರು, ಪ್ರಾಧ್ಯಾಪಕರು ಹಾಗೂ ಅಧ್ಯಾಪಕೇತರ ಸಿಬ್ಬಂದಿ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡರನ್ನು ಬೆಂಬಲಿಸುವ ನಿರ್ಧಾರ ಕೈಗೊಂಡಿದ್ದಾರೆ. ಈ ವೇಳೆ ಹರೀಶ್‌ಗೌಡರನ್ನು ಅಭಿನಂದಿಸಲಾಯಿತು.

ಬಿ.ಎಲ್.ಸಂತೋಷ್ ಹೆಸರಿನಲ್ಲಿ ಸುಳ್ಳು ವರದಿ ವೈರಲ್: ಮೈಸೂರಲ್ಲಿ ಯುವಕನ ಬಂಧನ

ಮೈಸೂರು, ಮೇ 6(ಎಸ್‌ಪಿಎನ್)–ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ನೀಡಿದ್ದಾರೆ ಎನ್ನಲಾದ ಪತ್ರಿಕಾ ಹೇಳಿಕೆ ಮಾದರಿಯಲ್ಲಿ ಸುಳ್ಳು ಸುದ್ದಿ ವೈರಲ್ ಮಾಡಿದ್ದ ಮೈಸೂರಿನ ಯುವಕನೋರ್ವನನ್ನು ಲಕ್ಷ್ಮಿಪುರಂ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರ ನಾವು ಹಿಂದುತ್ವದಲ್ಲಿ ಮುಂದುವರೆಯುತ್ತೇವೆ, ಲಿಂಗಾಯತರ ಅಗತ್ಯವಿಲ್ಲ' ಎಂಬ ಶೀರ್ಷಿಕೆಯಡಿ ಪತ್ರಿಕಾ ವರದಿ ಮಾದರಿಯಲ್ಲಿ ಸುಳ್ಳು ಸುದ್ದಿ ಸೃಷ್ಟಿಸಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿದ್ದ.

ಈತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಲಕ್ಷ್ಮೀಪುರಂ ಠಾಣೆಯಲ್ಲಿ ಬಿಜೆಪಿ ಮೈಸೂರು ಘಟಕದ ಬಿ.ನಿರಂಜನ ಮೂರ್ತಿ ದೂರು ನೀಡಿದ್ದರು. ಈ ದೂರಿನ ಆಧಾರದಲ್ಲಿ ಲಕ್ಷ್ಮೀಪುರಂ ಪೊಲೀಸರು ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಿಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ ವಾರ್ಡ್ ನಂಬರ್ 59ರ ವಿವೇಕಾನಂದನಗರ, ನಿಮಿಷಾಂಬ ಲೇಔಟ್‌ನಲ್ಲಿ ಪಾದಯಾತ್ರೆ ಮೂಲಕ ಮತ ಯಾಚಿಸಿದರು. ಈ ವೇಳೆ ಮಾಜಿ ಮೇಯರ್ ಸುನಂದ ಪಾಲನೇತ್ರ ವಾರ್ಡ್ ಅಧ್ಯಕ್ಷ ಸಂಪತ್, ಮೈಸೂರು ಮಹಾನಗರ ಪಾಲಿಕೆ ಸದಸ್ಯ ಜಗದೀಶ್, ಮನೋಜ್, ರಾಜೇಶ್, ಪುಟ್ಟಿ ಜಗದೀಶ್, ಮಂಜುನಾಥ್, ಬೂತ್ ಅಧ್ಯಕ್ಷರಾದ ರಕ್ಷಿತ್, ರೂಪ ಜನಾರ್ದನ್, ಸಿಂಗ್ರಿ ಗೌಡ, ಮನು, ಶ್ರೇಯಸ್ ಇನ್ನಿತರರಿದ್ದರು.

ಮಕ್ಕಳ ಸ್ಮರಣ ಶಕ್ತಿ ಯೋಗ ಶಿಬಿರ

ಮೈಸೂರು, ಮೇ 6–ಮಕ್ಕಳ ಸ್ಮರಣ ಶಕ್ತಿ ಯೋಗ ಶಿಬಿರದ ಬಗ್ಗೆ ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ 'ಋಷಿ ಸಂಸ್ಕೃತಿ ವಿದ್ಯಾಕೇಂದ್ರ'ದಲ್ಲಿ ಇಂದು ಬೆಳಗ್ಗೆ 10.30ಕ್ಕೆ ಉಚಿತ ಪರಿಚಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. 8.5.2023 ರಿಂದ 10 ದಿನಗಳ 'ಮಕ್ಕಳ ಸ್ಮರಣಶಕ್ತಿ ಯೋಗ ತರಗತಿಗಳು' ಪ್ರಾರಂಭವಾಗಲಿದೆ. ಮಾಹಿತಿಗಾಗಿ 9448458050, 86187 62110 ಸಂಪರ್ಕಿಸಬೇಕಾಗಿ ಪ್ರಕಟಣೆ ಕೋರಿದೆ.

ಕಾಂಗ್ರೆಸ್ ಬೆಂಬಲಿಸುವಂತೆ ಪ್ರೊ.ಕೆ.ಎಸ್.ಭಗವಾನ್ ಮನವಿ



ಮೈಸೂರು, ಮೇ 6(ಎಂಟಿವೈ)– ರಾಜ್ಯದಲ್ಲಿ ನಿರ್ಮಾಣವಾಗಿರುವ ತುರ್ತು ಪರಿಸ್ಥಿತಿ ವಾತಾವರಣ ತೊಡೆದು ಹಾಕಲು ಮೇ 10 ರಂದು ನಡೆಯಲಿರುವ ಚುನಾವಣೆಯಲ್ಲಿ ಮತದಾರರು ಸಂವಿಧಾನ ಆಶಯದ ಪರ ಇರುವ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಬೇಕು ಎಂದು ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಎಪ್ಪತ್ತು ವರ್ಷದ ಆಡಳಿತಾವಧಿಯಲ್ಲಿ ದೇಶದಲ್ಲಿ ಉತ್ತಮ ಅಭಿವೃದ್ಧಿ ಕೆಲಸಗಳಾಗಿವೆ. ಆದರೆ, ಜನರನ್ನು ಭಾವನಾತ್ಮಕವಾಗಿ ಕೆರಳಿಸುವ ಕಾರ್ಯದಲ್ಲಿ ತೊಡಗಿರುವ ಬಿಜೆಪಿ ಸರ್ಕಾರ ಅಭಿವೃದ್ಧಿ ಕಾರ್ಯಕ್ಕೆ ತಿಲಾಂಜಲಿ ನೀಡಿ, ಭ್ರಷ್ಟಾಚಾರ ನಡೆಸುತ್ತಿದೆ. ಕೋಮುವಾದಕ್ಕೆ ನೀಡುತ್ತಿರುವ ಆದ್ಯತೆ ಜನರ ಹಿತಕಾಯಲು ನೀಡುತ್ತಿಲ್ಲ. ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಬಿಜೆಪಿ ನಡೆದುಕೊಳ್ಳುತ್ತಿದೆ. ಇದರಿಂದ ರಾಜ್ಯದಲ್ಲಿ ತುರ್ತು ಪರಿಸ್ಥಿತಿಯ ವಾತಾವರಣ ಸೃಷ್ಟಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮತೀಯ ಶಕ್ತಿಗಳನ್ನು ಧಿಕ್ಕರಿಸಿ, ಸಮಾಜದ ಹಿತ ಕಾಯುವ ಸರ್ಕಾರ ರಚನೆಗೆ ಬೆಂಬಲ ನೀಡುವ ಅವಕಾಶ ಜನರ ಮುಂದೆ ಇದೆ. ಈ ಚುನಾವಣೆಯಲ್ಲಿ ಜನರು ಬಿಜೆಪಿಗೆ ತಕ್ಕ ಪಾಠ ಕಲಿಸಿ, ಸಾಮಾಜಿಕ ನ್ಯಾಯಪರ ಇರುವ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು. ಮಿತಿ ಮೀರಿದ ಭ್ರಷ್ಟಾಚಾರದಲ್ಲಿ ತೊಡಗಿರುವ ಕೋಮುವಾದಿ ಸರ್ಕಾರವನ್ನು ಕಿತ್ತೊಗೆಯಬೇಕು. ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ನಡೆಸಿದ ಭ್ರಷ್ಟಾಚಾರ ಹೇಗಿತ್ತು ಎಂದು ರಾಜ್ಯ ಮಾತ್ರವಲ್ಲದೆ, ರಾಷ್ಟ್ರಮಟ್ಟದಲ್ಲೂ ಜನರಿಗೆ ಅರ್ಥವಾಗಿದೆ ಮನೆಯಲ್ಲಿಯೇ 8 ಕೋಟಿ ರೂ. ಭ್ರಷ್ಟಾಚಾರದ ಹಣ ಲೋಕಾಯುಕ್ತದವರಿಗೆ ಸಿಕ್ಕಿದೆ. ಇಂತಹ ಭ್ರಷ್ಟ ಬಿಜೆಪಿ, ಕಮಿಷನ್ ಪಡೆಯುವ ಸರ್ಕಾರವನ್ನು ಮುಂದುವರೆಯಲು ಬಿಡಬಾರದು. ಮತದಾರರು ಇದರ ಬಗ್ಗೆ ಜಾಗೃತಿಗೊಂಡು ಕಾಂಗ್ರೆಸ್ ಪಕ್ಷಕ್ಕೆ ಬಹುಮತ ನೀಡಬೇಕು ಎಂದು ಮನವಿ ಮಾಡಿದರು.


ಬಿಜೆಪಿ ಅಧಿಕಾರಕ್ಕೆ ಬಂದರೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನವನ್ನು ಬದಲಿಸುತ್ತೇವೆ. ಶೂದ್ರ ವಿರೋಧಿ ಮನುಸ್ಮೃತಿ ಜಾರಿಗೊಳಿಸುತ್ತೇವೆ ಎಂದು ನಿರ್ಭಯವಾಗಿ ಹೇಳುವ ಇವರ ಬಗ್ಗೆ ಜನರು ಎಚ್ಚರಿಕೆಯಿಂದ ಮತದಾನ ಮಾಡಬೇಕು ಎಂದರು.

ಪ್ರೊ.ಶಬೀರ್ ಮುಸ್ತಾಫ ಮಾತನಾಡಿ, ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು, ಶಿಕ್ಷಣ ತಜ್ಞರು ರಚಿಸಿಲ್ಲ. ಶಿಕ್ಷಣದ ಮೌಲ್ಯ ಕುಗ್ಗಿಸಲಾಗುತ್ತಿದೆ. ಇದರಿಂದ ಮಕ್ಕಳ ಭವಿಷ್ಯಕ್ಕೆ ಧಕ್ಕೆಯಾಗುತ್ತದೆ. ಬಿಜೆಪಿಯ ಪ್ರಣಾಳಿಕೆಯಲ್ಲಿ ಎನ್‌ಆರ್‌ಸಿ ಎಂಬ ಯಾರಿಗೂ ಬೇಡವಾದ ಪಾಲಿಸಿಯನ್ನು ನಮೂದಿಸಿದ್ದಾರೆ. ಕರ್ನಾಟಕದಲ್ಲಿ ಅನಧಿಕೃತ ವಲಸಿಗರಿಲ್ಲ. ಹೀಗಿರುವಾಗ ಎನ್‌ಆರ್‌ಸಿ ರಾಜ್ಯಕ್ಕೆ ಏಕೆ ಬೇಕು? ಕಳೆದ ನಾಲ್ಕು ವರ್ಷ ಬಿಜೆಪಿ ಎಂಥ ಆಡಳಿತ ನೀಡಿದೆ ಎಂದು ಜನರು ಅನುಭವಿಸಿದ್ದಾರೆ. ಆದ್ದರಿಂದ ಬಿಜೆಪಿಯನ್ನು ಜನರು ಮತ್ತೆ ಅಧಿಕಾರಕ್ಕೆ ತರಬಾರದು ಎಂದು ಹೇಳಿದರು.

ಬಿಜೆಪಿಯಿಂದ ಸಮಾಜದ ಸ್ವಾಸ್ಥ್ಯ ಹಾಳು: ಪ್ರೊ.ಟಿ.ಎಂ ಮಹೇಶ್ ಮಾತನಾಡಿ, ಬಿಜೆಪಿ ಸರ್ಕಾರ ಸಂವಿಧಾನ ಬದಲಿಸಲು ಮುಂದಾದರೆ ಬುದ್ಧ ಮತ್ತು ಬಸವಣ್ಣ ಅವರನ್ನು ಬದಲಿಸಿದಂತಾಗುತ್ತದೆ ಸಂವಿಧಾನ ಬದಲಾವಣೆಯಾದರೆ, ಮನುಸ್ಮೃತಿ ಜಾರಿಯಾಗಲಿದೆ ಬಿಜೆಪಿ ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಹುನ್ನಾರ ಮಾಡುತ್ತಿದೆ. ಬಿಜೆಪಿಯ ಡಬಲ್ ಇಂಜಿನ್‌ಗಳನ್ನು ಗುಜರಿಗೆ ಹಾಕಬೇಕು. ಬಹು ಜನರ ಪಕ್ಷವಾದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಬೇಕು ಎಂದು ಹೇಳಿದರು.

ಸಂಕಷ್ಟ ಬಂದಾಗ ರಾಜ್ಯಕ್ಕೆ ಮೋದಿ ಬರಲಿಲ್ಲ: ಪ್ರೊ.ಮಹೇಶ್ ಚಂದ್ರಗುರು ಮಾತನಾಡಿ, ಸಾಮಾಜಿಕ ನ್ಯಾಯ ವಿತರಣೆ ಸಂವಿಧಾನದ ಆತ್ಮ ಇದನ್ನು ಬಿಟ್ಟು ಯಾವುದೇ ಯೋಜನೆ ತಂದರೂ, ಅದು ಸರ್ವಜನರ ವಿರೋಧಿಯಾಗುತ್ತದೆ. ಭಾರತೀಯ ಸಂವಿಧಾನ ಯಾವುದೇ ಒಂದು ಧರ್ಮಕ್ಕೆ ಸೀಮಿತವಾಗಿಲ್ಲ. ಅದು ಎಲ್ಲ ವರ್ಗವನ್ನು ಒಳಗೊಂಡ ಸಂವಿಧಾನ ಕಾಂಗ್ರೆಸ್ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ. ಪ್ರಧಾನಿ ಮೋದಿ ಸಾಮಾಜಿಕ ನ್ಯಾಯ ವಿರೋಧಿ. ರಾಜ್ಯಕ್ಕೆ ಪ್ರವಾಹ, ಕೋವಿಡ್ ಬಂದಾಗ ಮೋದಿ ಒಂದು ದಿನವೂ ರಾಜ್ಯಕ್ಕೆ ಬರಲಿಲ್ಲ. ಅವರಿಗೆ ಬಡವರ ಬಗ್ಗೆ ಕಾಳಜಿ ಇಲ್ಲ. ಭಾರತದಲ್ಲಿ ಅಂಬಾನಿ, ಅದಾನಿ ಹಾಗೂ ಮೋದಿ ಪ್ರಭುತ್ವ ಇದ್ದಂತೆ ಕಾಣುತ್ತಿದೆ. ಪ್ರಜಾಪ್ರಭುತ್ವವೇ ಇಲ್ಲದಂತಾಗಿದೆ. ಕಾಂಗ್ರೆಸ್ ಬಡಜನರನ್ನು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಸಾಕಷ್ಟು ಯೋಜನೆ ಜಾರಿ ಮಾಡಿದೆ ಆದರೆ, ಮೋದಿ ಅವರು ಶ್ರೀಮಂತರ ಪರ ಆಡಳಿತ ನೀಡುತ್ತಾ ಪ್ರಜಾಪ್ರಭುತ್ವ ಕಗ್ಗೊಲೆ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮತದಾನ ಹಬ್ಬದಲ್ಲಿ ಪಾಲ್ಗೊಳ್ಳೋಣ; ಸಂವಿಧಾನ ಆಶಯ ಬೆಳಗೋಣ...

–ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ
ಶ್ರೀ ಸುತ್ತೂರು ಕ್ಷೇತ್ರ

"ಕರ್ನಾಟಕದ ವಿಧಾನಸಭೆಗೆ ನಾವು ಬಯಸಿದ ವ್ಯಕ್ತಿಗಳನ್ನು ನಮ್ಮ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡುವ ಸುವರ್ಣಾವಕಾಶ ದೇಶದ ಸತ್ಪ್ರಜೆಗಳಾದ ನಮಗೆ ಮತ್ತೆ ಒದಗಿಬಂದಿದೆ. ಯಾವುದೇ ಕಾರಣಕ್ಕೂ ಹಣ, ಮದ್ಯ ಮತ್ತು ಇನ್ನಿತರೆ ಆಮಿಷಗಳಿಗೆ ಒಳಗಾಗದೇ ಎಲ್ಲರೂ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಸಂವಿಧಾನ ನೀಡಿರುವ ಅಮೂಲ್ಯ ಮೂಲಭೂತ ಹಕ್ಕನ್ನು ನಿರ್ಭೀತಿಯಿಂದ ಚಲಾಯಿಸಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದ ಹಾಗೆ, "ನನ್ನ ಜನರಿಗೆ ನಾನು ಆಯುಧವನ್ನು ನೀಡಲಿಲ್ಲ. ಅದರ ಬದಲು ಮತದಾನದ ಹಕ್ಕು ಕೊಟ್ಟಿದ್ದೇನೆ" ಎಂಬ ಮಾತಿಗೆ ಮತ್ತಷ್ಟು ಮೌಲ್ಯ ತರಬೇಕು. ಎಲ್ಲರೂ ತಪ್ಪದೇ ಮತದಾನ ಮಾಡಬೇಕು.

ಪ್ರಾಚೀನ ಕಾಲದಲ್ಲಿ ರಾಜರು ನಿರಂಕುಶಾಧಿಕಾರದ ಮೂಲಕ ಆಡಳಿತ ನಡೆಸುತ್ತಿದ್ದರು. ರಾಜಪ್ರಭುತ್ವದಲ್ಲಿ ಜನರ ಅಭಿಪ್ರಾಯ, ನಿರ್ಧಾರ, ಆಶೋತ್ತರಗಳಿಗೆ ಬೆಲೆ ಇರುತ್ತಿರಲಿಲ್ಲ. ನಾಗರಿಕತೆ ಬೆಳೆದ ಮೇಲೆ ಈ ಪದ್ಧತಿಗೆ ತಿಲಾಂಜಲಿ ಹಾಡಿ ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಆಡಳಿತ ಜಾರಿಗೆ ಬಂದಿದೆ ಅಮೆರಿಕದ ಮಾಜಿ ಅಧ್ಯಕ್ಷ ಅಬ್ರಹಾಂ ಲಿಂಕನ್ ಹೇಳಿದಂತೆ, "ಪ್ರಜಾಪ್ರಭುತ್ವ ಎಂದರೆ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳೇ ಆಡಳಿತ ನಡೆಸುವ ಒಂದು ವಿಶಿಷ್ಟ ವ್ಯವಸ್ಥೆ". ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನವೇ ಸೌರ್ವಭೌಮ. ಪ್ರಜಾಪ್ರಭುತ್ವ ವ್ಯವಸ್ಥೆ ಹೇಗೆ ಸಾಗಬೇಕೆಂದು ಸಂವಿಧಾನವು ಸ್ಪಷ್ಟವಾಗಿ ಹೇಳಿದೆ. ಹಲವು ಶತಮಾನಗಳ ಕಾಲ ಬ್ರಿಟಿಷರ ಆಡಳಿತದಲ್ಲಿದ್ದ ನಮ್ಮ ದೇಶಕ್ಕೆ 15–08–1947ರಂದು ಸ್ವಾತಂತ್ರ್ಯ ಲಭಿಸಿತು. 26–1–1950ರಂದು ಸಂವಿಧಾನ ಜಾರಿಯೊಂದಿಗೆ ಗಣರಾಜ್ಯದ ಉದಯವೂ ಆಯಿತು. ನಮ್ಮ ದೇಶ ಸಂಸದೀಯ ಒಕ್ಕೂಟ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಭಾರತದ ಸಂವಿಧಾನದ ಪ್ರಕಾರ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಪ್ರಜಾಪ್ರಭುತ್ವದ ಬಹುಮುಖ್ಯ ಅಂಗಗಳು. ಮತದಾನದ ಮೂಲಕ ಜನರು ಶಾಸಕಾಂಗದ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ.

ಮತದಾನ ಎಂದರೆ ಜನರು ತಮ್ಮ ಮತವನ್ನು ನೀಡುವ ಮೂಲಕ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಬಹುಮುಖ್ಯ ಪ್ರಕ್ರಿಯೆ. 1989ರವರೆಗೂ ನಮ್ಮ ದೇಶದಲ್ಲಿ ಮತದಾರನ ವಯಸ್ಸು ಕನಿಷ್ಠ 21 ವರ್ಷ ಇತ್ತು. ಆ ನಂತರ ಮತದಾನದ ವಯಸ್ಸನ್ನು 18ಕ್ಕೆ ಇಳಿಸಲಾಯಿತು. ಮತದಾರರ ಮತಕ್ಕೆ ಸರಿಯಾದ ಮೌಲ್ಯ ಸಿಗಬೇಕಾದರೆ ಈ ವ್ಯವಸ್ಥೆ ಸರಿಯಾದ ಹಾದಿಯಲ್ಲಿ ಸಾಗಬೇಕು.

1952ರಲ್ಲಿ ಕರ್ನಾಟಕ ವಿಧಾನಸಭೆಗೆ (ಆಗಿನ ಮೈಸೂರು ವಿಧಾನಸಭೆ) ಮೊದಲ ಬಾರಿ ಚುನಾವಣೆ ನಡೆಯಿತು. 99 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಶೇಕಡ 50.38ರಷ್ಟು ಜನರು ಮತ ಚಲಾಯಿಸಿದ್ದರು. ಆಗ ಮತದಾನ ಕುರಿತು ಜಾಗೃತಿ, ಆಸಕ್ತಿ ಅಷ್ಟಾಗಿ ಇರಲಿಲ್ಲ. 1952ರಿಂದ 2018ರವರೆಗೆ ಕರ್ನಾಟಕ ವಿಧಾನಸಭೆ ಒಟ್ಟಾರೆ 15 ಚುನಾವಣೆಗಳನ್ನು ಕಂಡಿದ್ದು, ಪ್ರತಿ ಚುನಾವಣೆಯಲ್ಲಿಯೂ ಮತದಾನದ ಪ್ರಮಾಣ ಹೆಚ್ಚಾಗುತ್ತಾ ಬಂದಿದೆ. 2018ರ ವಿಧಾನಸಭೆ ಚುನಾವಣೆಯಲ್ಲಿ 72.50ರಷ್ಟು ಮಂದಿ ಮತದಾನ ಮಾಡಿದ್ದರು. ಮುಂಬರುವ ಚುನಾವಣೆಗಳಲ್ಲಿ ಮತದಾನ ಪ್ರಮಾಣ ಹೆಚ್ಚಾಗಬೇಕು ಎಂಬ ಆಶಯ ಇದೆ, ಅಗತ್ಯವೂ ಇದೆ.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಚುನಾವಣೆ ಎಂಬ ಗಟ್ಟಿಯಾದ ಬುನಾದಿಯ ಮೇಲೆ ನಿರ್ಮಿಸಲಾಗಿದೆ. ಭಾರತದ ಸಂವಿಧಾನದಡಿಯಲ್ಲಿ ಎಲ್ಲ ಪ್ರಜೆಗಳಿಗೂ ಜಾತಿ, ಮತ, ಧರ್ಮ, ಲಿಂಗ, ಶಿಕ್ಷಣದ ಭೇದವಿಲ್ಲದೆ ಮತದಾನ ಮಾಡುವ ಮೂಲಭೂತ ಹಕ್ಕನ್ನು ನೀಡಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಮೂಲಕ ಮಾತ್ರ ಬದಲಾವಣೆ ಸಾಧ್ಯ. ಮತದಾನ ಮಾಡುವುದು ಪ್ರತಿ ಪ್ರಜೆಯ ಮೂಲಭೂತ ಕರ್ತವ್ಯ. ಇದು ಜನರಿಗೆ ಸಂವಿಧಾನ ನೀಡಿರುವ ಒಂದು ಅಪೂರ್ವ ಅಧಿಕಾರ. ಐದು ವರ್ಷಕ್ಕೊಮ್ಮೆ ಸಿಗುವ ಈ ಸುವರ್ಣಾವಕಾಶದಲ್ಲಿ ಮತದಾರರು ತಮ್ಮ ಮತಾಧಿಕಾರದ ಮೂಲಕ ಅವರಿಗೆ ಬೇಕಾದ ಪಕ್ಷವನ್ನು ಅಧಿಕಾರಕ್ಕೆ ತರಬಹುದು. "ಬಹಳಷ್ಟು ಜನ ನಾವೊಬ್ಬರು ಒಂದು ಮತ ಹಾಕದಿದ್ದರೆ ಏನೂ ಆಗುವುದಿಲ್ಲ" ಎಂದುಕೊಂಡಿರುತ್ತಾರೆ. ಚುನಾವಣೆಯಲ್ಲಿ ಒಂದೊಂದು ಮತವೂ ಅತ್ಯಮೂಲ್ಯ. ಗೆಲುವು ಎಂಬುದನ್ನು ಒಂದೇ ಮತ ನಿರ್ಧರಿಸಬಹುದು ಅಲ್ಲವೇ? ಈ ನಿಟ್ಟಿನಲ್ಲಿ ಮತದಾರರೆಲ್ಲರೂ ಮತದಾನ ಬದಲಾವಣೆಯ ಹರಿಕಾರರಾಗಬೇಕು.



ವಿಶೇಷವಾಗಿ ನಗರ ಪ್ರದೇಶದ ಮತದಾರರಲ್ಲಿ ಈ ಧೋರಣೆ ಬದಲಾಗಬೇಕು.

ಪ್ರತಿ ಚುನಾವಣೆಯಲ್ಲಿ ಮತದಾನ ಪ್ರಮಾಣವನ್ನು ಹೆಚ್ಚಿಸಲು ಭಾರತದ ಚುನಾವಣಾ ಆಯೋಗ ವಿವಿಧ ಯೋಜನೆಗಳನ್ನು ರೂಪಿಸುತ್ತಿದೆ. ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ (ಸ್ವೀಪ್) ಯೋಜನೆಯಿಂದ ಉತ್ತಮ ಮತದಾನ, ಮತದಾನ ಹೆಚ್ಚಳ, ಯುವಕರ ಮತ ಪ್ರಮಾಣದ ಹೆಚ್ಚಳ, ಮತದಾನದ ಪ್ರಕ್ರಿಯೆಯಲ್ಲಿ ಎಲ್ಲರ ಭಾಗವಹಿಸುವಿಕೆ, ಇವಿಎಂ, ವಿವಿಪ್ಯಾಟ್‌ಗಳ ಮೇಲಿನ ನಂಬಿಕೆ ಹೆಚ್ಚಿಸುವುದು, ನಗರ ಪ್ರದೇಶದ ಜನರ ಮತದಾನ ನಿರಾಸಕ್ತಿಯನ್ನು ಹೋಗಲಾಡಿಸುವುದು, ಭಾಗವಹಿಸುವಿಕೆಯನ್ನು ಹೆಚ್ಚಿಸುವುದು, ಗುಣಮಟ್ಟ ಸುಧಾರಿಸುವುದು ಮುಂತಾದ ಯೋಜನೆಗಳನ್ನು ರೂಪಿಸಿದೆ. ಪ್ರತಿ ವರ್ಷ ಜನವರಿ 25 ಅನ್ನು "ಮತದಾರರ ದಿನ" ಎಂಬುದಾಗಿ ಆಚರಿಸಿ ಜಾಗೃತಿ ಮೂಡಿಸಲಾಗುತ್ತಿದೆ. ಚುನಾವಣಾ ವರ್ಷವಾದ್ದರಿಂದ ಈ ಬಾರಿ ತುಸು ಹೆಚ್ಚಿನ ಜಾಗೃತಿ ಮೂಡಿಸಲಾಗುತ್ತಿದೆ. ಈ ವರ್ಷದ ಘೋಷವಾಕ್ಯ "ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಂಡಿತ ಮತದಾನ ಮಾಡುತ್ತೇನೆ" ಎಂಬುದಾಗಿದೆ.

ಕರ್ನಾಟಕದ ವಿಧಾನಸಭೆಗೆ ನಾವು ಬಯಸಿದ ವ್ಯಕ್ತಿಗಳನ್ನು ನಮ್ಮ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡುವ ಸುವರ್ಣಾವಕಾಶ ದೇಶದ ಸತ್ಪ್ರಜೆಗಳಾದ ನಮಗೆ ಮತ್ತೆ ಒದಗಿಬಂದಿದೆ. ಯಾವುದೇ ಕಾರಣಕ್ಕೂ ಹಣ, ಮದ್ಯ ಮತ್ತು ಇನ್ನಿತರೆ ಆಮಿಷಗಳಿಗೆ ಒಳಗಾಗದೇ ಎಲ್ಲರೂ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಸಂವಿಧಾನ ನೀಡಿರುವ ಅಮೂಲ್ಯ ಮೂಲಭೂತ ಹಕ್ಕನ್ನು ನಿರ್ಭೀತಿಯಿಂದ ಚಲಾಯಿಸಿ, ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದ ಹಾಗೆ, "ನನ್ನ ಜನರಿಗೆ ನಾನು ಆಯುಧವನ್ನು ನೀಡಲಿಲ್ಲ. ಅದರ ಬದಲು ಮತದಾನದ ಹಕ್ಕು ಕೊಟ್ಟಿದ್ದೇನೆ" ಎಂಬ ಮಾತಿಗೆ ಮತ್ತಷ್ಟ ಮೌಲ್ಯ ತರಬೇಕು. ಎಲ್ಲರೂ ತಪ್ಪದೇ ಮತದಾನ ಮಾಡಬೇಕು. ಚುನಾವಣೆಯ ಹಬ್ಬದಲ್ಲಿ ಪಾಲ್ಗೊಂಡು ಸಂಭ್ರಮಿಸಬೇಕು. ಇಡೀ ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವವನ್ನು ಹೊಂದಿರುವುದು ಭಾರತ. ಇದನ್ನು ಸಬಲಗೊಳಿಸಲು ಎಲ್ಲರೂ ಸಂಕಲ್ಪ ತೊಡಬೇಕು.

ಎಲ್ಲರೂ ತಪ್ಪದೇ ಮತ ಚಲಾಯಿಸಿ!





1952ರ ಸಾರ್ವತ್ರಿಕ ಚುನಾವಣೆಯ ವಿಶೇಷ ಚಿತ್ರ

ಮಕ್ಕಳ ಚಿತ್ರಕಥೆ

'ಪೂರ್ವಸಿದ್ಧತೆ ಇಲ್ಲದೇ ಭಾಷಣ ಮಾಡಿದ್ದು ಅಕ್ಷಮ್ಯ ಅಪರಾಧ..!'

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199





ವಾರಭವಿಷ್ಯ

7.05.2023 ರಿಂದ 13.05.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :– ರವಿ–ಮೇಷ, ಚಂದ್ರ–ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ–ಮಿಥುನ, ಕಟಕ, ಬುಧ–ಮೇಷ, ಗುರು–ಮೇಷ, ಶುಕ್ರ–ಮಿಥುನ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆರಂಭಕ್ಕೆ ನಿಮ್ಮ ವೈಯಕ್ತಿಕ ಕಾರ್ಯ ಸಾಧನೆಗೆ ಇತರರನ್ನು ನಂಬಿದರೆ ಆಶಾಭಂಗವಾಗುವುದು ನಿಶ್ಚಿತ. ಚುನಾವಣಾ ವಿಚಾರಗಳು ನಿಮಗೆ ಅಷ್ಟೊಂದು ಅನುಕೂಲಕರವಾಗಿರದು. ನಿಮ್ಮ ಪುತ್ರ–ಪುತ್ರಿಯರಲ್ಲಿ ಒರಟುತನ ತೋರುವುದರಿಂದ ಮನೆಯಲ್ಲಿ ಶಾಂತಿ ಕೆಡುವುದು. ವಾರಾಂತ್ಯಕ್ಕೆ ನೂತನ ವಸ್ತ್ರ, ವಾಹನ ಮನೆಗೆ ಬರುವ ಯೋಗವಿದೆ. ಮನೆ ಮಂದಿಯ ಜೊತೆ ಬೇಸಿಗೆ ರಜೆಯ ಪ್ರವಾಸ ಮುದ ನೀಡಲಿದೆ. ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–6.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಶುಭ ಚಂದ್ರ ವಾರದ ಆದಿಗೆ ಧನ–ಧಾನ್ಯ ಲಾಭ. ಮಿತ್ರ ಜನರ ಸಂಪರ್ಕದಿಂದ ಹರುಷಗಳನ್ನು ನೀಡಲಿರುವರು. ದುಬಾರಿ ವಸ್ತ್ರ ಆಭರಣಗಳನ್ನು ಕೊಳ್ಳುವಿರಿ. ಗುರು ವ್ಯಯ ಭಾವ ಸ್ಥಿತನಿದ್ದಾನೆ. ನೀವೆಷ್ಟೇ ಚತುರರಾದರೂ ಅದೃಷ್ಟದ ಆಟವೇ ಫೈನಲ್. ಲೆಕ್ಕ, ಪತ್ರಗಳ ವಿಚಾರದಲ್ಲಿ ಎಲ್ಲರನ್ನೂ ನಂಬದಿರಿ. ಅಡ್ಡದಾರಿ ಜನರ ಸಹವಾಸದಿಂದ ಸಂಕಷ್ಟಕ್ಕೆ ಗುರಿಯಾಗುವ ಸಾಧ್ಯತೆ, ಸಹವಾಸಗಳು ನೆಟ್ಟಗಿರಲಿ. ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–2.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಗುರುಜನರ ಸಹಾಯ ದೊರೆಯುವುದರಿಂದ ಕ್ಲಿಷ್ಟ ಸಮಸ್ಯೆಯೊಂದು ಸುಖಾಂತ್ಯವಾಗಲಿದೆ. ವಾರದ ಆದಿಗೆ ಸುಖ–ಸಂತೋಷಗಳು ನಿಮ್ಮ ಪಾಲಿಗಿದೆ. ಕ್ಷೀರಜನ್ಯ ವಸ್ತು ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ರಾಜಕೀಯ ವ್ಯಕ್ತಿಗಳಿಗೆ ಅಗ್ನಿಪರೀಕ್ಷೆಯ ಸಮಯ. ಅನಪೇಕ್ಷಿತ ವಿರೋಧಗಳು ನಿಮ್ಮನ್ನು ಕಂಗೆಡಿಸಬಹುದು. ಮನೆ ಮಂದಿಯೊಂದಿಗೆ ಸ್ನೇಹಪರತೆಯಿಂದ ಇರಿ. ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ–8.



ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ರಾಶ್ಯಾಧಿಪತಿ ಚಂದ್ರ ವೃತ್ತಿ ಜೀವನದಲ್ಲಿ ನೂತನ ಬೆಳವಣಿಗೆಗಳಿಗೆ ಕಾರಣೀಭೂತನಾಗುತ್ತಾನೆ. ಪ್ರಮುಖ ವ್ಯಕ್ತಿಗಳ ಭೇಟಿಯಿಂದ ಗಂಭೀರ ಸಮಸ್ಯೆಗಳು ಬಗೆಹರಿಯುವುದು. ಹಣಕಾಸಿನ ವಿಚಾರದಲ್ಲಿ ಸಾಧಾರಣ ಸುಧಾರಣೆ. ಕೃಷಿಕ ವರ್ಗದವರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲ. ಅಷ್ಟಶನಿಯ ಕಾರಣ ವೈದ್ಯರ ಭೇಟಿ ಅನಿವಾರ್ಯವಾದೀತು. ರಾತ್ರಿ ಪ್ರಯಾಣಗಳು ತೊಂದರೆ ತಂದಿತು. ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–4.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಗ್ರಹಗಳ ಒಲುಮೆ ಶುಭವಾಗಿದೆ. ಅಂದುಕೊಂಡ ಕೆಲಸ ಕಾರ್ಯಗಳು ಕೈಗೂಡುವುದರಿಂದ ಸಂತೋಷ. ಆಸ್ತಿ–ಪಾಸ್ತಿಗಳನ್ನು ಹೊಂದಲು ಗುರು ಕೃಪೆಯಿದೆ. 'ಪ್ರಯತ್ನ ಪುರುಷಾಧೀನ, ಫಲ ದೈವಾಧೀನ'. ಶಿಕ್ಷಣಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಸಜ್ಜನರ ಪ್ರೇರಣೆಯಿಂದ ಪುಣ್ಯ ಕಾರ್ಯಾಚರಣೆ ಮಾಡಿ, ಜನರ ಆದರಕ್ಕೆ ಭಾಜನರಾಗುವಿರಿ. ಶ್ರೀ ಮಾರುತಿ ಸೇವೆ. ಶುಭ ಸಂಖ್ಯೆ–9.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಮೊದಲರ್ಧ ನೀಚ ಚಂದ್ರನಿಂದ ಅನಿರೀಕ್ಷಿತವಾದ ಖರ್ಚುಗಳು ಎದುರಾಗಬಹುದು. ಮನಸ್ಸು ಚಂಚಲವಾಗಿ ವರ್ತಿಸುವುದು. ಕುಟುಂಬದಲ್ಲಿ ಅಭಿಪ್ರಾಯ ಭೇದಗಳು ಉಂಟಾಗದಂತೆ ಎಚ್ಚರ ವಹಿಸಿ. ವಾರದ ಉತ್ತರಾರ್ಧಕ್ಕೆ ನಿಮ್ಮ ಕೆಲಸ ಕಾರ್ಯಗಳು ಎಂದಿನಂತೆ ನಡೆಯುವುದು. ನನೆಗುದಿಗೆ ಬಿದ್ದ ಕೆಲಸಗಳು ಸುಗಮವಾಗಲಿದೆ. ಸಮುದ್ರಯಾನ ಉಂಟಾದೀತು. ಶ್ವಾಸ ಸಂಬಂಧಿ ಕಾಯಿಲೆ ಕಾಡಬಹುದು. ಶ್ರೀ ವೆಂಕಟೇಶ್ವರ ಉಪಾಸನೆ. ಶುಭ ಸಂಖ್ಯೆ–5.




ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಶ್ರೀ ಗುರು ಕೃಪೆಯಿದೆ. ನಿಮ್ಮ ಜವಾಬ್ದಾರಿಯಿಂದ ತಲುಪಬೇಕಾದ ಗುರಿಯನ್ನು ತಲುಪುವಿರಿ. ನಿಮ್ಮ ಆರ್ಥಿಕ ಮುನ್ನಡೆಗೆ ಹಲವರ ಸಹಾಯಹಸ್ತ ದೊರಕುವುದು. ಅದನ್ನು ಉತ್ತಮ ಕಾರ್ಯಗಳಿಗೆ ಬಳಸಿಕೊಳ್ಳಿ. ರಾಹು–ಕೇತುಗಳು ಬಾಧಕರಿದ್ದು ವಿಷಾಹಾರ, ವ್ರಣ ರೋಗಗಳಿಂದ ಎಚ್ಚರವಿರಿ. ಸರ್ಕಾರಿ ನೌಕರರು ಅಡ್ಡ ದಾರಿಯ ಸಂಪಾದನೆಗೆ ಆಸೆ ಪಟ್ಟು ಸಂಕಷ್ಟಕ್ಕೆ ಗುರಿಯಾಗುವರು. ನರ ಸಂಬಂಧಿ ತೊಂದರೆ. ಶ್ರೀ ಸುಬ್ರಹ್ಮಣ್ಯ ದರ್ಶನ. ಶುಭ ಸಂಖ್ಯೆ–3.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಸಾಮಾಜಿಕ ಆಗು ಹೋಗುಗಳು ನೀವೆಣಿಸಿದಂತೆ ಸಾಗುತ್ತವೆ. ಆಕಸ್ಮಿಕ ಧನಪ್ರಾಪ್ತಿಯೂ ಆಗಬಹುದು. ಮನೆಯಲ್ಲಿ ಸರಸ–ವಿರಸಗಳು ಸಮನಾಗಿ ಸಾಗುವುದು. ಹಣ ಸಂಪಾದನೆಗೆ ಕೊರತೆ ಇರದು, ಅಪವ್ಯಯಕ್ಕೂ ಪ್ರೇರಣೆ ಆಗುವುದು. ಬೆಟ್ಟಿಂಗ್‌ನಿಂದ ದೂರವಿದ್ದರೆ ಕ್ಷೇಮ. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯಕ್ಕೆ ಕುಂದುಂಟಾಗಬಹುದು. ವಾರದ ಕಡೆಗೆ ಪಿಕ್‌ನಿಕ್ ಮೂಡ್, ಜಲಾಶಯಗಳ ಹತ್ತಿರ ಹುಡುಗಾಟ ಬೇಡ. ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ–7.




ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಮಯ ಯಾವುದನ್ನೂ ಕಾಯದು. 'ಗಾಳಿ ಬಂದಾಗ ತೂರಿಕೋ' ಎಂಬ ನಾಣ್ಣುಡಿಯಂತೆ ನಿಂತು ಹೋಗಿದ್ದ ಕೆಲಸ ಕಾರ್ಯಗಳು ಬೃಹಸ್ಪತಿಯ ಅನುಗ್ರಹದಿಂದ ಸಫಲವಾಗಲಿದೆ. ವಾರ ಮಧ್ಯೆ ಉದ್ಯೋಗಾಕಾಂಕ್ಷಿಗಳಿಗೆ ಶುಭ ವಾರ್ತೆಯೊಂದು ಬಂದು ಪುಳಕಿತರಾಗುವಿರಿ. ವಿವಾಹ ಯೋಗ್ಯರಿಗೆ ಮನ ಮೆಚ್ಚುವ ಬಾಳ ಸಂಗಾತಿ ದೊರೆಯುವ ಸಂಭವವಿದೆ. ಆಸ್ತಿ ಸಂಬಂಧ ವಿಷಯಗಳು ನಿಮ್ಮ ಪರ ಇರುವುದು. ಶ್ರೀ ಗುರುಸ್ತುತಿ. ಶುಭ ಸಂಖ್ಯೆ–1.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರ ಪೂರ್ತಿ ಹಣಕಾಸಿನ ತಾಪತ್ರಯಗಳು ಎದುರಾದರೂ ಸಮಯಕ್ಕೆ ಸರಿಯಾಗಿ ಹಣ ಒದಗುತ್ತಾ ಹೋಗುತ್ತದೆ. ವಾರ ಮಧ್ಯೆ ಮನೆಗೆ ಅತಿಥಿ–ಅಭ್ಯಾಗತರ ಆಗಮನ, ಅವರ ಆಥರಾತಿಥ್ಯಕ್ಕೆ ಹಣ ಖರ್ಚು, ಭೂಮಿ, ಸೈಟು ವ್ಯವಹಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಮಾಡಿ. ಮಾನಸಿಕ ಅಸ್ಥಿರತೆ ಕಾಡಿಸುವುದರಿಂದ ತಪ್ಪು ನಿರ್ಧಾರಗಳು ಉಂಟಾಗುತ್ತವೆ. ಇದರಿಂದ ನಿಮ್ಮ ಯೋಜನೆಗಳು ಸಫಲತೆಯನ್ನು ಕಾಣದು. ಶ್ರೀ ಮಾರುತಿ ಸೇವೆ. ಶುಭ ಸಂಖ್ಯೆ–1.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ವಾರದಲ್ಲಿ ವರಮಾನ–ವೆಚ್ಚಗಳು ಸಮನಾಗಿ ಸಾಗುವುದು. ಯಾವುದೇ ಮಹತ್ತರವಾದ ಯೋಜನೆಗಳನ್ನು ದೀರ್ಘವಾಗಿ ಪರಾಮರ್ಶಿಸಿ ಕೈಗೊಳ್ಳಿ. ಗುರು–ಶನಿ ಗ್ರಹರು ಅಶುಭವಿರುವ ಕಾರಣ ಅಹಿತಕರ ಸನ್ನಿವೇಶಗಳನ್ನು ಎದುರಿಸಬೇಕಾದೀತು. ಆಸ್ತಿ ಮಾರಾಟದಲ್ಲಿ ನಷ್ಟ ಉಂಟಾದೀತು. ಶತ್ರುಗಳು ನಿಮ್ಮ ಬೆನ್ನಿಗೇ ಇದ್ದಾರೆ ಎಂಬ ಅರಿವಿರಲಿ. ದೂರ ಪ್ರಯಾಣಗಳನ್ನು ತ್ಯಜಿಸಿ. ಆರೋಗ್ಯ ಅಷ್ಟಕ್ಕಷ್ಟೆ. ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2.




ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಶುಭ ಗುರು ನಿಮ್ಮ ಕಾರ್ಯ ಸಾಧನೆಗೆ ಪೂರಕ ಫಲವನ್ನು ನೀಡಲಿದ್ದಾನೆ. ಆದಾಯ ಚೆನ್ನಾಗಿರುತ್ತದೆ. ಈಗ ಉಳಿಸಿದ್ದು ಮುಂದಿನ ಗಳಿಕೆ ಎಂದು ತಿಳಿದುಕೊಳ್ಳಿ. ನಿಮ್ಮ ಗುಪ್ತ ಆಕಾಂಕ್ಷೆಗಳು ಈಡೇರುವುದು. ವ್ಯಯಸ್ಥಿತ ಶನಿಯಿಂದಾಗಿ ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಕೈಗೆ ಬಂದ ತುತ್ತು ಬಾಯಿಗೆ ಇಲ್ಲದಂತೆ ಆಗುವುದು. ಮಿತ್ರರೆನಿಸಿದವರೇ ನಿಮ್ಮ ವಿರುದ್ಧ ಸಂಚು ಮಾಡುವರು. ಎಳ್ಳೆಣ್ಣೆ ದೀಪ ಹಚ್ಚಿ. ಶುಭ ಸಂಖ್ಯೆ–5.

ಜೆಡಿಎಸ್‌ಗೆ ಬಹುಮತ ನೀಡಿದರೆ ಜನರ ಸಂಕಷ್ಟ ದೂರ ಮಾಡುವೆ

ಇಲ್ಲದಿದ್ದರೆ ಪಕ್ಷ ವಿಸರ್ಜನೆ: ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ



ಪಿರಿಯಾಪಟ್ಟಣ, ಮೇ 6– ಚುನಾವಣೆಯಲ್ಲಿ ನನಗೆ ಬಹುಮತದ ಸರ್ಕಾರ ನೀಡಿದರೆ 5 ವರ್ಷದೊಳಗೆ ರಾಜ್ಯದ ಜನರ ಸಂಕಷ್ಟ ದೂರ ಮಾಡುತ್ತೇನೆ. ಇಲ್ಲದಿದ್ದರೆ ನಾನು ಪಕ್ಷವನ್ನು ವಿಸರ್ಜಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ಶನಿವಾರ ನಡೆದ ಪ್ರಚಾರ ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ್ ಪರ ಮತಯಾಚಿಸಿ ಮಾತನಾಡಿದ ಅವರು, ನಾನು ಈ ಹಿಂದೆ ಪಂಚರತ್ನ ರಥಯಾತ್ರೆ ಮೂಲಕ ತಾಲೂಕಿನೆಲ್ಲೆಡೆ ಸಂಚರಿಸಿ ಜನತೆಯ ಆಶೀರ್ವಾದ ಪಡೆದಿದ್ದೇನೆ. ಅದೇ ರೀತಿ ಈಗಾಗಲೇ ದೇವೇಗೌಡರು ಸಹ ತಾಲೂಕಿಗೆ ಭೇಟಿ ನೀಡಿ ಪ್ರಚಾರ ನಡೆಸಿದ್ದಾರೆ ಎಂದರು.

ಈ ಬಾರಿ ಜನತೆ ಕ್ಷೇತ್ರದ ಅಭ್ಯರ್ಥಿ ಕೆ.ಮಹದೇವ್ ಅವರನ್ನು ಗೆಲ್ಲಿಸುತ್ತಾರೆ ಎಂಬ ವಿಶ್ವಾಸವಿದೆ. ಭ್ರಷ್ಟ ಬಿಜೆಪಿ ಸರ್ಕಾರ ಈಗಾಗಲೇ ರಾಜ್ಯದ ಜನತೆಯ ಹಣ ಲೂಟಿ ಮಾಡಿದೆ. ಅವರಿಗೆ ಹಣದ ಕೊರತೆ ಇಲ್ಲ. ಕಾಂಗ್ರೆಸ್ ಹಾಗೂ ಬಿಜೆಪಿಯ ಉತ್ತರ ಭಾರತದ ನಾಯಕರ ದಂಡೆ ರಾಜ್ಯಕ್ಕೆ ಆಗಮಿಸುತ್ತಿದೆ. ಆದರೆ ನನ್ನ ಬಳಿ ಹಣ ವಿಲ್ಲ. ನನಗೆ ರಾಜ್ಯದ ಜನತೆಯ ಪ್ರೀತಿ ಉಳಿದಿದೆ. ಎರಡು ರಾಷ್ಟ್ರೀಯ ಪಕ್ಷಗಳ ಮಧ್ಯೆ ನಮ್ಮ ಪಕ್ಷ ಉಳಿದಿದ್ದರೆ ಅದಕ್ಕೆ ನಮ್ಮ ಪ್ರಾಮಾಣಿಕತೆ ಕಾರಣ ಎಂದರು.

ಕುಮಾರಸ್ವಾಮಿ 2 ಬಾರಿ ಮುಖ್ಯಮಂತ್ರಿಯಾಗಿ ಹಣ ಮಾಡಿದ್ದಾರೆ ಎಂದು ಜನತೆ ನಂಬಿದ್ದಾರೆ. ಆದರೆ ಪಿರಿಯಾಪಟ್ಟಣದ ಅಮ್ಮನ ಆಣೆ ಮಾಡಿ ಹೇಳುತ್ತೇನೆ ನಾನು ಎಂದೂ ದುಡ್ಡಿನ ಹಿಂದೆ ಬೀಳಲಿಲ್ಲ ಬಡವರ, ರೈತರ ಪರ ಕೆಲಸ ಮಾಡಿದ್ದೇನೆ. ನಾನು ಕೆಲವೊಂದು ರೈತ ಪರ ಯೋಜನೆಗಳಿಗೆ ಸಾವಿರಾರು ಕೋಟಿ ರೂ. ವಿನಿಯೋಗಿಸಿದೆ. ಆ ಕೆಲಸ ಮಾಡದಿದ್ದರೆ 8ರಿಂದ 10 ಸಾವಿರ ಕೋಟಿ ಹಣವನ್ನು ಪ್ರತಿ ಕ್ಷೇತ್ರಕ್ಕೆ ಹಂಚುತ್ತಿದ್ದೆ ಎಂದರು.

ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಎರಡೂವರೆ ಲಕ್ಷ ಕೋಟಿ ರೂ. ಸಂಗ್ರಹಿಸಿ ಪಂಚರತ್ನ ಯೋಜನೆ ಜಾರಿಗೊಳಿಸುತ್ತೇನೆ. ಇತ್ತೀಚೆಗೆ ನನಗೆ ಚುನಾವಣೆ ಮಾಡಲು ಸಾಧ್ಯವಾಗುತ್ತಿಲ್ಲ. 2007ರಲ್ಲಿ ಪಕ್ಷದ ಜವಾಬ್ದಾರಿ ತೆಗೆದುಕೊಂಡ ಮೇಲೆ ನಾನು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದೇನೆ. ಟಿವಿ ಮಾಧ್ಯಮದಲ್ಲಿ ಪ್ರಸಾರವಾಗುವ ಚುನಾವಣಾ ಸಮೀಕ್ಷೆಯನ್ನು ನೀವು ನಂಬಬೇಡಿ. ಅದು ಹಣ ಕೊಟ್ಟ ಹಾಗೆ ಬದಲಾವಣೆಯಾಗುತ್ತದೆ. ನಾನು ಅವರಿಗೆ ಹತ್ತಾರು ಕೋಟಿ ನೀಡಿದರೆ ನನ್ನ ಪಕ್ಷವನ್ನು ಬಹುಮತಕ್ಕೆ ತರುತ್ತಾರೆ ಅಷ್ಟು ಹಣವನ್ನು ನಾನೆಲ್ಲಿಂದ ತರಲಿ ಎಂದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ಮಂಜುನಾಥ್, ಸಿ.ಎನ್.ರವಿ, ಚಂದ್ರೇಶ್, ಗೋವಿಂದೇಗೌಡ, ಚಿನ್ನಿ ರವಿ, ಆರ್.ಎಲ್. ಮಣಿ, ಐಲಾಪುರ ರಾಮು ಸೇರಿದಂತೆ ಸಾವಿರಾರು ಕಾರ್ಯಕರ್ತರು ಹಾಜರಿದ್ದರು.

> 2 ಬಾರಿ ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ ಸೋಲು ಅನುಭವಿಸಿದೆ. 2018ರ ಚುನಾವಣೆಯಲ್ಲಿ ಕ್ಷೇತ್ರದ ಜನತೆ ನನಗೆ ಆಶೀರ್ವಾದ ಮಾಡಿ ಶಾಸಕನನ್ನಾಗಿ ಮಾಡಿದ್ದೀರಿ. ದುರದೃಷ್ಟವಶಾತ್ 2 ವರ್ಷ ಕೊರೊನಾ, ಒಂದು ವರ್ಷ ಅತಿವೃಷ್ಟಿಯಿಂದಾಗಿ ಯಾವುದೇ ಅಭಿವೃದ್ಧಿ ಮಾಡಲು ಸಾಧ್ಯವಾಗದೇ ರಾಜಕೀಯ ವಿರೋಧಿಗಳ ಟೀಕೆಗೆ ಗುರಿಯಾದೆ. ಆದರೂ ನಮ್ಮ ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದರೂ, ಅಧಿಕಾರದಲ್ಲಿದ್ದ ಸರ್ಕಾರದ ಅಧಿಕಾರಿಗಳು, ಸಚಿವರ ಕಾಲು ಹಿಡಿದು ಸಾಕಷ್ಟು ಅನುದಾನ ತಂದು ತಾಲೂಕಿನ ಅಭಿವೃದ್ಧಿಗಾಗಿ ಶ್ರಮಿಸಿದೆ. ಕುಮಾರಸ್ವಾಮಿ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ಪಂಚರತ್ನ ಯೋಜನೆ ಜಾರಿಗೊಳಿಸಲು ಈ ಬಾರಿ ಜೆಡಿಎಸ್ ಅಭ್ಯರ್ಥಿಯಾದ ನನಗೆ ಆಶೀರ್ವದಿಸಬೇಕು ಎಂದು ಮನವಿ ಮಾಡಿದರು.
> –ಕೆಮಹದೇವ್, ಜೆಡಿಎಸ್ ಅಭ್ಯರ್ಥಿ

ಬೈಕ್ ಡಿಕ್ಕಿ: ಸ್ಥಳದಲ್ಲೇ ರೈತ ಸಾವು



ಸರಗೂರು, ಮೇ 6– ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ರೈತನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ತೆರಣಿಮುಂಟಿ ಗ್ರಾಮದ ಬಳಿ ಶನಿವಾರ ಸಂಜೆ ನಡೆದಿದೆ. ಗ್ರಾಮದ ನಿವಾಸಿ ನಿಂಗಪ್ಪ(60) ಸಾವನ್ನಪ್ಪಿದವರು. ಈತ ಎಂದಿನಂತೆ ತಮ್ಮ ಜಮೀನಿನಲ್ಲಿ ದನಕರುಗಳನ್ನು ಮೇಯಿಸಿಕೊಂಡು ಸಂಜೆ ಮನೆಗೆ ತೆರಳುತ್ತಿದ್ದರು. ಆದರೆ ಜಮೀನಿನ ಗೇಟನ್ನು ಹಾಕದ ಕಾರಣ ನಿಂಗಪ್ಪ ಹಿಂತಿರುಗಿ ಜಮೀನಿಗೆ ಬರುತ್ತಿದ್ದ ವೇಳೆ ಹೊಸಬೀದರಹಳ್ಳಿ ಕಡೆಯಿಂದ ವೇಗವಾಗಿ ಬಂದ ಹೀರೋ ಫ್ಯಾಷನ್ ಪ್ರೋ(ಕೆಎ.9, ಜೆಇ.4841) ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ನಿಂಗಪ್ಪ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಬೈಕ್ ಸವಾರ ಪರಾರಿಯಾಗಿದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಗೂರು ಪೊಲೀಸರು ಪರಿಶಿಲನೆ ನಡೆಸಿ ಬೈಕ್ ಅನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೇ ಶವವನ್ನು ಮರಣೋತ್ತರ ಪರೀಕ್ಷೆಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಪತ್ನಿ ಶಾರದ ನೀಡಿದ ದೂರಿನ ಮೇರೆಗೆ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಗ್ಗಲೀಪುರದಲ್ಲಿ ಮಹದೇವಪ್ಪ ಪರ ಪ್ರಚಾರ



ತಿ.ನರಸೀಪುರ, ಮೇ 6– ಲೋಕೋಪಯೋಗಿ ಸಚಿವರಾಗಿದ್ದ ವೇಳೆ ಡಾ.ಹೆಚ್.ಸಿ.ಮಹದೇವಪ್ಪ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಹೀಗಾಗಿ ಈ ಬಾರಿ ಅವರು ಜಯಗಳಿಸಲಿದ್ದಾರೆ ಎಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ತಿಳಿಸಿದರು.

ತಾಲೂಕಿನ ಕಗ್ಗಲೀಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹದೇವಪ್ಪ ಪರ ಮತಯಾಚಿಸಿ ಮಾತನಾಡಿದ ಅವರು, ಅವರ ಅಧಿಕಾರವಧಿಯಲ್ಲಿ ಆದ ಹಲವು ಅಭಿವೃದ್ಧಿ ಕಾರ್ಯಗಳ ಬಗ್ಗೆ ಕ್ಷೇತ್ರದ ಜನತೆ ಈಗಲು ಗುಣಗಾನ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಜನತೆಯ ಕಲ್ಯಾಣಕ್ಕಾಗಿ ಹತ್ತು ಹಲವು ಜನಪರ ಯೋಜನೆಗಳನ್ನು ಘೋಷಿಸಿರುವುದರಿಂದ ಈ ಬಾರಿ ಮಹದೇವಪ್ಪನವರ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಡ ಮಕ್ಕಳ ವಿದ್ಯಾರ್ಥಿ ವೇತನ ಕಡಿತ, ದಿನಬಳಕೆಯ ವಸ್ತುಗಳ ಬೆಲೆ ಏರಿಕೆ ಮಾಡಿ ಬಡಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವ ರಾಜ್ಯದ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯನ್ನು ಹೆಚ್ಚಿನ ಬಹುಮತದೊಂದಿಗೆ ಆಯ್ಕೆ ಮಾಡುವಂತೆ ಗ್ರಾಮದ ಜನತೆಗೆ ಮನವಿ ಮಾಡಿದರು. ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜಣ್ಣ ಮಾತನಾಡಿದರು. ಈ ವೇಳೆ ಬಸ್ ಮಾಲೀಕ ಕೆ.ನಾಗೇಂದ್ರ, ಗುತ್ತಿಗೆದಾರ ಮಧು ಕುಮಾರ್, ಸಂದೀಪ್, ಕಪಾಲಿ ಮಂಜು ಸೇರಿದಂತೆ ಗ್ರಾಮಸ್ಥರಿದ್ದರು.



ಭೇರ್ಯ ಗ್ರಾಮದ ವಕೀಲರಾದ ಬಿ.ಎಸ್.ಶಿವಶಂಕರ್ ಕಾಂಗ್ರೆಸ್ ತೊರೆದು ಶಾಸಕ ಸಾ.ರಾ.ಮಹೇಶ್ ಸಮ್ಮುಖದಲ್ಲಿ ಜೆಡಿಎಸ್‌ಗೆ ಸೇರ್ಪಡೆಗೊಂಡರು.

ತಿರುಮಕೂಡಲಿನಲ್ಲಿ ಸಿದ್ದರಾಮಯ್ಯ ಪರ ಮತಯಾಚನೆ



ತಿ.ನರಸೀಪುರ, ಮೇ 6– ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ತಿರುಮಕೂಡಲಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತಯಾಚಿಸಿದರು. ಹೊಸ ತಿರುಮಕೂಡಲಿನ ಮನೆ ಮನೆಗೆ ತೆರಳಿದ ಕಾರ್ಯಕರ್ತರು ಹಾಗೂ ಒಕ್ಕಲಿಗ ಮುಖಂಡರು ಸಿದ್ದರಾಮಯ್ಯ ಅವರಿಗೆ ಮತ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಎಸ್.ಕೃಷ್ಣಪ್ಪ, ಸಿದ್ದರಾಮಯ್ಯ ಪರ ಮನೆ ಮನೆಗೆ ತೆರಳಿ ಮತಯಾಚಿಸುತ್ತಿದ್ದೇವೆ. ಹೋದಲೆಲ್ಲಾ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಪ್ರಸಕ್ತ ಚುನಾವಣೆ ಬಹಳ ಮಹತ್ವಪೂರ್ಣವಾದ ಚುನಾವಣೆಯಾಗಿದ್ದು, ದೇಶದ ಭವಿಷ್ಯ ನಿರ್ಧರಿಸುವ ಚುನಾವಣೆಯಾಗಿದೆ. ಒಕ್ಕಲಿಗ ಸಮಾಜ ಸೇರಿದಂತೆ ಎಲ್ಲಾ ಜನಾಂಗದ ನಾಯಕರಾಗಿರುವ ಸಿದ್ದರಾಮಯ್ಯ ಅವರ ಕೊನೆ ಚುನಾವಣೆ ಇದಾಗಿದ್ದು, ಜನರಿಂದ ದೊರಕುತ್ತಿರುವ ಪ್ರತಿಕ್ರಿಯೆ ಗಮನಿಸಿದರೆ ಅವರು ಒಂದು ಲಕ್ಷ ಮತಗಳಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೇಶ ಮತ್ತು ರಾಜ್ಯದಲ್ಲಿ ಭ್ರಷ್ಟ ಹಾಗೂ ಕೋಮುವಾದಿ ಸರ್ಕಾರವನ್ನು ತೆಗೆಯಬೇಕೆಂದು ಜನತೆ ನಿರ್ಧರಿಸಿದ್ದು, ಜನಪರವಾದ ಕಾಂಗ್ರೆಸ್ ಸರ್ಕಾರ ತರಲು ತುದಿಗಾಲ ಮೇಲೆ ನಿಂತಿದ್ದಾರೆ ಎಂದರು.

ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥ್ ಮಾತನಾಡಿ, ಸಿದ್ದರಾಮಯ್ಯ ಹಿಂದುಳಿದ ವರ್ಗಗಳ, ಶೋಷಿತ ಸಮುದಾಯದ ಅಪರೂಪದ ನಾಯಕರು. ತಮ್ಮ ಅಧಿಕಾರಾವಧಿಯಲ್ಲಿ ಕ್ಷೇತ್ರಕ್ಕೆ ನೀಡಿರುವ ಅನುದಾನ ಸಾವಿರ ಕೋಟಿ ರೂ.. ಅಭಿವೃದ್ಧಿ ಲೆಕ್ಕವಿಲ್ಲದಷ್ಟಾಗಿದೆ. ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು ಹಾಗೂ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಬೇಕಿದೆ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರಿಗೆ ಸುಲಭ ಜಯ ಸಿಗಲಿದೆ ಎಂದರು.

ಈ ವೇಳೆ ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಚೇತು, ಪುರಸಭಾ ಸದಸ್ಯ ಸಿಸ್ಟಂ ಸಿದ್ದು, ಲಕ್ಷ್ಮಣ್, ಬಸ್ ಚೇತನ್, ಸಂದೇಶ್, ಕೃಷ್ಣ, ನಾಗರತ್ನಮ್ಮ, ಟಿ.ಪಿ.ಸೋಮಶೇಖರ್, ರಜನಿ, ವೇಣು, ಕುಮಾರ್, ನಟೇಶ್, ಟಿ.ಬಿ.ಸುರೇಶ್, ಶಂಕರ್, ದಿನೇಶ್, ಬಸ್ ಮಂಜು, ಹೂ ಮಾದೇಗೌಡ, ಕೃಷ್ಣಪ್ಪ ಮತ್ತಿತರರಿದ್ದರು.

ಮಡಿವಾಳ, ಹಿಂದುಳಿದ ಸಮುದಾಯ ಸಾರಾ ಬೆಂಬಲಿಸಿ



ಕೆ.ಆರ್.ನಗರ, ಮೇ 6– ತಾಲೂಕಿನ ಮಡಿವಾಳ ಹಾಗೂ ಎಲ್ಲಾ ಹಿಂದುಳಿದ ಸಮುದಾಯದವರು ಚುನಾವಣೆಯಲ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಸಾ.ರಾ.ಮಹೇಶ್ ಅವರನ್ನು ಬೆಂಬಲಿಸಬೇಕು ಎಂದು ಮಡಿವಾಳ ಸಮಾಜದ ಜಿಲ್ಲಾ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ಮನವಿ ಮಾಡಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವರು ಸಮುದಾಯದ ಅಧ್ಯಕ್ಷರೆಂದು ಹೇಳಿಕೊಂಡು ಚುನಾವಣೆಯಲ್ಲಿ ಮಡಿವಾಳ ಸಮುದಾಯ ಕಾಂಗ್ರೆಸ್ ಬೆಂಬಲಿಸುತ್ತದೆ ಎಂದು ನೀಡಿರುವ ಹೇಳಿಕೆ ಖಂಡಿಸಿ ಮಾತ ನಾಡಿದ ಅವರು, ಶಾಸಕ ಸಾ.ರಾ. ಮಹೇಶ್ ಮಡಿವಾಳ ಮತ್ತು ಹಿಂದುಳಿದ ಸಮುದಾಯಗಳ ಪರ ಕೆಲಸ ಮಾಡಿರುವುದರಿಂದ ಮೇ 10ರಂದು ನಡೆಯುವ ಚುನಾವಣೆಯಲ್ಲಿ ಶಾಸಕ ಸಾ.ರಾ. ಮಹೇಶ್ ಅವರನ್ನು ಬೆಂಬಲಿಸಲು ತೀರ್ಮಾನಿಸಲಾಗಿದೆ ಎಂದರು.

ಶಾಸಕ ಸಾ.ರಾ.ಮಹೇಶ್ ತಮ್ಮ 15 ವರ್ಷಗಳ ಅಧಿಕಾರವಧಿಯಲ್ಲಿ ಎಲ್ಲಾ ಸೂಕ್ಷ್ಮಾತಿಸೂಕ್ಷ್ಮ ಸಮಾಜದ ಪರ ಕೆಲಸ ಮಾಡಿದ್ದಾರೆ. ಆಶ್ರಯವಿಲ್ಲದ ನಮ್ಮಂತಹ ಹಿಂದುಳಿದ ಸಮುದಾಯದವರಿಗೆ ಸೂರು ನೀಡುವ ಜೊತೆಗೆ ಎಲ್ಲಾ ವರ್ಗದ ಸಮುದಾಯ ಭವನಗಳ ನಿರ್ಮಾಣಕ್ಕೆ ಸರ್ಕಾರದ ಅನುದಾನದ ಜೊತೆಗೆ, ವೈಯಕ್ತಿಕವಾಗಿ ಅನುದಾನ ನೀಡಿ ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಕಾರ್ಯಗಳಿಗೆ ಸಹಾಯ ಮಾಡುತ್ತಿರುವ ಜನನಾಯಕ ಸಾ.ರಾ.ಮಹೇಶ್ ಅವರನ್ನು 4ನೇ ಬಾರಿ ಆಯ್ಕೆ ಮಾಡಬೇಕಾಗಿ ಕೋರಿದರು.

ಎಲ್ಲಾ ಸಮೀಕ್ಷೆಗಳಲ್ಲೂ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂಬ ಮಾಹಿತಿ ಇದ್ದು, ಈ ಬಾರಿ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲಿದ್ದಾರೆ. ಕ್ಷೇತ್ರದ ಶಾಸಕ ಸಾ.ರಾ. ಮಹೇಶ್ ಮತ್ತೊಮ್ಮೆ ಸಚಿವರಾಗಲಿದ್ದು, ತಾಲೂಕಿನಲ್ಲಿ ಅಭಿವೃದ್ಧಿಯ ಹೊಳೆ ಹರಿಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಡಿವಾಳ ಸಮುದಾಯದ ಜೆಡಿಎಸ್ ಜಿಲ್ಲಾಧ್ಯಕ್ಷೆ ಎಂ.ಡಿ.ದಾಕ್ಷಾಯಿಣಿ, ಸಾಲಿಗ್ರಾಮ ಮಡಿವಾಳ ಸಮಾಜದ ಅಧ್ಯಕ್ಷ ಉಮೇಶ್, ಪ್ರಧಾನ ಕಾರ್ಯದರ್ಶಿ ಭೇರ್ಯ ಹರೀಶ್, ಗೌರವಾಧ್ಯಕ್ಷ ಬೈರಾಜ್, ಉಪಾಧ್ಯಕ್ಷ ಡಿ.ಕೆ.ಮಹದೇವ್, ಮುಖಂಡ ನಂಜಪ್ಪ ಸೇರಿದಂತೆ ಇನ್ನಿತರರಿದ್ದರು.

ರಾವಂದೂರಲ್ಲಿ ವಿಜಯಶಂಕರ್ ಮತಯಾಚನೆ



ರಾವಂದೂರು, ಮೇ 6– ತಾಲೂಕಿನ ರೈತರ ಹಾಗೂ ತಂಬಾಕು ಬೆಳೆಗಾರರ ಹಿತ ಕಾಯಲು ಶ್ರಮಿಸುವುದಾಗಿ ಬಿಜೆಪಿ ಅಭ್ಯರ್ಥಿ ಸಿ.ಹೆಚ್.ವಿಜಯಶಂಕರ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಗ್ರಾಮದಲ್ಲಿ ಮತಯಾಚಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಇದುವರೆಗೂ ಆಡಳಿತ ನಡೆಸಿದ ಪಕ್ಷಗಳು ರೈತರ ಪರ ಕಾಳಜಿ ವಹಿಸದೇ ದುರಾಡಳಿತ ನಡೆಸಿ ಅಭಿವೃದ್ಧಿ ಕುಂಠಿತಗೊಳಿಸುವ ಮೂಲಕ ಐಷಾರಾಮಿ ಜೀವನ ನಡೆಸಿಕೊಂಡು ಬಂದಿದ್ದಾರೆ. ಇನ್ನಾದರೂ ರೈತರ ಪರ ಚಿಂತಿಸುವ ಬಿಜೆಪಿ ಸರ್ಕಾರಕ್ಕೆ ಬೆಂಬಲ ನೀಡಿ ಎಂದು ಮನವಿ ಮಾಡಿದರು. ಈ ಎರಡೂ ಪಕ್ಷಗಳಿಗೂ ಈಗಾಗಲೇ ಅಧಿಕಾರ ಕೊಟ್ಟು ನೋಡಿದ್ದೀರಿ. ಈ ಬಾರಿ ನನಗೊಂದು ಅವಕಾಶ ನೀಡಿ. ನೀವು ಹಾಕುವ ಮತದ ಋಣ ಇಟ್ಟುಕೊಳ್ಳುವುದಿಲ್ಲ. ಬದಲಿಗೆ ಹಗಲು ರಾತ್ರಿ ದುಡಿದು ನಿಮ್ಮ ಋಣ ತೀರಿಸುತ್ತೇನೆ ಎಂದರು.

ಬಿಜೆಪಿ ಮುಖಂಡ ಆರ್.ಟಿ.ಸತೀಶ್ ಮಾತನಾಡಿದರು. ಬಿಜೆಪಿ ತಾಲೂಕು ಅಧ್ಯಕ್ಷ ಎಂ.ಎಂ. ರಾಜೇಗೌಡ, ಸೋಮಶೇಖರ್, ಆರ್.ಟಿ.ಸತೀಶ್, ವೀರಯ್ಯ, ಮೋಹನ್‌ಗೌಡ, ಪಿ.ಜೆ.ರವಿ, ಅಶೋಕ್, ಲೋಕೇಶ್, ಪ್ರಭಾಕರ್ ಆರಾಧ್ಯ ಅಭಿಲಾಷ್, ಸುಜೇಂದ್ರ ಸೇರಿದಂತೆ ಇತರರಿದ್ದರು.

ನಂ.ಗೂಡಿಗೆ ಪ್ರಧಾನಿ ಮೋದಿ ಭೇಟಿ ಹಿನ್ನೆಲೆ: ವಾಹನ ಸಂಚಾರ ಮಾರ್ಗ ಬದಲಾವಣೆ

ಮೈಸೂರು, ಮೇ 6(ಎಂಕೆ)– ನಂಜನಗೂಡಿಗೆ ಪ್ರಧಾನಿ ನರೇಂದ್ರ ಮೋದಿ ಆಗಮನ ಹಿನ್ನೆಲೆಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಮಾರ್ಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿದೆ. ಬೆಳಗ್ಗೆ 8 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಚಾಮರಾಜನಗರದಿಂದ ನಂಜನಗೂಡು ಮಾರ್ಗವಾಗಿ ಮೈಸೂರಿಗೆ ತೆರಳುವ ವಾಹನಗಳು ಚಾಮರಾಜನಗರದಿಂದ–ಗೋಳೂರು–ಸುತ್ತೂರು ಮಾರ್ಗವಾಗಿ ಮೈಸೂರಿಗೆ ತೆರಳಲು ಸೂಚಿಸಲಾಗಿದೆ. ಹಾಗೆಯೇ ಟಿ.ನರಸೀಪುರದಿಂದ ನಂಜನಗೂಡು ಮಾರ್ಗವಾಗಿ ಮೈಸೂರಿಗೆ ಸಂಚರಿಸುವ ವಾಹನಗಳು ಟಿ.ನರಸೀಪುರ–ಬಿಳಿಗೆರೆ–ಸುತ್ತೂರು ಮಾರ್ಗವಾಗಿ ಮೈಸೂರಿಗೆ ತಲುಪಬಹುದು.

ಹುಲ್ಲಹಳ್ಳಿ ನಂಜನಗೂಡು ಮಾರ್ಗವಾಗಿ ಮೈಸೂರಿಗೆ ತೆರಳುವ ವಾಹನಗಳು ಹುಲ್ಲಹಳ್ಳಿ–ರಾಂಪುರ–ಉದ್ಬೂರು ಮಾರ್ಗವಾಗಿ ಮೈಸೂರು ನಗರ ಪ್ರವೇಶಿಸುವಂತೆ ಸೂಚಿಸಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆದೇಶ ಹೊರಡಿಸಿದ್ದಾರೆ.

ಕೋಟೆ ಜನತೆ ಬಿಜೆಪಿ, ಜೆಡಿಎಸ್ ತಿರಸ್ಕರಿಸಿ ‘ಕೈ’ ಹಿಡಿಯಲಿದ್ದಾರೆ

ಶಾಸಕ ಅನಿಲ್ ಚಿಕ್ಕಮಾದು ವಿಶ್ವಾಸ



ಹೆಚ್.ಡಿ.ಕೋಟೆ, ಮೇ 6– ಚುನಾವಣೆಯಲ್ಲಿ ಕ್ಷೇತ್ರದ ಪ್ರಜ್ಞಾವಂತ ಮತದಾರರು ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳನ್ನು ತಿರಸ್ಕರಿಸುವ ಮೂಲಕ ಕಾಂಗ್ರೆಸ್ ಅಭ್ಯರ್ಥಿಯಾದ ನನ್ನನ್ನು ಮರು ಆಯ್ಕೆ ಮಾಡಲಿದ್ದಾರೆ ಎಂದು ಶಾಸಕ ಅನಿಲ್ ಚಿಕ್ಕಮಾದು ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಅಣ್ಣೂರು, ಪಡುಕೋಟೆ, ಭೀಮನಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ರಾಜ್ಯ ಮತ್ತು ಕೇಂದ್ರದ ಬಿಜೆಪಿ ಸರ್ಕಾರದ ದುರಾಡಳಿತದಿಂದ ಬೇಸತ್ತಿರುವ ಜನರು ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರೆ. ರಾಜ್ಯದಲ್ಲಿ ಅಸ್ತಿತ್ವ ಕಳೆದುಕೊಂಡಿರುವ ಜೆಡಿಎಸ್ ಪಕ್ಷ ಸ್ವತಂತ್ರವಾಗಿ ಸರ್ಕಾರ ರಚಿಸಲು ಸಾಧ್ಯವಿಲ್ಲ. ಆದರೆ ಸುಭದ್ರ ಸರ್ಕಾರ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದು ಜನರು ತೀರ್ಮಾನಿಸಿದ್ದಾರೆ ಎಂದರು.

ನನ್ನ ಅಧಿಕಾರವಧಿಯಲ್ಲಿ ಒಂದೂವರೆ ಸಾವಿರ ಕೋಟಿ ರೂ. ಅನುದಾನ ಕೋಟೆ, ಸರಗೂರು ತಾಲೂಕುಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಕ್ಷೇತ್ರ ಭೌಗೋಳಿಕವಾಗಿ ವಿಸ್ತೀರ್ಣದಲ್ಲಿ ದೊಡ್ಡದಿದ್ದು, ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಸಾಲುತ್ತಿಲ್ಲ. ನನ್ನ ನಿರಂತರ ಹೋರಾಟದಿಂದ ಬಿಜೆಪಿ ಸರ್ಕಾರದ ಸಚಿವರ ಜೊತೆ ಸಮನ್ವಯ ಕಾಯ್ದುಕೊಂಡು ಹಣ ಬಿಡುಗಡೆ ಮಾಡಿಸಿದ್ದೇನೆ. ತಾಲೂಕಿನ ಬಹುತೇಕ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಬೀದಿಗಳಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಸೇರಿದಂತೆ ಮೂಲಭೂತ ಸೌಕರ್ಯ ಕಲ್ಪಿಸಿ ಮಾದರಿ ಗ್ರಾಮಗಳನ್ನಾಗಿ ಮಾಡಲಾಗಿದೆ ಎಂದರು.

ತಾಲೂಕಿನ ಅರಣ್ಯದಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಡೆಯಲು ತಡೆಗೋಡೆ, ಆನೆ ಕಂದಕ, ಸೋಲಾರ್ ಬೇಲಿ ಸೇರಿದಂತೆ ನನ್ನ ಅಧಿಕಾರವಧಿಯಲ್ಲಿ 200 ಕಿಮೀನಷ್ಟು ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಮೂಲಕ ಕಾಡಾನೆ ಉಪಟಳ ತಪ್ಪಿಸಲು ಹಲವಾರು ಕ್ರಮಗಳನ್ನು ಕೈಗೊಂಡು ತಾಲೂಕಿನ ರೈತರ ಪರ ಕೆಲಸ ಮಾಡಿದ್ದೇನೆ. ರೈತರ ಸಮಸ್ಯೆ ಸೇರಿದಂತೆ ತಾಲೂಕಿನ ಹೆಚ್ಚಿನ ಅಭಿವೃದ್ಧಿಗಾಗಿ ಮತ್ತೊಮ್ಮೆ ನನಗೆ ತಾಲೂಕಿನ ಜನರು ಆಶೀರ್ವಾದ ಮಾಡಬೇಕು ಎಂದರು.

ವಿರೋಧ ಪಕ್ಷದವರು ನನ್ನ ಅವಧಿಯಲ್ಲಿ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗಿಲ್ಲ ಎಂದು ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ನನ್ನ ಹಾಗೂ ನಮ್ಮ ತಂದೆಯವರ ಅವಧಿಯಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಈಗಾಗಲೇ ಸುದ್ದಿಗೋಷ್ಠಿ ನಡೆಸಿ ದಾಖಲೆ ಸಮೇತ ಸಂಪೂರ್ಣ ವಿವರ ನೀಡಿದ್ದೇನೆ. ಈ ಬಗ್ಗೆ ಜನರೇ ತೀರ್ಮಾನಿಸುತ್ತಾರೆ. ನಾನು ವಿರೋಧ ಪಕ್ಷದವರಿಗೆ ಉತ್ತರಿಸುವ ಅಗತ್ಯ ಇಲ್ಲ ಎಂದು ತಿಳಿಸಿದರು.

ತಾಲೂಕಿನ ಜನತೆ ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳನ್ನು ತಿರಸ್ಕರಿಸುವ ಮೂಲಕ ಕಾಂಗ್ರೆಸ್ ಬೆಂಬಲಿಸಿ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಕೈಜೋಡಿಸಿ ನನ್ನನ್ನು ಮರು ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಶಾಸಕರು ಮಹೇಶ್ವರ ಗಿರಿಜನ ಕಾಲೋನಿ, ಭೀಮನಹಳ್ಳಿ ಗಿರಿಜನ ಕಾಲೋನಿ, ಕುಂಟೇರಿ ಹಾಡಿ, ಭೀಮನಹಳ್ಳಿ, ಮಾಸ್ತಿ ಗುಡಿ, ಕೈಲಾಸಪುರ, ಮುಸ್ಕೆರೆ, ವಿಶ್ವಕರ್ಮ ಕಾಲೋನಿ, ರಾಜೇಗೌಡನಹುಂಡಿ, ಎಲೆ ಹುಂಡಿ, ಚಿಕ್ಕ ಕಾಳೇಗೌಡನಪುರ, ಅಣ್ಣೂರು ಹಾಡಿ, ಅಣ್ಣೂರು, ಬುಕುತನಮಾಳ, ಹೊಸಳ್ಳಿ, ನಂಜನಾಯಕನಹಳ್ಳಿ, ಬಸವರಾಜ ಕಟ್ಟ ಹಾಡಿ, ಕೆಂಡತೊರೆ ಪಾಳ್ಯ, ಕೆಂಡತೊರೆ, ಟೈಗರ್ ಬ್ಲಾಕ್, ಬೋಚಿ ಕಟ್ಟೆ, ಕೆ.ಜಿಹುಂಡಿ, ಮಹದೇವಪುರ, ಬೂದನೂರು, ನಂಜಯ್ಯನಶೆಡ್ಡು, ಬೊಮ್ಮಲಾಪುರ, ಚಕೋಡನಹಳ್ಳಿ, ಬೂದನೂರು, ಸೋನಳ್ಳಿ ಹಾಡಿ, ಬಸವರಾಜನ ಮಂಟಿ ಹಾಡಿ ಮೇಟಿಕುಪ್ಪೆ, ಮೇಟಿಕುಪ್ಪೆ ಹಾಡಿ, ಸಿದ್ದಾಪುರ, ಅಗಸನ ಹುಂಡಿ, ಕಲ್ಲಟ್ಟಿ, ಸೊಳ್ಳೆಪುರ, ಜಿ.ಎಂ.ಹಳ್ಳಿ ಹಾಡಿ, ಜಿ.ಎಂ.ಹಳ್ಳಿ, ಅಗಸನಹುಂಡಿ ಸೇರಿದಂತೆ ವಿವಿಧ ಗ್ರಾಮಗಳಿಗೆ ತೆರಳಿ ಮತಯಾಚಿಸಿದರು.

ಈ ವೇಳೆ ಮಾಜಿ ಜಿಪಂ ಸದಸ್ಯರಾದ ಬಿ.ವಿ.ಬಸವರಾಜು, ಹೆಚ್.ಸಿ.ಮಂಜುನಾಥ್, ಮೈಮುಲ್ ನಿರ್ದೇಶಕ ಈರೇಗೌಡ, ಪುರಸಭಾ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ, ಮುಖಂಡರಾದ ಸತೀಶ್ ಗೌಡ, ರಾಜೇಗೌಡ, ಪರಶಿವಮೂರ್ತಿ, ಆದಿವಾಸಿ ಮುಖಂಡ ಚಿಕ್ಕಣ್ಣ, ಮಲ್ಲೇಶ್ ಇದ್ದರು.

> ನನ್ನ ತಂದೆ, ಮಾಜಿ ಶಾಸಕ ದಿ.ಚಿಕ್ಕಮಾದು ಅವರ ಹಾದಿಯಲ್ಲಿ ಹಾಗೂ ನನ್ನ ರಾಜಕೀಯ ಗುರು ಕೆಪಿಸಿಸಿ ಕಾರ್ಯಾಧ್ಯಕ್ಷ ದಿ.ಧ್ರುವನಾರಾಯಣ್ ಅವರ ಮಾರ್ಗದರ್ಶನದಲ್ಲಿ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. 55 ಕೋಟಿ ವೆಚ್ಚದಲ್ಲಿ ಹ್ಯಾಂಡ್‌ಪೋಸ್ಟ್‌ನಿಂದ ಕಬಿನಿ ಜಲಾಶಯಕ್ಕೆ ಕಾಂಕ್ರೀಟ್ ರಸ್ತೆ ಕಾಮಗಾರಿ, ಜಲಾಶಯದ ಮುಂಭಾಗ ನೂತನ ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಇನ್ನೇನು ಮುಗಿಯುವ ಹಂತದಲ್ಲಿದೆ. ಜಲಾಶಯದ ಮುಂಭಾಗ ಉದ್ಯಾನವನ ನಿರ್ಮಿಸಲು ಪ್ರಸ್ತಾವನೆ ಕಳುಹಿಸಲಾಗಿದೆ. ತಾಲೂಕಿನ ಜನತೆ ನನ್ನನ್ನು ಆಶೀರ್ವದಿಸಿ. ಇನ್ನು ಹಲವು ಅಭಿವೃದ್ಧಿ ಕಾರ್ಯ ಮಾಡಲು ಕನಸು ಕಟ್ಟಿಕೊಂಡಿದ್ದೇನೆ ಇದಕ್ಕೆ ತಾಲೂಕಿನ ಜನತೆ ಸಹಕರಿಸುತ್ತಾರೆ ಎಂಬ ನಂಬಿಕೆ ನನಗಿದೆ.
> -ಅನಿಲ್ ಚಿಕ್ಕಮಾದು, ಶಾಸಕ.



ಬೆಟ್ಟದಪುರ ಸಮೀಪದ ಚಪ್ಪರದಹಳ್ಳಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜೆಡಿಎಸ್ ಅಭ್ಯರ್ಥಿ, ಶಾಸಕ ಕೆ.ಮಹದೇವ ಅವರು ರೋಡ್ ಶೋ ನಡೆಸಿ ಮತಯಾಚಿಸಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಗ್ರಾಪಂ ಅಧ್ಯಕ್ಷ ಧರಣೇಶ್, ಮಾಜಿ ಗ್ರಾಪಂ ಅಧ್ಯಕ್ಷರಾದ ವೆಂಕಟೇಶ್, ಸುರೇಶ್, ದೇವೇಗೌಡ, ಮುಖಂಡರಾದ ಕಾಳೇಗೌಡ, ಸಂಜೀವ್‌ಗೌಡ, ಯುವ ಮುಖಂಡ ಕುಶಲ್ ಸೇರಿದಂತೆ ಇನ್ನಿತರರಿದ್ದರು.

ಬೆಂಗಳೂರಲ್ಲಿ ಮೋದಿ ಬೃಹತ್ ರೋಡ್ ಶೋ

26 ಕಿ.ಮೀ. ಉದ್ದಕ್ಕೂ ಇಕ್ಕೆಲಗಳಲ್ಲಿ ನೆರೆದಿದ್ದ ಜನಸಾಗರ



ಬೆಂಗಳೂರು, ಮೇ 6– ಕರ್ನಾಟಕ ವಿಧಾನಸಭೆ ಚುನಾವಣೆಯ ಮತದಾನ ಮೇ 10ರಂದು ನಡೆಯಲಿದೆ. ಮೇ 8ರಂದು ಬಹಿರಂಗ ಪ್ರಚಾರ ಅಂತ್ಯಗೊಳ್ಳಲಿದೆ. ಇದಕ್ಕೂ ಮೊದಲು ಶನಿವಾರ ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿನಲ್ಲಿ ಬೃಹತ್ ರೋಡ್ ಶೋ ನಡೆಸಿದ್ದಾರೆ.

ರಾಜಧಾನಿಯಲ್ಲಿ 26 ಕಿಲೋಮೀಟರ್ ರೋಡ್ ಶೋನಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಬಿಜೆಪಿ ಬಾವುಟ ಹಿಡಿದು ನೆರೆದಿದ್ದ ಜನರು, ಪ್ರಧಾನಿ ನರೇಂದ್ರ ಮೋದಿಯವರನ್ನು ನೋಡುತ್ತಲೇ ಜಯಘೋಷ ಮೊಳಗಿಸಿದರು. ರಾಜ್ಯದಲ್ಲಿ ಸ್ಪಷ್ಟ ಬಹುಮತ ಪಡೆದು ಸರ್ಕಾರ ರಚನೆ ಮಾಡಲು ಬೆಂಗಳೂರು ನಗರದಲ್ಲಿ ಹೆಚ್ಚು ಸ್ಥಾನ ಗೆಲ್ಲುವುದು ಮುಖ್ಯ ಎಂಬುದು ಬಿಜೆಪಿಗೆ ತಿಳಿದಿದೆ. ಇದೇ ಕಾರಣಕ್ಕೆ ಚುನಾವಣಾ ಪ್ರಚಾರದ ಅಂತಿಮ ಹಂತದಲ್ಲಿ ಪ್ರಧಾನಿ ಮೋದಿ ಬೆಂಗಳೂರಿನಲ್ಲಿ ಮತಯಾಚನೆ ಮಾಡುತ್ತಿದ್ದಾರೆ.

ಬೆಂಗಳೂರಿನಲ್ಲಿ ವಲಸಿಗರು, ಯುವ ಮತದಾರರ ಸಂಖ್ಯೆ ಹೆಚ್ಚು. ಆದ್ದರಿಂದ ನಗರದಲ್ಲಿ ಚುನಾವಣಾ ಪ್ರಚಾರ ಮಾಡಲು ಸಹ ಅವರು ಒಪ್ಪಿಗೆ ನೀಡಿದ್ದರು. ಶನಿವಾರ ಸುಮಾರು 26 ಕಿ. ಮೀ. ಬೃಹತ್ ರೋಡ್ ಶೋ ಮುಕ್ತಾಯಗೊಂಡಿದೆ. ಭಾನುವಾರ ನಗರದಲ್ಲಿ ಮತ್ತೊಂದು ರೋಡ್ ಶೋ ನಡೆಯಲಿದೆ.

ಬೆಂಗಳೂರು ನಗರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಪೈಪೋಟಿ ನಡೆದಿದೆ. 2018ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ವಿಫಲವಾಯಿತು. ಆದರೆ ಪಕ್ಷ ಬೆಂಗಳೂರು ನಗರದ 28ರಲ್ಲಿ 15 ಸೀಟು ಗೆದ್ದಿತು. 2013ರಲ್ಲಿ 13 ಮತ್ತು 2008ರಲ್ಲಿ 10 ಸ್ಥಾನದಲ್ಲಿ ಕಾಂಗ್ರೆಸ್ ಗೆದ್ದಿದೆ. 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಕರ್ನಾಟಕದಲ್ಲಿ 25 ಸೀಟುಗಳಲ್ಲಿ ಗೆದ್ದಿದೆ. ಇದೇ ರೀತಿಯ ಸಾಧನೆಯನ್ನು ಈ ಚುನಾವಣೆಯಲ್ಲಿ ಬೆಂಗಳೂರು ನಗರದಲ್ಲಿ ಮಾಡಲು ಮುಂದಾಗಿದೆ. ಅದಕ್ಕಾಗಿಯೇ ನರೇಂದ್ರ ಮೋದಿ ನಗರದಲ್ಲಿ ಅಬ್ಬರದ ಪ್ರಚಾರ ಮಾಡಿದ್ದಾರೆ. 2018ರಲ್ಲಿ ಬಿಜೆಪಿ ಬೆಂಗಳೂರಿನಲ್ಲಿ ಹೆಚ್ಚು ಸ್ಥಾನಗಳಿಸಲಿಲ್ಲ. ಆದರೆ ಸುಮಾರು 13 ಸೀಟುಗಳಲ್ಲಿ ಶೇ 13ರಷ್ಟು ಮತಗಳಿಂದ 2ನೇ ಸ್ಥಾನ ಪಡೆಯಿತು. ನಗರದಲ್ಲಿ ನಿರ್ಧರಿತವಾಗದ ಹಲವು ಮತಗಳಿವೆ. ಅವು ಕೊನೆಯ ಕ್ಷಣದ ತನಕ ಯಾರ ಜೇಬು ಸೇರಲಿವೆ ಎಂಬುದು ಕುತೂಹಲ. ಆದ್ದರಿಂದ ಮೋದಿ ಪ್ರಚಾರ ಬಿಜೆಪಿಗೆ ಸಹಾಯಕವಾಗಬಹುದು ಎಂದು ರೋಡ್ ಶೋ ನಡೆಸಲಾಗುತ್ತಿದೆ.

2013ರಲ್ಲಿ ಕಾಂಗ್ರೆಸ್ ಸರ್ಕಾರ ರಚನೆಗೊಂಡಾಗ ಹಲವು ಸಚಿವರು ಬೆಂಗಳೂರು ನಗರದವರೇ ಆಗಿದ್ದರು. ಈ ಬಾರಿಯೂ ಸಹ ಬಿಜೆಪಿ ನಗರದ ಸಚಿವರಿಗೆ ನಿಮ್ಮ ಕ್ಷೇತ್ರದ ಜೊತೆ ಅಕ್ಕಪಕ್ಕದ ಕ್ಷೇತ್ರವನ್ನು ಗೆಲ್ಲಿಸಿಕೊಂಡು ಬರಬೇಕು ಎಂದು ಟಾಸ್ಕ್ ನೀಡಿದೆ. 'ಈ ಬಾರಿಯ ನಿರ್ಧಾರ ಸ್ಪಷ್ಟ ಬಹುಮತದ ಬಿಜೆಪಿ ಸರ್ಕಾರ' ಎಂದು ಮೋದಿ ರಾಜ್ಯದಲ್ಲಿ ಪ್ರಚಾರ ನಡೆಸುತ್ತಿದ್ದಾರೆ. ಆ ಮೂಲಕ ಬಿಜೆಪಿಗೆ ಬಹುಮತ ನೀಡಿ ಎಂದು ಜನರಲ್ಲಿ ಕೇಳುತ್ತಿದ್ದಾರೆ. ರಾಜ್ಯದಲ್ಲಿ ಅಧಿಕಾರ ಹಿಡಿಯಬೇಕಾದರೆ 28 ಕ್ಷೇತ್ರವಿರುವ ಬೆಂಗಳೂರು ಮತ್ತು 18 ಕ್ಷೇತ್ರವಿರುವ ಬೆಳಗಾವಿಯಲ್ಲಿ ಹೆಚ್ಚು ಸ್ಥಾನಗಳನ್ನು ಗಳಿಸುವುದು ಯಾವುದೇ ಪಕ್ಷಕ್ಕೆ ಸಹ ಅನಿವಾರ್ಯವಾಗಿದೆ.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಲ್ಲಹಳ್ಳಿ ಗ್ರಾಮದ ಹಾಲುಮತ ಸಮುದಾಯದ ಮಹದೇವಣ್ಣ, ಸಣ್ಣೇಗೌಡ, ಸತ್ತಿಗೆಗೌಡ, ರವಿ, ಮರೀಗೌಡ, ರವಿಕುಮಾರ್, ಅನಿಲ್‌ಕುಮಾರ್, ಶಿವನಾಗ, ಉಮೇಶ್ ಹಾಗೂ ಇನ್ನಿತರರು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಜಯಪುರ ಗ್ರಾಮ ಪಂಚಾಯತ್ ಸದಸ್ಯರಾದ ಕೆಲ್ಲಹಳ್ಳಿ ಭೈರೇಶ್, ಮಂಜುನಾಥ್, ವಿಜಯಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

PUBLIC NOTICE

NOTICE is hereby given to the general public that our client Mr. Shivakumar, S/o Late Venkatachala, residing at #1100, CH-6, Devaparthiva road, Near RTO, Chamarajapuram, Mysuru 570004 intending to purchase the below mentioned schedule property from its owner Kum.S.Preethi, D/o C. Srinivasan, residing at #1567, Vishwamanava 'B' Cross, Near Engineers Club, Ramakrishna nagar, Mysuru-570022.

All person/s having any claim against or in respect of the schedule property mentioned hereunder are any part thereof by way of sale, exchange, gift, mortgage (equitable / registered or otherwise), Trust, in heritance, family arrangement, maintenance, bequest, partnership, possession, lease, sub-lease, tenancy, license, lien, charge, pledge, easement or otherwise howsoever are hereby requested to notify the same in writing to us with supporting documentary evidence at the address mentioned hereunder within 7 working days from the date hereon, failing which the claim/s, if any, of such person/s will be considered to have been waived and or abandoned and our client shall proceed to purchase the schedule property.

SCHEDULE PROPERTY

All that piece and parcel of the Landed property bearing Survey no.70/1 (old Number) 70/3 (New Number), measuring 2Acres 00 Guntas situated at Lingambhudi Village, Kasaba Hobli, Mysuru Taluk, bounded on
East : By Sy.no.71/2 West : By Sy. no.67/1 & 67/2,
North : Sy.no.70/4, South By : Sy. no.70/1

Date : 07/05/2023
Place : Mysuru

Sd/-
PRABHU ASSOCIATES
H.P. DARSHAN SHETTY
H.P. GAGAN SHETTY
No. 1533, N.T. Street,
K.R. Mohalla, Agrahara,
Mysuru - 570 024
Mobile No. 9590807007

PUBLIC NOTICE

NOTICE is hereby given to the general public that our client Mr. Shivakumar, S/o Late Venkatachala, residing at #1100, CH-6, Devaparthiva road, Near RTO, Chamarajapuram, Mysuru 570004 intending to purchase the below mentioned schedule property from its owner C.Srinivasan, S/o Lt T.Chennaiah, residing at #1567, Vishwamanava 'B' Cross, Near Engineers Club, Ramakrishna nagar, Mysuru-570022.

All person/s having any claim against or in respect of the schedule property mentioned hereunder are any part thereof by way of sale, exchange, gift, mortgage (equitable / registered or otherwise), Trust, in heritance, family arrangement, maintenance, bequest, partnership, possession, lease, sub-lease, tenancy, license, lien, charge, pledge, easement or otherwise howsoever are hereby requested to notify the same in writing to us with supporting documentary evidence at the address mentioned hereunder within 7working days from the date hereon, failing which the claim/s, if any, of such person/s will be considered to have been waived and or abandoned and our client shall proceed to purchase the schedule property.

SCHEDULE PROPERTY

All that piece and parcel of the Landed property bearing Survey no.71/2, measuring 20Guntas situated at Lingambhudi Village, Kasaba Hobli, Mysuru Taluk, bounded on
East-By Sy.no.71/1,
West- By Sy.no.70,
North -By Remaining portion of Sy. no.71/2(Block-1),
South By Remaining portion of Sy. no.71/2(Block-3)

Date : 07/05/2023
Place : Mysuru

Sd/-
PRABHU ASSOCIATES
H.P. DARSHAN SHETTY
H.P. GAGAN SHETTY
No. 1533, N.T. Street,
K.R. Mohalla, Agrahara,
Mysuru - 570 024
Mobile No. 9590807007

PUBLIC NOTICE

NOTICE is hereby given to the general public that our client Mr. Shivakumar, S/o Late Venkatachala, residing at #1100, CH-6, Devaparthiva road, Near RTO, Chamarajapuram, Mysuru 570004 intending to purchase the below mentioned schedule property from its owner Kum. S. Madhushree, D/o C. Srinivasan, residing at #1567, Vishwamanava 'B' Cross, Near Engineers Club, Ramakrishna nagar, Mysuru-570022.

All person/s having any claim against or in respect of the schedule property mentioned hereunder are any part thereof by way of sale, exchange, gift, mortgage (equitable / registered or otherwise), Trust, in heritance, family arrangement, maintenance, bequest, partnership, possession, lease, sub-lease, tenancy, license, lien, charge, pledge, easement or otherwise howsoever are hereby requested to notify the same in writing to us with supporting documentary evidence at the address mentioned hereunder within 7 working days from the date hereon, failing which the claim/s, if any, of such person/s will be considered to have been waived and or abandoned and our client shall proceed to purchase the schedule property.

SCHEDULE PROPERTY

All that piece and parcel of the Landed bearing Sy. No. 67/2, measuring 2 acres, situated at Lingambudi Village, Kasaba Hobli, Mysuru Taluk, bounded on; East By : Sy. No. 70/3, West By : Sy.no. 66, North By : Sy. no. 67/1, South By : Sy. no. 67/3

Date : 07/05/2023
Place : Mysuru

Sd/-
PRABHU ASSOCIATES
H.P. DARSHAN SHETTY
H.P. GAGAN SHETTY
No. 1533, N.T. Street,
K.R. Mohalla, Agrahara,
Mysuru - 570 024
Mobile No. 9590807007

ಅನುಬಂಧ – 47
(ಅಧ್ಯಾಯ 5, ಪ್ಯಾರಾ 5.16.5))
ನಮೂನೆ ಸಿ–1 ಯಿಂದ ಸಿ–8 ಮತ್ತು ಸಿ ಎ
ನಮೂನೆ ಸಿ–1
(ಅಭ್ಯರ್ಥಿಯು ವೃತ್ತಪತ್ರಿಕೆಗಳು, ಟಿವಿಯಲ್ಲಿ ಪ್ರಕಟಿಸುವುದಕ್ಕಾಗಿ)

ಅಪರಾಧ ಪ್ರಕರಣಗಳ ಬಗ್ಗೆ ಘೋಷಣೆ:

(ಮಾನ್ಯ ಸರ್ವೋಚ್ಚ ನ್ಯಾಯಾಲಯವು, 2011ರ ಡಬ್ಲ್ಯೂಪಿ (ಸಿವಿಲ್) ಸಂ.536, ದಿನಾಂಕ: 25ನೇ ಸೆಪ್ಟೆಂಬರ್ 2018 (ಸಾರ್ವಜನಿಕ ಹಿತಾಸಕ್ತಿ ಪ್ರತಿಷ್ಠಾನ ಮತ್ತು ಇತರರು=ವಿರುದ್ಧ–ಭಾರತ ಒಕ್ಕೂಟ ಮತ್ತು ಇತರರು)ರಲ್ಲಿ ನೀಡಿದ ತೀರ್ಪಿಗೆ ಅನುಸಾರವಾಗಿ)

ಅಭ್ಯರ್ಥಿಯ ಹೆಸರು : ದರ್ಶನ್ ಧೃವನಾರಾಯಣ್
ಅಭ್ಯರ್ಥಿಯ ವಿಳಾಸ : ಹೆಗ್ಗದಾಡಿ ಗ್ರಾಮ, ಬೆಂಡರವಾಡಿ ಅಂಚೆ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ 571312
ರಾಜಕೀಯ ಪಕ್ಷದ ಹೆಸರು : ಭಾರತೀಯ ರಾಷ್ಟ್ರೀಯ ಕಾಂಗ್ರೆಸ್
ಚುನಾವಣೆಯ ಹೆಸರು : ಕರ್ನಾಟಕ ವಿಧಾನಸಭೆ
ಚುನಾವಣಾ ಕ್ಷೇತ್ರದ ಹೆಸರು : 214 ನಂಜನಗೂಡು ವಿಧಾನಸಭಾ ಕ್ಷೇತ್ರ

ಮೇಲೆ ಸೂಚಿಸಿರುವ ಚುನಾವಣೆಯ ಅಭ್ಯರ್ಥಿಯಾಗಿರುವ **ದರ್ಶನ್ ಧೃವನಾರಾಯಣ್** (ಅಭ್ಯರ್ಥಿಯ ಹೆಸರು) ನಾನು, ನನ್ನ ಅಪರಾಧಿಕ ಪೂರ್ವ ಇತಿಹಾಸದ ಬಗ್ಗೆ ಮುಂದಿನ ವಿವರಗಳನ್ನು ಸಾರ್ವಜನಿಕ ಮಾಹಿತಿಗಾಗಿ ಘೋಷಿಸುತ್ತೇನೆ.

(ಎ) ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳು

ಕ್ರ.ಸಂ.	ನ್ಯಾಯಾಲಯದ ಹೆಸರು	ಪ್ರಕರಣ ಸಂಖ್ಯೆ ಮತ್ತು ದಿನಾಂಕ	ಪ್ರಕರಣ (ಗಳ) ಸ್ಥಿತಿಗತಿ	ಸಂಬಂಧಪಟ್ಟ ಅಧಿನಿಯಮಗಳ ಪ್ರಕರಣ (ಗಳು) ಮತ್ತು ಅಪರಾಧ)(ಗಳ) ಸಂಕ್ಷಿಪ್ತ ವಿವರ
1	2ನೇ ಹೆಚ್ಚುವರಿ ಸಿಜೆ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ನಂಜನಗೂಡು	39/2023 171ಇ ಮತ್ತು 171 ಬಿ, ಐಪಿಸಿ	ತನಿಖಾ ಹಂತದಲ್ಲಿದೆ	ದೇಣಿಗೆ ಪಡೆದಿರುತ್ತಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಿದ್ದು ತನಿಖೆ ಹಂತದಲ್ಲಿದೆ

(ಬಿ) ಕ್ರಿಮಿನಲ್ ಅಪರಾಧಿಗಳಿಗಾಗಿ ನ್ಯಾಯನಿರ್ಣಿತವಾದ ಪ್ರಕರಣಗಳ ಕುರಿತಾದ ವಿವರಗಳು

ಕ್ರ.ಸಂ.	ನ್ಯಾಯಾಲಯದ ಹೆಸರು ಮತ್ತು ಆದೇಶ(ಗಳು) ದಿನಾಂಕ (ಗಳು)	ಅಪರಾಧ (ಗಳ) ವಿವರಣೆ ಮತ್ತು ವಿಧಿಸಲಾದ ದಂಡನೆ	ವಿಧಿಸಲಾದ ಗರಿಷ್ಠ ದಂಡನೆ
1	ಅನ್ವಯಿಸುವುದಿಲ್ಲ		

ಸಹಿ/– ದರ್ಶನ್ ಧೃವನಾರಾಯಣ್, ಕಾಂಗ್ರೆಸ್ ಅಭ್ಯರ್ಥಿ ನಂಜನಗೂಡು ವಿಧಾನಸಭಾ ಕ್ಷೇತ್ರ